ಸಂಪುಟ : 13 Volume | ಸಂಚಿಕೆ : 213 Issue | ಪುಟಗಳು : 08 Pages | ಬುಧವಾರ 08 ಅಕ್ಟೋಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಅವಧೂತ ವೆಂಕಟಾಚಲ ಸದ್ಗುರು
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

' ಪ್ರೀತಿ ಇದ್ದಲ್ಲ ನಂಬಿಕೆ ಇರಲೇ ಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲ ಪ್ರೀತಿ ಇದ್ದೇ ಇರುವುದು

2 ಮುಂದಿನ ವರ್ಷದ ಘೋಷಣೆ : ಸಿ.ಎಂ.
7 ಗ್ಯಾರಂಟಿ ಅನುಷ್ಠಾನ
8 ಅಕ್ಟೋಬರ್ 18 ರವರೆಗೆ ರಜೆ: ಪಾಟೀಲ

# ಅ.18 ರವರೆಗೆ ದಸರಾ ರಜೆ

### ವಿಶೇಷ ರಜೆ ದಿನದಲ್ಲಿ ರಜೆ ಅವಧಿ ಸರಿದೂಗಿಸಲು ಸರ್ಕಾರದ ಸೂಚನೆ

» * ಶನಿವಾರ ಅರ್ಧ ದಿನದ ಬದಲು ಪೂರ್ಣ ದಿನ ಪಠ್ಯ ಬೋಧನೆ ಮಾಡೋದು.

» * ಸರ್ಕಾರಿ ರಜೆ ಇರೋ ದಿನ ಪಠ್ಯ ಬೋಧನೆ ಮಾಡಿ ಸರಿದೂಗಿಸೋದು.

» * ಪಠ್ಯ ಬೋಧನೆ ತುಂಬಾ ಹಿಂದುಳಿದರೆ ಭಾನುವಾರವೂ ಸ್ಪೆಷಲ್ ಕ್ಲಾಸ್ ಮಾಡಿ ಪಠ್ಯ ಬೋಧನೆ ಮಾಡಬಹುದು.

» * ಪಠ್ಯ ಬೋಧನೆ ಮಾಡಲು ಶಾಲಾ ಅವಧಿ ಬದಲಾವಣೆ ಮಾಡಬಹುದು. ಈಗ ಶಾಲಾ ಅವಧಿ ಬೆಳಗ್ಗೆ 9:30 ಇಂದ ಸಂಜೆ 4 ಗಂಟೆಗೆ ಇದೆ. ಇದನ್ನ ಬದಲಾವಣೆ ಮಾಡಿಕೊಂಡು 8 ಗಂಟೆ ಅಥವಾ 8:30 ಕ್ಕೆ ಶಾಲೆಗಳು ನಡೆಸಬಹುದು.

ಅ.18 ರವರೆಗೆ ದಸರಾ ರಜೆ ವಿಸ್ತರಣೆ

ಬೆಂಗಳೂರು:ಅ.7: ಜಾತಿಗಣತಿ ಸಮೀಕ್ಷೆ ಹಿನ್ನೆಲೆಯಲ್ಲಿ ದಸರಾ ರಜೆಯನ್ನು ಅ.18ರ ವರೆಗೆ ವಿಸ್ತರಣೆ ಮಾಡಲು ಸರ್ಕಾರ ತೀರ್ಮಾನಿಸಿದೆ.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ದಿನಾಂಕ ವಿಸ್ತರಣೆ ಬಗ್ಗೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಸಲಾಯಿತು. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಸಭೆ ನಡೆಯಿತು. ಸಮೀಕ್ಷೆ ಹಿನ್ನೆಲೆ ರಾಜ್ಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ರಜೆ ನೀಡಲು ಸರ್ಕಾರ ನಿರ್ಧಾರ ಕೈಗೊಂಡಿದೆ.

ದಸರಾ ರಜೆಯಲ್ಲಿರುವ ಮಕ್ಕಳಿಗೆ ಹೆಚ್ಚುವರಿಯಾಗಿ ಇನ್ನೂ 10 ದಿನ ರಜೆ ಸಿಗಲಿದೆ. ಈ ಅವಧಿಯಲ್ಲಿ ಜಾತಿಗಣತಿ ಸರ್ವೇ ಮುಗಿಸಲು ಸರ್ಕಾರ ಯೋಜಿಸಿದೆ. ಖಾಸಗಿ ಶಾಲೆಗಳಿಗೆ ರಜೆ ಅನ್ವಯಿಸುವುದಿಲ್ಲ. ದ್ವಿತೀಯ ಪಿಯುಸಿ ಉಪನ್ಯಾಸಕರಿಗೆ ಸರ್ವೆಯಿಂದ ವಿನಾಯಿತಿ ನೀಡಲಾಗಿದೆ.

ದಸರಾ ಹಬ್ಬದ ವೇಳೆ ಗಣತಿಗೆ ಹಿನ್ನಡೆಯಾಗಿದೆ. ದಿನದ ಟಾರ್ಗೆಟ್ ರೀಚ್ ಆಗೋಕೆ ಸಾಧ್ಯ ಆಗಿಲ್ಲ. 11



ರಿಂದ 14 ಲಕ್ಷ ಮನೆಗಳ ಟಾರ್ಗೆಟ್ ಇತ್ತು. ಆಯುಧ ಪೂಜೆ ಮತ್ತು ವಿಜಯದಶಮಿ ವೇಳೆ ಗಣತಿ ಕುಂಠಿತವಾಗಿದೆ.

ಈವರೆಗೆ 1.15 ಕೋಟಿ ಮನೆಗಳ ಸಮೀಕ್ಷೆ ಆಗಿದೆ. ಇನ್ನೂ 30 ಲಕ್ಷ ಸಮೀಕ್ಷೆ ಬಾಕಿ ಇದೆ. ಅದಕ್ಕಾಗಿ ಸರ್ಕಾರ ಈ ತೀರ್ಮಾನ ಕೈಗೊಂಡಿ–ದೆ. ರಜೆಯ ದಿನಗಳನ್ನು ವಿಶೇಷ ತರಗತಿಗಳ ಮೂಲಕ ಸರಿದೂಗಿಸಲು ಸರ್ಕಾರ ಕ್ರಮಕೈಗೊಂಡಿದೆ.

ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಹಿಂದುಳಿದ ವರ್ಗಗಳ ಆಯೋಗ ಅಧ್ಯಕ್ಷರು, ಸಿಎಸ್ ಶಾಲಿನಿ ರಜನೀಶ್ ಸೇರಿ ಹಲವರು ಭಾಗಿಯಾಗಿದ್ದರು.

## ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳ ಸಾವು : ಸುಪ್ರೀಂಕೋರ್ಟ್‌ಗೆ ಪಿಐಎಲ್



ನವದೆಹಲಿ:ಅ.7: ಮಧ್ಯಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಪಿಐಎಲ್‌ನಲ್ಲಿ, ಕಲುಷಿತ ಕೆಮ್ಮಿನ ಸಿರಪ್ ತಯಾರಿಕೆ, ಪರೀಕ್ಷೆ ಮತ್ತು ವಿತರಣೆಯ ಬಗ್ಗೆ ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಈಗಾಗಲೇ ಕೆಮ್ಮಿನ ಸಿರಪ್ ಸೇವಿಸಿ 16 ಮಕ್ಕಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಪ್ರದೇಶದಲ್ಲಿ ಡಾ. ಪ್ರವೀಣ್ ಸೋನಿ ಅವರನ್ನು ಬಂಧಿಸಿ ಅಮಾನತುಗೊಳಿಸಲಾಗಿದೆ. ಕೆಮ್ಮಿನ ಸಿರಪ್ ತಯಾರಿಸಿದ ಕಂಪನಿಯ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಮುಖ್ಯಮಂತ್ರಿ ಡಾ. ಮೋಹನ್ ಯಾದವ್ ಕೂಡ ಈ ವಿಷಯದಲ್ಲಿ ಕಠಿಣ ಕ್ರಮ ಕೈಗೊಂಡಿದ್ದಾರೆ. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಾರೆ ಮತ್ತು ಔಷಧ ನಿಯಂತ್ರಕರನ್ನು ವರ್ಗಾಯಿಸಿದ್ದಾರೆ. ತನಿಖೆಗಾಗಿ ಪೊಲೀಸರು 12 ಸದಸ್ಯರ ವಿಶೇಷ ತನಿಖಾ ತಂಡವನ್ನು ಸಹ ರಚಿಸಿದೆ.

2ನೇ ಪುಟನೋಡಿ

## ಮುಖ್ಯ ಪೇದೆ ಮನೆ ಕಳವು

ಕಲಬುರಗಿ,ಅ.7:ನಗರ ಹೊರವಲಯದ ತಾಜಸುಲ್ತಾನಪುರದಲ್ಲಿರುವ ಕೆಎಸ್‌ಆರ್‌ಪಿ ಕ್ವಾರ್ಟರ್ಸ್‌ನಲ್ಲಿನ ಹೆಡ್ ಕಾನ್‌ಸ್ಟೇಬಲ್ ಅವರ ಮನೆ ಮನೆ ಬೀಗ ಮುರಿದು 74 ಸಾವಿರ ರೂ.ಮೌಲ್ಯದ 9 ಗ್ರಾಂ.ಬಂಗಾರದ ಕಿವಿಯೋಲೆ, 26 ಸಾವಿರ ರೂ.ಮೌಲ್ಯದ 3 ಗ್ರಾಂ.ಬಂಗಾರದ ಕಿವಿಯೋಲೆ ಸೇರಿ 1 ಲಕ್ಷ ರೂ.ಮೌಲ್ಯದ 12 ಗ್ರಾಂ.ಚಿನ್ನಾಭರಣ ಕಳವು ಮಾಡಲಾಗಿದೆ.

ಸದ್ಯ ಬೆಂಗಳೂರಿನಲ್ಲಿ ಕೆಎಸ್‌ಆರ್‌ಪಿ ಪಡೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಆಗಿ ಸೇವೆ ಸಲ್ಲಿಸುತ್ತಿರುವ ಮಹಾಂತೇಶ ಪವಾರ್ ಎಂಬುವವರ ವಸತಿ ಗೃಹದ ಬೀಗ ಮುರಿದು ಚಿನ್ನಾಭರಣ ದೋಚಿಕೊಂಡು ಹೋಗಲಾಗಿದೆ.

ಇವರು ತಿರುಪತಿಗೆ ಹೋಗಲೆಂದು ಬೆಂಗಳೂರಿನಿಂದ ತಾಜ್ ಸುಲ್ತಾನಪುರಕ್ಕೆ ಆಗಮಿಸಿ ಕುಟುಂಬ ಸಮೇತ ತಿರುಪತಿ ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದಿದ್ದಾರೆ. ಆ ನಂತರ ಸುರಪುರ ತಾಲ್ಲೂಕಿನಲ್ಲಿರುವ ತಮ್ಮ ಊರಾದ ಗಡ್ಡದ ತಾಂಡಾಕ್ಕೆ ತೆರಳಿದ್ದಾರೆ. ಮರಳಿ ತಾಜ್ ಸುಲ್ತಾನಪುರದಲ್ಲಿರುವ ವಸತಿ ಗೃಹಕ್ಕೆ ಬಂದು ನೋಡಿದಾಗ ಮನೆ ಕಳವಾಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಅವರು ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

## ಸಿಜೆಐಗೆ ಅಪಮಾನ ಯತ್ನ ಬಿವೈವಿ ಖಂಡನೆ



ಬೆಂಗಳೂರು,ಅ.7:ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಬಿ.ಆರ್.ಗವಾಯಿ ರವರನ್ನು ಅಪಮಾನಿಸಲು ಯತ್ನಿಸಿರುವ ಘಟನೆ ಅತ್ಯಂತ ಖಂಡನೀಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಈ ಘಟನೆ ಸಂವಿಧಾನದ ಸಾರ್ವಭೌಮತ್ವವನ್ನು ಅಪಮಾನಿಸಲು ಯತ್ನಿಸಿದ ನೀಚಹಾಗೂ ಅನಾಗರಿಕ ವರ್ತನೆಯಾಗಿದ್ದು, ಕೃತ್ಯವೆಸಗಿದ ವಕೀಲನ ವರ್ತನೆ ಯಾರೂ ಕ್ಷಮಿಸಲಾರದ ದುಷ್ಕೃತ್ಯವಾಗಿದೆ ಎಂದಿದ್ದಾರೆ. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಪಮಾನಿಸುವ ಹಾಗೂ ಅಗೌರವ ತೋರುವ ವರ್ತನೆ ಮತ್ತು ಕೃತ್ಯಗಳು ವಿದ್ರೋಹಿತನದ ಪರಮಾವಧಿಯಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.


## ರಾಯಚೂರಿನಲ್ಲಿ ನಿಲ್ಲದ ಮನೆಗಳ್ಳರ ಹಾವಳಿ

ರಾಯಚೂರು:ಅ.7: ಬಿಸಿಲನಾಡು ರಾಯಚೂರು ಜಿಲ್ಲೆಯಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದೆ. ಬೇರೆ ಬೇರೆ ಗ್ಯಾಂಗ್‌ಗಳು ಆಕ್ಟಿವ್ ಆಗಿದ್ದು, ಸಿಸಿಟಿವಿಯಲ್ಲಿ ಕಳ್ಳರ ಚಲನವಲನ ಕಂಡು ಜನರು ಬೆಚ್ಚಿಬಿದ್ದಿದ್ದಾರೆ.

ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಮನೆಗಳಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸಿಕೊಳ್ಳಿ ಎಂದು ಪೊಲೀಸರು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಲೇ ಇದ್ದಾರೆ. ಸಿಸಿಟಿವಿ ಕ್ಯಾಮರಾಗಳಲ್ಲಿ ಕಳ್ಳರ ಚಲನವಲನಗಳು ಸೆರೆಯಾಗುತ್ತಿವೆ ಹೊರತು ಕಳ್ಳತನ ಪ್ರಕರಣಗಳು ಕಡಿಮೆಯಾಗಿಲ್ಲ. ಬೇರೆ ಬೇರೆ ಗ್ಯಾಂಗ್‌ಗಳು ನಗರ ಹಾಗೂ ಜಿಲ್ಲೆಯ ವಿವಿಧೆಡೆ ಆಕ್ಟಿವ್ ಆಗಿದ್ದು, ಕಳ್ಳತನಕ್ಕೆ ಯತ್ನಿಸುವ ದೃಶ್ಯಗಳು ಜನರನ್ನು ಭಯಭೀತರನ್ನಾಗಿಸಿವೆ.

ಕೆಲವೆಡೆ ಕಳ್ಳರ ಗ್ಯಾಂಗ್ ಮುಖಕ್ಕೆ ಮಾಸ್ಕ್ ಹಾಕಿಕೊಂಡು ಓಡಾಡುತ್ತಿದ್ರೆ, ಇನ್ನೂ ಕೆಲವೆಡೆ ರಾಜಾರೋಷವಾಗಿ ಓಡಾಡಿಕೊಂಡು ಮನೆಗಳ್ಳತನ ಮಾಡುತ್ತಿದ್ದಾರೆ. ಬೆಳಗಿನ ಜಾವದಲ್ಲಿ ಕಳ್ಳರು ಓಡಾಡುವ ದೃಶ್ಯಗಳು ಸಿಸಿಟಿವಿ ಕ್ಯಾಮರಾಗಳಲ್ಲಿ ಸೆರೆಯಾಗುತ್ತಿದ್ದು, ಸಾರ್ವಜನಿಕರು ಪೊಲೀಸರಿಗೆ ರಕ್ಷಣೆಗಾಗಿ ಒತ್ತಾಯಿಸಿದ್ದಾರೆ. ರಾತ್ರಿ, ಬೆಳಗಿನ ಜಾವದಲ್ಲಿ ಹೆಚ್ಚು ಬೀಟ್ ಹಾಕುವಂತೆ ಮನವಿ ಮಾಡಿದ್ದಾರೆ. ರೈಲು ನಿಲ್ದಾಣ, ರೈಲು ಹಳಿ ಅಕ್ಕಪಕ್ಕದ ಮನೆಗಳನ್ನ ಕಳ್ಳರು ಟಾರ್ಗೆಟ್ ಮಾಡುತ್ತಿದ್ದು, ಪೊಲೀಸರು ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಅಂತ ಆಗ್ರಹಿಸಿದ್ದಾರೆ. ರಾಯಚೂರು ನಗರ ಸೇರಿದಂತೆ ಹಲವೆಡೆ ನಡೆಯುತ್ತಿರುವ ಕಳ್ಳತನ ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳ ಕಳ್ಳರು ಪತ್ತೆಯಾಗಿಲ್ಲ. ಪಕ್ಕದ ಆಂಧ್ರಪ್ರದೇಶ, ತೆಲಂಗಾಣದಿಂದಲೂ ಕಳ್ಳರ ಕಾಟ ಹೆಚ್ಚಾಗಿರುವುದರಿಂದ ಸಾರ್ವಜನಿಕರು ಬೆಚ್ಚಿಬಿದ್ದಿದ್ದಾರೆ.

## 6 ಮಂದಿ ದುರ್ಮರಣ; ಕುಣಿಗಲ್ ಜನತೆಗೆ ಕರಾಳ ಸೀಗೆ ಹುಣ್ಣಿಮೆ



ಕುಣಿಗಲ್,ಅ. 7: ಸೀಗೆ ಹುಣ್ಣಿಮೆ ದಿನವಾದ ಇಂದು ಕುಣಿಗಲ್ ತಾಲ್ಲೂಕಿನ ಜನರ ಪಾಲಿಗೆ ಕರಾಳ ದಿನವಾಗಿದೆ .ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದಲ್ಲಿ 6 ಮಂದಿ ಜಲಸಮಾಧಿ ಹೊಂದಿದ್ದಾರೆ ತುಮಕೂರಿನ ಬಿ.ಜಿ.ಪಾಳ್ಯ ನಿವಾಸಿಗಳಾದ 7 ಮಂದಿ ಕುಣಿಗಲ್ ತಾಲ್ಲೂಕಿನ ಮಾಗಡಿಪಾಳ್ಯದಲ್ಲಿರುವ ನೆಂಟರ ಮನೆಗೆ ಹೋಗಿದ್ದರು. ಸಂಬಂಧಿಕರ

2ನೇ ಪುಟನೋಡಿ

## 'ಶೂ' ಎಸೆತ: ಯಾವುದೇ ಪಶ್ಚಾತ್ತಾಪವಿಲ್ಲ



ನವದೆಹಲಿ: ಅ.7:ನಾನು ಮಾಡಿದ್ದ ಕಾರ್ಯಕ್ಕೆ ನನಗೆ ಯಾವುದೇ ಪಶ್ಚಾತ್ತಾಪವಿಲ್ಲ. ನಾನು ಮಾಡಿದ್ದು ಸರಿಯಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆಯ ಸಂದರ್ಭದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ಮೇಲೆ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ಹೇಳಿದ್ದಾರೆ.

ದೇಶದ ಸರ್ವೋಚ್ಚ ನ್ಯಾಯಾಲಯ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಅಚ್ಚರಿಯೊಂದು ನಡೆದಿತ್ತು. ಹಿರಿಯ ವಕೀಲನೊಬ್ಬ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರತ್ತ ಶೂ ಎಸೆಯಲು ಪ್ರಯತ್ನಿಸಿದ್ದು, ನ್ಯಾಯಾಲಯದ ಒಳಗೆ ಕೆಲ ಕ್ಷಣ ತೀವ್ರ ಗೊಂದಲ ಉಂಟಾಗಿತ್ತು.

ಘಟನೆ ಬಳಿಕ ತಾಳ್ಮೆ ವಹಿಸಿ [illegible] ನನ್ನನ್ನು ಪ್ರಚೋದಿಸಿದ್ದಾನೆ. ಮುಂದಿನ ಯಾವುದೇ ಪರಿಣಾಮ ಎದುರಿಸಲು ನಾನು ಸಿದ್ಧ. ನಾನು ಜೈಲಿಗೆ ಹೋಗುತ್ತೇನೆ. ಅಲ್ಲಿನ ದೇವರ ಹೆಸರಿನಲ್ಲೇ ಎಲ್ಲವನ್ನೂ ಸಹಿಸುತ್ತೇನೆಂದು ಹೇಳಿದ್ದಾರೆ.

ಮಧ್ಯಪ್ರದೇಶದ ಯುನೆಸ್ಕೋ ವಿಶ್ವ ಪರಂಪರೆಗೆ ಸೇರ್ಪಡೆಯಾಗಿರುವ ಖಜುರಾಹೊ ದೇವಾಲಯ [illegible] ವ್ಯಾಪ್ತಿಗೆ ಬರುತ್ತದೆಯೇ ಹೊರತು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಏನೇ ಮಾಡುವುದರಿದ್ದರೂ ಎಎಸ್‌ಐ ಅನುಮತಿ ನೀಡಬೇಕಾಗಿದೆ. ಕ್ಷಮಿಸಿ ಎಂದು ತಿಳಿಸಿದ್ದರು.

ಸಂಪೂರ್ಣವಾಗಿ ಪ್ರಚಾರ ಹಿತಾಸಕ್ತಿಗಾಗಿ ಈ ಅರ್ಜಿಯನ್ನು ನೀವು ಸಲ್ಲಿಕೆ ಮಾಡಿದ್ದೀರಿ. ಹೋಗಿ

2ನೇ ಪುಟನೋಡಿ

## ಸಿಜೆಐ ಮೇಲೆ ಶೂ ಎಸೆದವರು ಮನುವಾದಿಗಳು: ಸಿದ್ದರಾಮಯ್ಯ

ಬೆಂಗಳೂರು:ಅ.7: ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆದವರು ಸನಾತನವಾದಿಗಳು, ಮನುವಾದಿಗಳು ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಮಾತಾನಾಡಿದ ಅವರು, ಶೂ ಎಸೆದ ಪ್ರಕರಣದಲ್ಲಿ ಮುಖ್ಯ ನ್ಯಾಯಮೂರ್ತಿಗಳಾದ ಗವಾಯಿ ಅವರೇ ಕ್ಷಮಿಸಿದ್ದಾರೆ. ಶೂ ಎಸೆಯೋ ಮನಸ್ಥಿತಿಯನ್ನು ತೀವ್ರವಾಗಿ ಖಂಡಿಸುತ್ತೇನೆ. ಇದು ಮನುವಾದಿಗಳ ಪ್ರಯತ್ನ ಎಂದು ಕಿಡಿಕಾರಿದ್ದಾರೆ.

ಸಿಜೆ ಅವರು ಶೂ ಎಸೆತಕ್ಕೆ ವಿಚಲಿತ ಆಗಿಲ್ಲ. ಅವರ ಕೆಲಸ ಅವರು ಮಾಡಿದ್ದಾರೆ. ಅವರು ಕ್ಷಮಿಸಿದ್ದಾರೆ. ಅದು ಅವರ ದೊಡ್ಡ ಗುಣ. ಇದು ಸನಾತನವಾದಿಗಳು, ಮನುವಾದಿಗಳ ಕೆಲಸ ಅಂತ ವಾಗ್ದಾಳಿ ನಡೆಸಿದರು.

ಸುಪ್ರೀಂ ಕೋರ್ಟ್ ಹಿರಿಯ ವಕೀಲರೊಬ್ಬರು ಮುಖ್ಯ ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ಮೇಲೆ ಶೂ ಎಸೆಯಲು ಮುಂದಾದ ಘಟನೆ ಸೋಮವಾರ (ಅ.6) ನಡೆದಿತ್ತು. ಮಧ್ಯಪ್ರದೇಶದ ಖಜುರಾಹೊ ದೇವಾಲಯ ಸಂಕೀರ್ಣದಲ್ಲಿ ವಿಷ್ಣುವಿನ ವಿಗ್ರಹವನ್ನು ಪುನಃಸ್ಥಾಪಿಸಲು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ನ್ಯಾ. ಬಿ ಆರ್ ಗವಾಯಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಸಿಟ್ಟಾಗಿ 71 ವರ್ಷದ ಕಿಶೋರ್ ರಾಕೇಶ್ ಶೂ ಎಸೆಯಲು ಮುಂದಾಗಿದ್ದರು.

ಕೋರ್ಟ್ ಹಾಲ್‌ನಲ್ಲಿ ಕಿಶೋರ್ ರಾಕೇಶ್ ಶೂ ತೆಗೆಯುತ್ತಿದ್ದಾಗ ಅಲ್ಲಿದ್ದ ಭದ್ರತಾ ಸಿಬ್ಬಂದಿ ಮಧ್ಯಪ್ರವೇಶಿಸಿ ವಕೀಲರನ್ನು ತಡೆದು ಹೊರಗೆ ಕರೆದುಕೊಂಡು ಹೋಗಿದ್ದರು. ಕರೆದುಕೊಂಡು ಹೋಗುವಾಗ ಸನಾತನ ಧರ್ಮಕ್ಕೆ ಅವಮಾನ ಮಾಡುವುದನ್ನು ನಾನು ಸಹಿಸುವುದಿಲ್ಲ ಎಂದು ಕೂಗಿಕೊಂಡಿದ್ದರು.

## ಸಾಮಾಜಿಕ, ಶೈಕ್ಷಣಿಕ ಸರ್ವೆ ವೇಳೆ 3 ಸಿಬ್ಬಂದಿ ಸಾವು : ತಲಾ 20 ಲಕ್ಷ ಪರಿಹಾರ




ಬೆಂಗಳೂರು:ಅ.7: ಸಾಮಾಜಿಕ, ಶೈಕ್ಷಣಿಕ ಸರ್ವೆ ಮಾಡುವಾಗ ಸಾವನ್ನಪ್ಪಿದ ಮೂರು ಸಿಬ್ಬಂದಿ ಕುಟುಂಬಕ್ಕೆ ಸರ್ಕಾರ ತಲಾ 20 ಲಕ್ಷ ರೂ. ಪರಿಹಾರ ಘೋಷಿಸಿದೆ.ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

1.20 ಲಕ್ಷ ಶಿಕ್ಷಕರು, ಬೇರೆ 40

2ನೇ ಪುಟನೋಡಿ

## ಹುಲಿಗೆಮ್ಮ ಜಾತ್ರೆ:ಬಸ್ ಹಾದು ಮೂವರು ಭಕ್ತರ ಸಾವು



ಕೊಪ್ಪಳ, ಅ.7– ಸೀಗೆ ಹುಣ್ಣಿಮೆ ಅಂಗವಾಗಿ ಕೊಪ್ಪಳ ತಾಲ್ಲೂಕಿನ ಹುಲಿಗೇಯ ಹುಲಿಗೆಮ್ಮ ದೇವಸ್ಥಾನಕ್ಕೆ ಪಾದಯಾತ್ರೆ ಹೊರಟಿದ್ದ ಭಕ್ತರ ಮೇಲೆ ಖಾಸಗಿ ಬಸ್ ಹರಿದು ಮೂವರು ಮೃತಪಟ್ಟು ನಾಲ್ವರು ಗಾಯಗೊಂಡಿ–ದ್ದಾರೆ. ಮತ್ತೊಂದೆಡೆ ಬೈಕ್ ಡಿಕ್ಕಿ ಹೊಡೆದು ಪಾದಯಾತ್ರಿಯೊಬ್ಬರು ಮೃತಪಟ್ಟಿರುವ ಘಟನೆ ಇಂದು ಮುಂಜಾನೆ ನಡೆದಿದೆ.

ಗದಗ ಜಿಲ್ಲೆಯ ರೋಣ ತಾಲೂಕಿನ ತಳ್ಳಿಹಾಳ ಗ್ರಾಮದ ಅನ್ನಪೂರ್ಣ(40), ಪ್ರಕಾಶ್(25) ಹಾಗೂ ಶರಣಪ್ಪ(19) ಮೃತಪಟ್ಟವರು. ಕಳೆದ ಎರಡು ದಿನಗಳ ಹಿಂದೆ ಇವರು ತಮ್ಮ ಗ್ರಾಮದಿಂದ ಹುಲಗಿಯ ಹುಲಿಗೆಮ್ಮ ದೇವಸ್ಥಾನಕ್ಕೆ ಪಾದಯಾತ್ರೆ ಹೊರಟಿದ್ದರು. ಇನ್ನು ಕೇವಲ 3 ಗಂಟೆ ಕಳೆದಿದ್ದರೆ ಹುಲಿಗೆಮ್ಮ ದೇವಸ್ಥಾನವನ್ನು ತಲುಪುತ್ತಿದ್ದರು. ದುರಾದೃಷ್ಟವಶಾತ್ ಅದಕ್ಕೂ ಪೂರ್ವದಲ್ಲಿಯೇ ಈ ದುರ್ಘಟನೆ ನಡೆದಿದೆ. ಅಪಘಾತದಲ್ಲಿ ಗಾಯಗೊಂಡಿರುವ ನಾಲ್ವರನ್ನು ಜಿಲ್ಲಾಸ್ಪತ್ರೆಗೆ

ಗಾಯಾಳುಗಳನ್ನು ದಾಖಲು ಮಾಡಲಾಗಿದೆ. ಈ ಘಟನೆಯಲ್ಲಿ ಮೃತಪಟ್ಟವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ತಳ್ಳಿಹಾಳ ಗ್ರಾಮದವರು ಹುಣ್ಣಿಮೆಗೆ ಎರಡು ದಿನ ಮೊದಲೇ ಪಾದಯಾತ್ರೆ ಆರಂಭಿಸಿದ ತಳ್ಳಿಹಾಳ ಗ್ರಾಮದ ಭಕ್ತರು ಇನ್ನೂ 3–4 ಗಂಟೆ ಆಗಿದ್ದರೆ ದೇವಸ್ಥಾನ ತಲುಪುತ್ತಿದ್ದರು. ಅಷ್ಟರಲ್ಲೇ ಬಸ್ ಹರಿದು ಮೂವರು ಮೃತಪಟ್ಟಿದ್ದು ಬಸ್ ಹರಿದ ರಭಸಕ್ಕೆ ಮೂವರ ದೇಹಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ದೃಶ್ಯ ಮನಕಲಕುವಂತಿತ್ತು.

ಪ್ರತಿ ಹುಣ್ಣಿಮೆ ಹಾಗೂ ಮಂಗಳವಾರ, ಶುಕ್ರವಾರ ದಿನ ಜಿಲ್ಲೆ ಹಾಗೂ ನೆರೆ ಜಿಲ್ಲೆಯ ಸಾಕಷ್ಟು ಜನ ಪಾದಯಾತ್ರೆ ತೆರಳುವುದು ಸಾಮಾನ್ಯ.

**ಬಸ್ ಚಾಲಕನ ಬಂಧನ:**

ಮುನಿರಾಬಾದ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇದೇ ವೇಳೆ ಖಾಸಗಿ ಬಸ್ ಚಾಲಕನನ್ನ ಪೊಲೀಸರು ಬಂಧಿಸಿದ್ದಾರೆ.

ಘಟನಾ ಸ್ಥಳಕ್ಕೆ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ರಾಮ್ ಅರಸಿದ್ದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

**ಪಾದಯಾತ್ರಿ ಸಾವು:**

ಹುಲಿಗೆಮ್ಮ ದೇವಸ್ಥಾನಕ್ಕೆ ಪಾದಯಾತ್ರೆ ಹೊರಟಿದ್ದ ಯುವಕನಿಗೆ ಬೈಕ್

2ನೇ ಪುಟನೋಡಿ

**ವಿನೂ ಮಂಕಡ್ ಟ್ರೂರ್ನಿ:ಕರ್ನಾಟಕ ಅಂಡರ್–19 ತಂಡದ ನಾಯಕನಾಗಿ ರಾಹುಲ್ ದ್ರಾವಿಡ್ ಕಿರಿಯ ಪುತ್ರ ಅನ್ವಯ್ ಆಯ್ಕೆ**

## ಒಂದನೇ ಪುಟದಿಂದ

### ಸುಪ್ರೀಂಕೋರ್ಟ್‌ಗೆ ಪಿಐಎಲ್

ಔಷಧ ನಿರೀಕ್ಷಕ ಚಿಂದ್ವಾರ ಗೌರವ್ ಶರ್ಮಾ, ಔಷಧ ನಿರೀಕ್ಷಕ ಜಬಲ್ಪುರ ಶರದ್ ಕುಮಾರ್ ಜೈನ್ ಮತ್ತು ರಾಜ್ಯದ ಆಹಾರ ಮತ್ತು ಔಷಧ ಆಡಳಿತದ ಉಪನಿರ್ದೇಶಕ ಶೋಭಿತ್ ಕೋಸ್ಟಾ ಅವರನ್ನು ಅಮಾನತುಗೊಳಿಸಲಾಗಿದೆ ಮತ್ತು ಐಎಎಸ್ ಅಧಿಕಾರಿ ಔಷಧ ನಿಯಂತ್ರಕ ದಿನೇಶ್ ಮೌರ್ಯ ಅವರನ್ನು ಬೇರೆಡೆಗೆ ವರ್ಗಾಯಿಸಲಾಗಿದೆ.

### ಮೂವರು ಭಕ್ತರ ಸಾವು

ಡಿಕ್ಕಿ ಹೊಡೆದು ಮೃತಪಟ್ಟಿದ್ದಾನೆ. ವೀರೇಶ್ ಹಳ್ಳಿಕೇರಿ (28) ಮೃತ ಯುವಕ ಎಂಬುದು ತಿಳಿದುಬಂದಿದೆ. ಕುಕನೂರು ತಾಲೂಕಿನ ಭಾನಾಪೂರ ಗ್ರಾಮದ ಬಳಿ ದುರ್ಘಟನೆ ಇಂದು ನಡೆದಿದೆ.

ಕುಕನೂರಿನಿಂದ ಹುಲಿಗೆಮ್ಮ ದೇವಿಗೆ 9 ಜನರು ಪಾದಯಾತ್ರೆ ಹೊರಟಿದ್ದರು. ಭಾನಾಪೂರದ ಬಳಿ ಬಂದಾಗ ಪಾದಯಾತ್ರಿಗಳಿಗೆ ಬೈಕ್ ಡಿಕ್ಕಿ ಹೊಡೆದಿದೆ. ಈ ವೇಳೆ ಒಬ್ಬ ಪಾದಯಾತ್ರಿ ಮೃತಪಟ್ಟಿದ್ದರೆ, ಮತ್ತೊಬ್ಬ ಪಾದಯಾತ್ರಿ ರಮೇಶ್‌ಗೆ ಗಾಯವಾಗಿದೆ. ಕುಕನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಜನತೆಗೆ ಕರಾಳ ಸೀಗೆ ಹುಣ್ಣಿಮೆ

ಮನೆಯಲ್ಲಿ ಊಟ ಮುಗಿಸಿ ಇಂದು ಸಂಜೆ ಮಾರ್ಕೋನಹಳ್ಳಿ ಜಲಾಶಯ ನೋಡಲು 7 ಮಂದಿಯು ತೆರಳಿದ್ದರು.

ಮಾರ್ಕೋನಹಳ್ಳಿ ಸೈ ಫೋನ್ ಬಳಿ 7 ಜನರು ಸೈಫರ್ ಬಳಿ ಈಜಾಡುತ್ತಿದ್ದಾಗ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಈ ಪೈಕಿ ಸಾಜಿಯಾ (32), ಅರ್ಬಿನ್ (30) ಎಂಬುವರ ಶವಗಳು ಪತ್ತೆಯಾಗಿದ್ದು, ತಬಾಸುಮ್ (45), ಶಬಾನ (44), ಮಿಫ್ರಾ (4) ಹಾಗೂ ಮಹಿಮ್ (1) ಎಂಬುವರು ಕಣ್ಮರೆಯಾಗಿದ್ದಾರೆ. ಇವರ ಜತೆ–ಗಿದ್ದ ನವಾಜ್ ಎಂಬಾತ ಜಲಾಶಯದ ಗಿಡದ ಪೊದೆಯಲ್ಲಿ ಸಿಲುಕಿಕೊಂಡಿದ್ದು, ತಲೆ ಇತರೆ ಭಾಗಗಳಿಗೆ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಾಳುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ 7 ಮಂದಿಯು ಮಾರ್ಕೋನಹಳ್ಳಿ ಜಲಾಶಯದ ಹಿನ್ನೀರಿನ ಕಾಲುವೆಗೆ ಇಳಿದಿದ್ದು, ಆ ಸಂದರ್ಭದಲ್ಲಿ ಆಟೋಮ್ಯಾಟಿಕ್ ಆಗಿ ಸೈಫನ್ ಸಿಸ್ಟಂಗಳು ಓಪನ್ ಆಗಿದ್ದರಿಂದ ನೀರಿನ ಹರಿವು ಹೆಚ್ಚಾಗಿ ರಭಸವಾಗಿ ಹರಿದಿದ್ದರಿಂದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಶಂಕಿಸಲಾಗಿದೆ.

ಜಲಾಶಯದಲ್ಲಿ ಕಣ್ಮರೆಯಾಗಿರುವ ನಾಲ್ವರಿಗಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ತೀವ್ರ ಹುಡುಕಾಟ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಯಾವುದೇ ಪಶ್ಚಾತ್ತಾಪವಿಲ್ಲ

ದೇವರಲ್ಲೇ ಏನಾದರೂ ಮಾಡುವಂತೆ ಬೇಡಿಕೊಳ್ಳಿ. ನೀವು ವಿಷ್ಣುವಿನ ಕಟ್ಟಾ ಭಕ್ತ ಎಂದು ಹೇಳುತ್ತೀರಿ. ಆದ್ದರಿಂದ ಈಗಲೇ ಹೋಗಿ ಪ್ರಾರ್ಥಿಸಿ ಮತ್ತು ಸ್ವಲ್ಪ ಧ್ಯಾನ ಮಾಡಿ ಎಂದು ಸಿಜೆಐ ಗವಾಯಿ ಹೇಳಿದ್ದರು.

ಮೊಘಲ್ ಆಕ್ರಮಣದ ಸಮಯದಲ್ಲಿ ವಿಗ್ರಹವು ವಿರೂಪಗೊಂಡಿದ್ದು, ಅದನ್ನು ಪುನಃಸ್ಥಾಪಿಸಲು ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿದರೂ ಅದು ಅದೇ ಸ್ಥಿತಿಯಲ್ಲಿದೆ ಎಂದು ರಾಕೇಶ್ ದಲಾಲ್ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ತನ್ಮಧ್ಯೆ, ರಾಜಕೀಯ ನಾಯಕರು, ವಕೀಲರು ಮತ್ತು ಕಾರ್ಯಕರ್ತರು ಸಿಜೆಐ ಮೇಲಿನ ದಾಳಿಯನ್ನು ಖಂಡಿಸಿದ್ದಾರೆ. ದಾಳಿಯನ್ನು ಖಂಡಿಸಿದ ಪ್ರಧಾನಿ ನರೇಂದ್ರ ಮೋದಿ, ಇದು "ಪ್ರತಿಯೊಬ್ಬ ಭಾರತೀಯನನ್ನೂ ಕೆರಳಿಸಿದೆ" ಎಂದು ಹೇಳಿದ್ದಾರೆ.

ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ತಮಿಳುನಾಡು ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್, ತೆಲಂಗಾಣ ಸಿಎಂ ಎ ರೇವಂತ್ ರೆಡ್ಡಿ, ಕೇರಳ ಸಿಎಂ ಪಿಣರಾಯಿ ವಿಜಯನ್ ಮತ್ತು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ದಾಳಿಯನ್ನು ಖಂಡಿಸಿದ್ದಾರೆ

### ಸಿಬ್ಬಂದಿ ಸಾವು : ತಲಾ 20 ಲಕ್ಷ ಪರಿಹಾರ

ಸಾವಿರ ಸಿಬ್ಬಂದಿ ಗಣತಿಯಲ್ಲಿ ಭಾಗಿಯಾಗಿದ್ದಾರೆ. ಶಿಕ್ಷಕರಿಗೆ ಇತರೆ ಸರ್ವೆಯವರಿಗೆ 20 ಸಾವಿರ ರೂ. ಗೌರವ ಧನ ನೀಡಲಾಗುತ್ತದೆ. ಪ್ರತಿ ಮನೆಗೆ 100 ರೂ. ಕೊಡುತ್ತೇವೆ. ಲಮ್ ಸಮ್ 5 ಸಾವಿರ ರೂ. ಕೊಟ್ಟಿದ್ದೇವೆ ಅಲ್ಲಿಗೆ 20 ಸಾವಿರ ರೂ. ಆಗುತ್ತೆ. 19ರ ಒಳಗೆ ಪೂರ್ಣ ಪ್ರಮಾಣದಲ್ಲಿ ಸರ್ವೆ ಮುಗಿಯಲಿದೆ ಎಂದು ಸಿಎಂ ಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ಸಭೆಯಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯಕ್, ಸಿಎಸ್ ಶಾಲಿನಿ ರಜನೀಶ್ ಸೇರಿ ಹಲವರು ಭಾಗಿಯಾಗಿದ್ದರು

## ಮಹರ್ಷಿ ವಾಲ್ಮೀಕಿ ಭವನ ನಿರ್ಮಿಸಲು ಮುಂದಿನ ವರ್ಷದ ಘೋಷಣೆ : ಸಿ.ಎಂ.



ಬೆಂಗಳೂರು,ಅ07:ಬೆಂಗಳೂರಿನಸುಮನಹಳ್ಳಿಯ ಎರಡು ಎಕರೆ ಪ್ರದೇಶದಲ್ಲಿ ಶ್ರೀ ವಾಲ್ಮೀಕಿ ಭವನ ನಿರ್ಮಿಸಲು ಮುಂದಿನ ವರ್ಷದ ಬಜೆಟ್ ನಲ್ಲಿ ಘೋಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ–2025 ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ ನೆರವೇರಿಸಿ, ಶ್ರೀ ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ವಾಲ್ಮೀಕಿ ಸಮುದಾಯದ ಅಭಿವೃದ್ಧಿಗಾಗಿ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿ ಸಾಧನೆ ಮಾಡಿದ ಐದು ಸಾಧಕರಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ವಾಲ್ಮೀಕಿ ಅವರು ವಿಶ್ವಮಾನವರಾಗಿ ಶ್ರೇಷ್ಠವಾದ ರಾಮಾಯಣದಂತಹ ಮಹಾಕಾವ್ಯವನ್ನು ರಚಿಸಿ, ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದರು. ಹೀಗಾಗಿ ಸಮುದಾಯದ ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯಬೇಕು, ಯಾರೂ ಸಹ ಶಿಕ್ಷಣದಿಂದ ವಂಚಿತರಾಗಬಾರದು ಎಂದರು ತಿಳಿಸಿದರು.

ನಮ್ಮ ಸರ್ಕಾರವು ಎಲ್ಲರಿಗೂ ಸಮಪಾಲು, ಸಮಬಾಳು ಕಲ್ಪಿಸಬೇಕು ಎನ್ನುವ ಉದ್ದೇಶದಿಂದ ಯಾವುದೇ ಸಮಾಜವಿರಲಿ, ಧರ್ಮವಿರಲಿ, ಜಾತಿಯಿರಲಿ, ಬಡವರಿರಲಿ ಎಲ್ಲರಿಗೂ ಸಮಾನ ಅವಕಾಶ, ನ್ಯಾಯ ಕಲ್ಪಿಸುವ ಉದ್ದೇಶದಿಂದ 2011ರ ಜಾತಿ ಗಣತಿಯಲ್ಲಿ ಶೇ.24.1 ರಷ್ಟು ಇದ್ದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಸಂಖ್ಯೆಗನುಗುಣವಾಗಿ ಶೇ.24.1 ರಷ್ಟು ಮೀಸಲಾತಿ ಇಡಬೇಕು ಎಂದು ಕಾನೂನು ಮಾಡಲಾಯಿತು. ಈ ಕಾಯ್ದೆಯು 2014–15 ರಿಂದ ಜಾರಿಗೆ ಬಂದಿದ್ದು, ಅಂದು 15,894 ಕೋಟಿ ಇದ್ದದ್ದು, 2025–26 ರಲ್ಲಿ 42,017 ಕೋಟಿ ಆಗಿದೆ ಎಂದರು.

ಹೋಬಳಿಗೊಂದು ವಸತಿ ಶಾಲೆಗಳನ್ನು ಮಾಡಿದ್ದು, ಕಳೆದ ವರ್ಷ ವಸತಿ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಮಕ್ಕಳು 10 ಖಿಚಿಟಇ ಗಳಿಸಿದ್ದಾರೆ. ಇವರಲ್ಲಿ ಪರಿಶಿಷ್ಟ ಪಂಗಡದ 09 ಜನ ಸೇರಿದ್ದಾರೆ ಎಂದರು.

ವಾಲ್ಮೀಕಿ ಮತ್ತು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ನಾನು ಮತ್ತು ಉಗ್ರಪ್ಪ ಅವರು ರಾಮಕೃಷ್ಣ ಹೆಗಡೆಯವರಿಗೆ ಮನವಿ ಮಾಡಿದ್ದೆವು. ಹೆಗಡೆಯವರು ನಮ್ಮ ಮನವಿಯನ್ನು ಶಿಫಾರಸ್ಸು ಮಾಡಿದರು. ಆಗ ಸೇರಿಸಲು ಆಗಲಿಲ್ಲ. ಚಂದ್ರಶೇಖರ್ ಅವರು ಪ್ರಧಾನಿ ಆಗಿದ್ದಾಗ ಉಗ್ರಪ್ಪ ಅವರು ದೇವೇಗೌಡರ ಮೂಲಕ ಒಪ್ಪಿಸಿ, ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರು. ವಾಲ್ಮೀಕಿ, ಬೇಡ, ತಳವಾರ ಮತ್ತು ನಾಯಕ ಸಮುದಾಯಕ್ಕೆ ಮೀಸಲಾತಿ ದೊರಕಲು ಉಗ್ರಪ್ಪನವರೇ ಕಾರಣ. ಇದನ್ನು ಏತಕ್ಕೆ ತಿಳಿಸುತ್ತಿದ್ದೇನೆಂದರೆ ಎಲ್ಲರಿಗೂ ಇತಿಹಾಸ ಗೊತ್ತಾಗಲಿ ಎನ್ನುವುದು. ಈಗ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಹೋರಾಟ ಮಾಡಿದವರು ನಾವಲ್ಲ. ಬಿಜೆಪಿಯ ಈಶ್ವರಪ್ಪ ಅವರು ಹೋರಾಟ ಮಾಡಿದರು. ಅಂದು ಮುಖ್ಯಮಂತ್ರಿಯಾಗಿದ್ದ ಬೊಮ್ಮಾಯಿ ಅವರು ಈಶ್ವರಪ್ಪ ಅವರ ಮನವಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಆ ಶಿಫಾರಸ್ಸಿನ ಬಗ್ಗೆ ಕೆಲವು ಸ್ಪಷ್ಟನೆಗಳನ್ನು ಕೇಂದ್ರ ಕೇಳಿದೆ. ಅದಷ್ಟೇ ನಮ್ಮೆದುರುಗಿದೆ. ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ, ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು ಎನ್ನುವುದಕ್ಕೆ ನನ್ನ ಬೆಂಬಲ ಮತ್ತು ಸಹಮತವು ಇದೆ ನಮಗೆ ಬೇಕಾದ ಹಕ್ಕು, ಅವಕಾಶಗಳನ್ನು ಸಂಘಟನೆ ಹೋರಾಟದ ಮೂಲಕ ಪಡೆದುಕೊಳ್ಳಬೇಕು. ಇದನ್ನೇ ಡಾ: ಬಿ.ಆರ್. ಅಂಬೇಡ್ಕರ್, ಬುದ್ಧ, ಬಸವಣ್ಣ ಕೂಡಾ ಹೇಳಿದ್ದಾರೆ. ವಾಲ್ಮೀಕಿ ಅವರ ಬಗ್ಗೆ ಮತ್ತು ರಾಮಾಯಣವನ್ನು ಪಠ್ಯದಲ್ಲಿ ಸೇರಿಸಬೇಕು ಎಂದು ಉಗ್ರಪ್ಪ ಅವರು ಬೇಡಿಕೆ ಇಟ್ಟಿದ್ದು, ಅದನ್ನು ಸಹ ಪರಿಗಣಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ "ಸರ್ಕಾರದ ನಡೆ, ಬುಡಕಟ್ಟು ಅಭಿವೃದ್ಧಿ ಕಡೆಗೆ" ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಮಾತನಾಡಿ, ಇಂದು ರಾಜ್ಯಾದ್ಯಂತ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸುತ್ತಿದ್ದೇವೆ. ದೇಶಕ್ಕೆ ಉತ್ತಮ ಮಹಾಗ್ರಂಥ ನೀಡಿದ ಮಹಾನಾಯಕರು ಇವರು. ಇವರ ವಿಚಾರ ಗ್ರಂಥಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಬೇಕು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸರ್ವಾಂಗೀಣ ಪ್ರಗತಿಗೆ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಸಮುದಾಯದವರು ಅದನ್ನು ಸದುಪಯೋಗ ಪಡಿಸಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಎಂದರು. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ವಿಧಾನ ಸಭಾ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ಭೂಮಿ ಖರೀದಿ ಹೊಸ ಯೋಜನೆಯನ್ನು 10 ಜಿಲ್ಲೆಗಳಲ್ಲಿ ಜಾರಿಗೆ ತಂದಿದ್ದು, ಇದು ಯಶಸ್ವಿಯಾದರೆ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು ಎಂದರು.

ಸಮುದಾಯದ ಜನರ ಅಭಿವೃದ್ಧಿಗೆ ಸರ್ಕಾರ ನೀಡುವ ಹಣವನ್ನು ಯುವಕರು ದುರ್ಬಳಕೆ ಮಾಡಿಕೊಳ್ಳದೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು

ಕಾರ್ಯಕ್ರಮದಲ್ಲಿ ಶಾಸಕರಾದ ರಿಜ್ವಾನ್ ಅರ್ಷದ್, ಶ್ರೀಮತಿ ಅನ್ನಪೂರ್ಣ, ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಮಹದೇವಪ್ಪ ಪಟ್ಟಣ, ಮಾಜಿ ಸಂಸದರಾದ ವಿ.ಎಸ್. ಉಗ್ರಪ್ಪ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಂದೀಪ್.ಡಿ ಹಾಗೂ ಅಧಿಕಾರಿಗಳು ಮತ್ತು 2025ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ ಕೆ. ಉಚ್ಛಂಗಪ್ಪ, ಮಳಸಿದ್ದ ಲಕ್ಷ್ಮಣ ನಾಯಿಕೋಡಿ, ನಾಗರಾಜು ಗಾಣದ ಹುಣಸೆ, ಶ್ರೀಮತಿ ಜಿ.ಕೆ. ಮುತ್ತಮ್ಮ, ತಿಪ್ಪೇಸ್ವಾಮಿ.ಪಿ ಅವರುಗಳು ಉಪಸ್ಥಿತರಿದ್ದರು.

## ಅ. 28 ರಂದು ಸರ್ವ ಸದಸ್ಯರ ವಾರ್ಷಿಕ ಮಹಾಸಭೆ



ಮಲ್ಲಮ್ಮ ನುಡಿ ವಾರ್ತೆ

ಔರಾದ್:ಅ.7:ಕರ್ನಾಟಕರಾಜ್ಯಸರ್ಕಾರಿ ನೌಕರರ ಸಂಘ ತಾಲೂಕು ಶಾಖೆ ಔರಾದ್ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಅಕ್ಟೋಬರ್ 28 ಮಂಗಳವಾರದಂದು ಸಾಯಂಕಾಲ 3 ಗಂಟೆಗೆ ತಾಲೂಕು ಪಂಚಾಯತ್ ಸಭಾಂಗಣ ಔರಾದ(ಬಿ)ನಲ್ಲಿ ತಾಲೂಕು ಅಧ್ಯಕ್ಷರಾದ ಪಂಡರಿ ಆಡೆ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ತಾಲೂಕು ಪದಾಧಿಕಾರಿಗಳು, ನಿರ್ದೇಶಕರು, ನಾಮ ನಿರ್ದೇಶಿತ ಸದಸ್ಯರು ಹಾಗೂ ತಾಲೂಕಿನ ಎಲ್ಲ ಇಲಾಖೆಯ ಸರ್ಕಾರಿ ನೌಕರರು ವಾರ್ಷಿಕ ಮಹಾಸಭೆಗೆ ತಪ್ಪದೆ ಹಾಜರಾಗಿ ತಮ್ಮ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ತಾಲೂಕ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾಲ್ಕಿ ಸಕ್ಕರೆ ಕಾರ್ಖಾನೆ: 3,106 ರೈತರಿಂದ ಹಕ್ಕು ಚಲಾವಣೆ

ಬೀದರ. ಅ. 07 : ಭಾಲ್ಕಿ ತಾಲ್ಲೂಕಿನ ಹುಣಜಿ(ಎ) ಸಮೀಪದ ಮಹಾತ್ಮ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ಸೋಮವಾರ ಶಾಂತಿಯುತವಾಗಿ ಮತದಾನ ನಡೆಯಿತು. ಒಟ್ಟು 4,452 ರೈತ ಮತದಾರರಿದ್ದು, ಅದರಲ್ಲಿ 3,106 ರೈತರು ತಮ್ಮ ಹಕ್ಕು ಚಲಾಯಿಸಿದರು. ಶೇ 69ರಷ್ಟು ಮತದಾನವಾಗಿದೆ.

ಬೆಳಿಗ್ಗೆ 9 ಗಂಟೆಯಿಂದ ಆರಂಭಗೊಂಡ ಮತದಾನ ಸಂಜೆ 4 ಗಂಟೆ 20 ನಿಮಿಷದವರೆಗೆ ನಡೆಯಿತು. ಬೆಳಿಗ್ಗೆ 11 ಗಂಟೆವರೆಗೂ ನೀರಸವಾಗಿದ್ದ ಮತದಾನ ಮಧ್ಯಾಹ್ನ 12 ಗಂಟೆ ನಂತರ ಬಿರುಸು ಪಡೆದು ಕೊಂಡಿತು. ರೈತರು ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡುತ್ತಿದ್ದ ದೃಶ್ಯ ಕಂಡು ಬಂತು.

ಪ್ರತಿ ಬಾರಿ ಅವಿರೋಧ ಆಯ್ಕೆ ನಡೆಯುತ್ತಿದ್ದ ಕಾರ್ಖಾನೆಗೆ ಈ ಬಾರಿ ಬಿಜೆಪಿ ಬೆಂಬಲಿಗರು ಸ್ಪರ್ಧೆ ಮಾಡಿದ್ದರಿಂದ ಚುನಾವಣಾ ಕಣ ರಂಗೇರಿತು. ಹೀಗಾಗಿ, 8 ಸ್ಥಾನಗಳಲ್ಲಿ ಅಮರಕುಮಾರ ಖಂಡ್ರೆ ಪೆನಾಲ್ ಮತ್ತು ಬಿಜೆಪಿ ಬೆಂಬಲಿತರ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತು. ಒಟ್ಟು 13 ನಿರ್ದೇಶಕರ ಸ್ಥಾನಗಳ ಪೈಕಿ 5 ಸ್ಥಾನಗಳು ಅವಿರೋಧ ಆಯ್ಕೆಗೊಂಡ ಹಿನ್ನೆಲೆಯಲ್ಲಿ 8 ಸ್ಥಾನಗಳಿಗೆ ಚುನಾವಣೆ ನಡೆಯಿತು. ಸಾಮಾನ್ಯ ಕ್ಷೇತ್ರ 5, ಸಾಮಾನ್ಯ ಮಹಿಳಾ ಕ್ಷೇತ್ರ 2 ಮತ್ತು ಪರಿಶಿಷ್ಟ ಜಾತಿ 1 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 15 ಅಭ್ಯರ್ಥಿಗಳು ಕಣದಲ್ಲಿದ್ದರು.

## ಔರಾದನಲ್ಲಿ ಗಮನ ಸೆಳೆದ ಆರ್‌ಎಸ್‌ಎಸ್ ಪಥಸಂಚಲನ



ಮಲ್ಲಮ್ಮ ನುಡಿ ವಾರ್ತೆ

ಔರಾದ:ಅ.7:ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ಹಾಗೂ ವಿಜಯದಶಮಿ ಅಂಗವಾಗಿ ಔರಾದ(ಬಿ) ಪಟ್ಟಣದಲ್ಲಿ ಸೋಮವಾರ ಆರ್‌ಎಸ್‌ಎಸ್ ಪಥ ಸಂಚಲನ ಯಶಸ್ವಿಯಾಗಿ ನಡೆಯಿತು.

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಸಂಘದ ಧಿರಿಸಿನಲ್ಲಿ ಕೈಯಲ್ಲಿ ಲಾಠಿ ಹಿಡಿದು ಪಥಸಂಚಲನದ ಕೊನೆಯವರೆಗೂ ಭಾಗವಹಿಸಿ ಸ್ವಯಂ ಸೇವಕರ ಹುಮ್ಮಸ್ಸು ಹೆಚ್ಚಿಸಿದರು. ಪ್ರಮುಖರಾದ ಕಿರಣ ಉಪ್ಪೆ, ಹಣಮಂತರಾವ ಪಾಟೀಲ, ನಾಗೇಶ ಚನ್ನಾರೆಡ್ಡಿ, ವಿಜಯಮಹಾಂತೇಶ ಸೇರಿದಂತೆ ಅನೇಕ ಗಣ್ಯರು ಪಥ ಸಂಚಲನದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಪಟ್ಟಣದ ಬಸವನಗಲ್ಲಿಯ ಅಗ್ನಿ ಬಸವಣ್ಣ ದೇವಸ್ಥಾನದ ಹತ್ತಿರದಿಂದ ಆರಂಭಗೊಂಡ ಪಥ ಸಂಚಲನವು ಪಟ್ಟಣದ ಗಾಂಧಿ ಚೌಕ್, ಶೆಟಕಾರ ಗಲ್ಲಿ, ಪಾಂಡುರಂಗ ಮಂದಿರ, ದೇಶಮುಖ ಗಲ್ಲಿ, ಹನುಮಾನ ಮಂದಿರ, ಅಮರೇಶ್ವರ ಮಂದಿರ, ಬಸವೇಶ್ವರ ವೃತ್ತ, ಭವಾನಿ ಮಂದಿರ, ಅಮರೇಶ್ವರ ಕಾಲೋನಿ, ಎಪಿಎಂಸಿ ವೃತ್ತ, ಚನ್ನಬಸವೇಶ್ವರ ವೃತ್ತದ ಮಾರ್ಗವಾಗಿ ಅಮರೇಶ್ವರ ಕಾಲೇಜು ಆವರಣದಲ್ಲಿ ಸಂಪನ್ನಗೊಂಡಿತು.

ಪಥ ಸಂಚಲನದಲ್ಲಿ ಗಣವೇಷಧಾರಿ ಸ್ವಯಂ ಸೇವಕರು ವಾದ್ಯಕ್ಕೆ ತಕ್ಕಂತೆ ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದರು. ರಸ್ತೆಯ ಎರಡು ಬದಿಗಳ ಇಕ್ಕೆಲಗಳಲ್ಲಿ ನಿಂತಿದ್ದ ಜನರು ಸಾಲು ಸಾಲಾಗಿ ಅಚ್ಚುಕಟ್ಟಾಗಿ ನಡೆದ ಪಥ ಸಂಚಲನವನ್ನು ವೀಕ್ಷಿಸಿದರು. ನಗರದ ಪ್ರಮುಖ ಬೀದಿಗಳನ್ನು ರಂಗೋಲಿ, ಪುಷ್ಪಗಳಿಂದ ಅಲಂಕರಿಸಿ ಪಥ ಸಂಚಲನವನ್ನು ಜನರು ಸ್ವಾಗತಿಸಿದರು. ಗಣವೇಷಧಾರಿಗಳ ಮೇಲೆ ಪುಷ್ಪಗಳ ಮಳೆಗರೆದು, ಜಯಘೋಷ ಮೊಳಗಿಸಿದರು. ಭಗವಾ ಧ್ವಜ ಹಾಗೂ ಸಂಘದ ಸಂಸ್ಥಾಪಕರ ಭಾವಚಿತ್ರಕ್ಕೆ ಜನರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

## ಮುಂದಿನ 4–6 ತಿಂಗಳಿನಲ್ಲಿ ಪೆಟ್ರೋಲ್ ಕಾರು ದರದಲ್ಲಿ ಇವಿ ಸಿಗುತ್ತೆ: ಗಡ್ಕರಿ



ನವದೆಹಲಿ:ಅ.7: ಮುಂದಿನ ನಾಲ್ಕರಿಂದ ಆರು ತಿಂಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಬೆಲೆ ಪೆಟ್ರೋಲ್–ಡೀಸೆಲ್ ಬೆಲೆಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಎಲೆಕ್ಟ್ರಿಕ್ ವಾಹನಗಳನ್ನು ಬಿಡುಗಡೆ ಮಾಡಿದಾಗ, ಬ್ಯಾಟರಿ ಬೆಲೆ ಪ್ರತಿ ಕಿಲೋವ್ಯಾಟ್ ಗಂಟೆಗೆ 150 ಡಾಲರ್ ಆಗಿತ್ತು. ಇಂದು ಅದು ಪ್ರತಿ ಕಿಲೋವ್ಯಾಟ್ ಗಂಟೆಗೆ 55 ಡಾಲರ್‌ನಿಂದ 65 ಡಾಲರ್‌ಗೆ ಇಳಿಕೆಯಾಗಿದೆ. ಮುಂಬರುವ ನಾಲ್ಕರಿಂದ ಆರು ತಿಂಗಳಲ್ಲಿ, ಎಲೆಕ್ಟ್ರಿಕ್ ಸ್ಕೂಟರ್‌ಗಳು, ಎಲೆಕ್ಟ್ರಿಕ್ ಕಾರುಗಳು ಮತ್ತು ಎಲೆಕ್ಟ್ರಿಕ್ ಬಸ್‌ಗಳು ಪೆಟ್ರೋಲ್–ಡೀಸೆಲ್ ಬೆಲೆಗೆ ಸಮಾನವಾಗುತ್ತವೆ ಎಂದು ನಾನು ಭಾವಿಸುತ್ತೇನೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪಳೆಯುಳಿಕೆ ಇಂಧನಗಳ ಮೇಲೆ ಅವಲಂಬನೆ ಮಾಡುವುದು ಆರ್ಥಿಕತೆ ದೃಷ್ಟಿಯಿಂದ ಹಾನಿಕಾರಕ. ಭಾರತವು ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯು ಆರ್ಥಿಕ ಹೊರೆಯಾಗಿದೆ. ಇಂಧನ ಆಮದಿಗೆ ವಾರ್ಷಿಕವಾಗಿ 22 ಲಕ್ಷ ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಹೀಗಾಗಿ ಎಥೆನಾಲ್, ಸಿಎನ್‌ಜಿ ಅಥವಾ ಐಸೊಬುಟನಾಲ್‌ನಲ್ಲಿ ಚಲಿಸುವ ಎಲೆಕ್ಟ್ರಿಕ್ ಟ್ರಾಕ್ಟರ್‌ಗಳು ಮತ್ತು ಎಂಜಿನ್‌ಗಳನ್ನು ಅಭಿವೃದ್ಧಿಪಡಿಸಲು ಟ್ರಾಕ್ಟರ್ ತಯಾರಕರು ಮತ್ತು ಕೃಷಿ ಸಂಶೋಧಕರಿಗೆ ಸಭೆಯಲ್ಲಿ ಹೇಳಿದ್ದೇನೆ ಎಂದರು. ಈ ನಾವೀನ್ಯತೆಗಳು ಡೀಸೆಲ್ ಆಮದು ಮತ್ತು ಮಾಲಿನ್ಯವನ್ನು ಕಡಿಮೆ ಮಾಡಲು ಮತ್ತು ಗ್ರಾಮೀಣ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡಲಿದೆ ಎಂದು ತಿಳಿಸಿದರು.

ನಾನು ಸಾರಿಗೆ ಸಚಿವನಾಗಿ ಅಧಿಕಾರ ವಹಿಸಿಕೊಂಡಾಗ ಭಾರತೀಯ ಆಟೋಮೊಬೈಲ್ ಉದ್ಯಮದ ಗಾತ್ರ 14 ಲಕ್ಷ ಕೋಟಿ ರೂ. ಇತ್ತು. ಈಗ ಭಾರತೀಯ ಆಟೋಮೊಬೈಲ್ ಉದ್ಯಮದ ಗಾತ್ರ 22 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ಹೇಳಿದರು. ಪ್ರಸ್ತುತ ಅಮೆರಿಕದ ಆಟೋಮೊಬೈಲ್ ಉದ್ಯಮದ ಗಾತ್ರ 78 ಲಕ್ಷ ಕೋಟಿ ರೂ. ಇದ್ದರೆ ಚೀನಾ 47 ಲಕ್ಷ ಕೋಟಿ ರೂ. ಹೊಂದಿದ್ದು, ಭಾರತ ಮೂರನೇ ಸ್ಥಾನದಲ್ಲಿದೆ.

## ದೇವೇಂದ್ರ ಫಡ್ನವಿಸರನ್ನು ನೋಡಿ ಸಿದ್ದರಾಮಯ್ಯ ಕಲಿಯಲಿ : ಭಗವಂತ ಖೂಬಾ



ಬೀದರ:ಅ.7:ಅತಿವೃಷ್ಟಿಯಿಂದತೊಂದರೆಯಲ್ಲಿದ್ದ ಮಹಾರಾಷ್ಟ್ರರಾಜ್ಯದರೈತರಕಷ್ಟವನ್ನುಅರಿಯಲು, ಮುಖ್ಯಮಂತ್ರಿಗಳಾದ ಸನ್ಮಾನ್ಯಶ್ರೀ ದೇವೇಂದ್ರ ಫಡ್ನವಿಸ್ ಜೀಯವರು, ಅತಿವೃಷ್ಟಿಯಾದಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ, ರೈತರ ಸಂಕಷ್ಟಅರಿತು, ಒಟ್ಟು 31,628 ಕೋಟಿರೂಪಾಯಿವಿಶೇಷಪ್ಯಾಕೇಜ್‌ಅನ್ನು ಘೋಷಿಸಿ, ಬೆಳೆ ಹಾಳಾದ ಪ್ರತಿ ಹೆಕ್ಟರಗೆರೂ. 47,000/– ನಗದು ಪರಿಹಾರವನ್ನುರೈತರಖಾತೆಗೆಜಮಾ ಮಾಡುವುದಾಗಿ ತಿಳಿಸಿದ್ದಾರೆ, ಈ ಮೂಲಕ ಮಹಾರಾಷ್ಟ್ರರೈತರ ಪಾಲಿಗೆ ಬೆಳಕಾಗಿದ್ದಾರೆ, ಇತ–ರೆರಾಜ್ಯದ ಮುಖ್ಯಮಂತ್ರಿಗಳಿಗೆ ಮಾದರಿಯಾಗಿದ್ದಾರೆ. ರೈತರ ಪರವಾಗಿ ಶ್ರೀ ದೇವೇಂದ್ರಫಡ್ನವಿಸ್ ಜೀಯವರಿಗೆ ಅಭಿನಂದನೆಗಳು ಸಲ್ಲಿಸುವುದಾಗಿ ಮಾಜಿಕೇಂದ್ರಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ಆದರೆನಮ್ಮರಾಜ್ಯದಮುಖ್ಯಮಂತ್ರಿ ಸಿದ್ದರಾಮಯ್ಯನವರು, ಅತಿವೃಷ್ಟಿಯಾಗಿತೊಂದರೆಅಲ್ಲಿದ್ದರುಒಂದು ದಿನಾನೂ ಅತಿವೃಷ್ಟಿ ಜಿಲ್ಲೆಗಳಿಗೆ ಭೇಟಿ ನೀಡಿಲ್ಲಾ, ಆಯಾಜಿಲ್ಲಾ ಉಸ್ತುವಾರಿಗಳು ಎರಡೆರಡು ಬಾರಿ ಹೋಗಿ ಮುಖ್ಯಮಂತ್ರಿಗಳಗೆ ಮನವಿ ಮಾಡಿ, ಬನ್ನಿ ಅತಿವೃಷ್ಟಿಯ ಬಗ್ಗೆ ಗಮನಹರಿಸಿ ಎಂದು ಬೇಡಿ–ಕೊಂಡರು ಬಂದಿರಲಿಲ್ಲಾ, ಬಿಜೆಪಿ ಪಕ್ಷದಿಂದ ತಂಡರಚನೆಯಾದ ವಿಷಯ ತಿಳಿದ ಮೇಲೆ ಆದರೆ–ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಾ, ಕಾಲಹರಣ ಮಾಡುತ್ತಾ ಕುಳಿತಿದ್ದರು, ನಾಮಕೆವಾಸ್ತೆ ಒಂದು ದಿನ ಹೇಲಿಕಾಪ್ಟರ್ ಮೂಲಕ ವೀಕ್ಷಣೆ ಮಾಡಿ ಅತಿಕಡಿಮೆ ಪರಿಹಾರ ಘೋಷಿಸದ್ದಾರೆ, ಇಲ್ಲಿಯವರೆಗೆ ಘೋಷಿಸಿರುವ ಪರಿಹಾರ ಬಿಡುಗಡೆ ಮಾಡದೇ ನಮ್ಮರೈತರ ಬಾಳಿಗೆ ಕತ್ತಲಾಗಿದ್ದಾರೆ. ರಾಜ್ಯದರೈತರ ಬಗ್ಗೆ ಇಷ್ಟೊಂದುಅಸಡ್ಡೆ, ಆಲಸ್ಯ ಹೊಂದಿರುವ ಸಿದ್ದರಾಮಯ್ಯ ಅವರಿಗೆಮತ್ತುಅವರಎಲ್ಲಾಉಸ್ತುವಾರಿ ಸಚಿವರುಗಳಿಗೆ ಅನ್ನದಾತರ ಶಾಪ್‌ತಟ್ಟದೇಇರದುಎಂದು ಖೂಬಾ ಬೇಸರ ವ್ಯಕ್ತಪಡಿಸಿದ್ದಾರೆ.

## ರೇಬಿಸ್‌ನಿಂದ ಪ್ರತಿ ವರ್ಷ 20 ಸಾವಿರ ಸಾವು: ಡಾ.ಸಮುದ್ರ ಕುಲಕರ್ಣಿ



ಬೀದರ. ಅ. 07: 'ರೇಬಿಸ್‌ನಿಂದ ದೇಶದಲ್ಲಿ ಪ್ರತಿ ವರ್ಷ 20,562 ಮಂದಿ ಸಾವನ್ನಪ್ಪುತ್ತಿದ್ದಾರೆ' ಎಂದು ಮುಖ್ಯ ಪಶು ವೈದ್ಯಾಧಿಕಾರಿ ಡಾ.ಸಮುದ್ರ ಕುಲಕರ್ಣಿ ತಿಳಿಸಿದರು.

ನಗರದ ಗುರುನಾನಕ ದೇವ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ರೇಬಿಸ್ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, 'ವಾರ್ಷಿಕ ಸಾವುಗಳಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಸಂಖ್ಯೆ ಶೇ 40ರಷ್ಟಿದೆ' ಎಂದರು.

'ದೇಶದಲ್ಲಿ ನಾಯಿ ಕಡಿತವೇ ರೇಬಿಸ್‌ಗೆ ಪ್ರಮುಖ ಕಾರಣವಾಗಿದೆ. ಮಾರಣಾಂತಿಕ ರೇಬಿಸ್ ವೈರಸ್ ಮನುಷ್ಯನ ಮೆದುಳು ಹಾಗೂ ನರ ಮಂಡಲಕ್ಕೆ ಹಾನಿ ಉಂಟು ಮಾಡುತ್ತದೆ' ಎಂದು ಹೇಳಿದರು.

'ನಾಯಿ ಸೇರಿದಂತೆ ಸೋಂಕಿತ ಪ್ರಾಣಿ ಕಚ್ಚುವುದು, ಜೊಲ್ಲು, ಉಗುಳಿನ ಸಂಪರ್ಕದಿಂದ ರೇಬಿಸ್ ಹರಡುತ್ತದೆ. ಪ್ರಾಣಿಗಳಲ್ಲಿ ಅಸಾಮಾನ್ಯ ಆಕ್ರಮಣಶೀಲತೆ, ಹೆದರಿಕೆ, ಅತಿಯಾಗಿ ಜೊಲ್ಲು ಸೋರುವಿಕೆ, ನುಂಗಲು ತೊಂದರೆ, ನೀರು ನೋಡಿ ಹೆದರುವುದು, ಅಂಗವೈಕಲ್ಯ ರೋಗದ ಲಕ್ಷಣಗಳಾಗಿವೆ' ಎಂದು ತಿಳಿಸಿದರು.

'ರೇಬಿಸ್ ತಡೆಗಟ್ಟಲು ಸಾಕು ಪ್ರಾಣಿಗಳಿಗೆ ನಿಯಮಿತವಾಗಿ ಲಸಿಕೆ ನೀಡಬೇಕು. ಅಲೆದಾಡುವ, ಕಾಡು ಪ್ರಾಣಿಗಳ ಸಂಪರ್ಕ ತಪ್ಪಿಸಬೇಕು. ಪ್ರಾಣಿಗಳ ಅನುಮಾನಾಸ್ಪದ ವರ್ತನೆ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಪ್ರಾಣಿ ಕಚ್ಚಿದರೆ ಅಥವಾ ಪರಚಿದರೆ ತಕ್ಷಣ ವೈದ್ಯಕೀಯ ನೆರವು ಪಡೆಯಬೇಕು' ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ನಿರ್ದೇಶಕ ಆರ್.ಡಿ.ಸಿಂಗ್, ಪ್ರಾಚಾರ್ಯೆ ವೀಣಾ ಸೋರಗಾವಿ, ಯೋಗೇಂದ್ರ ಕುಲಕರ್ಣಿ, ವಿಕ್ರಮ ಚಾಕೋತೆ ಇದ್ದರು.

## ಮುಖ್ಯ ನ್ಯಾಯಮೂರ್ತಿ ಗವಾಯಿ ಮೇಲೆ ಬೂಟು ಎಸೆಯಲು ಪ್ರಯತ್ನ ಮಾಡಿದ್ದ ಹಿರಿಯ ವಕೀಲ ಕಿಶೋರ್ ರಾಕೇಶ್ ಕ್ರಮ ಖಂಡನೀಯ



ಬೀದರ. ಅ. 07 : ಕೆಲವೇ ಗಂಟೆಗಳಲ್ಲಿ ಬೂಟು ಎಸೆದ ಕಿಶೋರ್ ರಾಕೇಶ್ ಅನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ, ಇದು ಬಿಜೆಪಿ ದಿಲ್ಲಿ ಸರಕಾರದ ನಿಯತ್ತು. ಒಬ್ಬ ದಲಿತ ಮುಖ್ಯ ನ್ಯಾಯಮೂರ್ತಿ ಬಗ್ಗೆ ಅಸಹನೆ ಎದ್ದು ತೋರಿಸುತ್ತದೆ, ಮನುವಾದಿಗಳು ಸಂವಿಧಾನ ಮೇಲೆ ನಂಬಿಕೆ ಇಲ್ಲ. ಆರ್ ಎಸ್ ಎಸ್ ಆಹ್ವಾನಕ್ಕೆ ಮುಖ್ಯ ನ್ಯಾಯಾಧೀಶರ ತಾಯಿ ತಿರಸ್ಕಾರ ಮಾಡಿದಕ್ಕೆ ಮನುವಾದಿಗಳು ತಮ್ಮ ಸಿಟ್ಟು ತೋರಿಸಿದ್ದ ಪರಿ ಇದು. ಈ ದೇಶದಲ್ಲಿ ಚಾತುರ್ವರ್ಣ ಜೀವಂತೆ ಇದೆ ಅನ್ನಲು ಇದೆ ಸಾಕ್ಷಿ, ಶೂದ್ರರನ್ನು ಇನ್ನೂ ಉಚ್ಚ ಸಮಾಜ ಸಮಾನ ಎಂದು ಒಪ್ಪುವುದಿಲ್ಲ, ದಲಿತರು ಹಿಂದೂ ಅಲ್ಲವೇ? ಹಿಂದೂ ಎಲ್ಲಾ ಒಂದೇ ಅನ್ನುವವರು ಹಿಂದೂ ದಲಿತ ಹಿಂದೂ ಹಿಂದುಳಿದವರು ಎನ್ನುವ ಭೇದ ಮಾಡುವುದರಿಂದ ಹಿಂದೂ ಧರ್ಮಕ್ಕೆ ಹಿನ್ನಡೆ ಆಗುತ್ತಿದೆ ಅನ್ನುವ ಪರಿಜ್ಞಾನ ಇಲ್ಲ. ಆದ–ರಿಂದ ಬಸವಾದಿ ಶರಣರ ತತ್ವ ಸಿದ್ಧಾಂತಗಳ ಆದರ್ಶ ಪಾಲಿಸಬೇಕು, ಅಂಬೇಡ್ಕರ್ ಬರೆದ ಸಂವಿಧಾನವನ್ನು ಗೌರವಿಸಬೇಕು, ಇದೆ ಭಾರತ, ಆರ್ ಎಸ್ ಎಸ್ ಭಾರತ ನಮಗೆ ಬೇಕಿಲ್ಲ. ದೇಶ ಉಳಿಯಬೇಕಾದರೆ ಜಾತಿ ಧರ್ಮ ಲಿಂಗ ವರ್ಣ ವರ್ಗ ಭೇದ ಕೊನೆಗಾಣಿಸಬೇಕು ಎಂದು ಶ್ರೀಕಾಂತ ಸ್ವಾಮಿ, ಗೌರವ ಅಧ್ಯಕ್ಷ, ಸಂವಿಧಾನ ಸಂರಕ್ಷಣಾ ಸಮಿತಿ ಬೀದರ ತಿಳಿಸಿದ್ದಾರೆ.

# ರಾಮಾಯಣ ಮೂಲಕ ಜೀವನದ ಮೌಲ್ಯ ತಿಳಿಸಿಕೊಟ್ಟವರು ವಾಲ್ಮೀಕಿ:ಅಲ್ಲಮಪ್ರಭು ಪಾಟೀಲ

ಕಲಬುರಗಿ,ಅ.7ಇಡೀ ವಿಶ್ವಕ್ಕೆ "ರಾಮಾಯಣ"ಮಹಾಕಾವ್ಯದಮೂಲಕ ಭರತ ಖಂಡದ ಸಂಸ್ಕೃತಿ, ಸಂಸ್ಕಾರ ನತ್ತು ಮಾನವೀಯ ಮೌಲ್ಯವನ್ನು ತಿಳಿಸಿಕೊಟ್ಟ ಮೊದಲ ಮಹಾ ಕವಿ ವಾಲ್ಮೀಕಿಯವರಾಗಿದ್ದಾರೆ ಎಂದು ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.

ಮಂಗಳವಾರ ಇಲ್ಲಿನ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ,ಜಿಲ್ಲಾಪಂಚಾಯತ್,ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ರಾಮಾಯಣದರಚನೆಕಾರನಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಾಲ್ಮೀಕಿ ಅವರ ರಾಮಾಯಣ ಮಹಾಕಾವ್ಯ ದೇಶದ ಸಾಹಿತ್ಯಕ್ಕೆ ಅತ್ಯುನ್ನತ ದೊಡ್ಡ ಕೊಡುಗೆ-ಯಾಗಿದೆ. ರಾಜ ನೀತಿ, ರಾಜ ಧರ್ಮ, ಮಾನವೀಯ ಮೌಲ್ಯ, ಸಂಸ್ಕಾರ, ಸಂಸ್ಕೃತಿ ಕುರಿತು ಹಾಗೂ ಮಾನವರೆಲ್ಲರು ಒಂದೇ ಎಂಬ ಸಂದೇಶ ನೀಡಿದ ವಾಲ್ಮೀಕಿಯವರ ತತ್ವದಂತೆ ಅಕ್ಷರ ಮತ್ತು ಸಂಸ್ಕಾರ ಕಲಿಯೋಣ. ಶಿಷ್ಠರನ್ನು ರಕ್ಷಿಸುವ ದುಷ್ಠರನ್ನು ಶಿಕ್ಷಿಸುವ ಕೆಲಸ ಮಾಡಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ವಾಲ್ಮೀಕಿ ಸಮುದಾಯ ಮಾತೃ ಹದಯವಿದ್ದಂತೆ. ಎಲ್ಲರನ್ನು ತೆಗೆದು-ಕೊಂಡು ಹೋಗುವ ನಾಯಕತ್ವದ ಗುಣ ಅವರಲ್ಲಿದೆ. ವಿಶ್ವಕ್ಕೆ ಮಾದರಿ ಮಹಾಕಾವ್ಯ "ರಾಮಾಯಣ" ನೀಡಿದ ವಾಲ್ಮೀಕಿ ಸಮ-ಸಮಾಜದ ನಿರ್ಮಾತವಾಗಿದ್ದಾರೆ. ಹಿಂದುಳಿದ ಈ ಸಮುದಾಯ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು.

ರಾಮಾಯಣ ಮತ್ತು ವಾಲ್ಮೀಕಿ ಸಮಗ್ರ ಸಂಶೋಧನೆಯಾಗಲಿ:

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಸುರಪುರ ತಾಲೂಕಿನ ಪ್ರಭು ಮಹಾವಿದ್ಯಾಲಯದ ಉಪನ್ಯಾಸಕ ಡಾ.ಉಪೇಂದ್ರನಾಯಕ್ ಮಾತನಾಡಿ, ರಾಮಾಯಣ ಮತ್ತು ವಾಲ್ಮೀಕಿ ಕುರಿತು ಪ್ರಗತಿಪರರು, ಬುದ್ಧಿಜೀವಿಗಳೆಂದು ಕರೆಸಿಕೊಂಡವರು ಅನೇಕ ಸುಳ್ಳು, ಕಪೋಲ ಕಲ್ಪಿತ ವಿಚಾರಗಳನ್ನು ಬಿತ್ತಿದ್ದಾರೆ. ವಾಲ್ಮೀಕಿಯನ್ನು ದರೋಡೆಕೋರನೆಂದು ಬಿಂಬಿಸಿದ್ದಾರೆ. ಹೀಗಾಗಿ ನೈಜ ಸತ್ಯ ಹೊರಹಾಕಲು ಸರ್ಕಾರ ಸಂಶೋಧನೆ ಮಾಡಬೇಕಿದೆ ಎಂದರು.ಪಾಶ್ಚಿಮಾತ್ಯ ರಾಷ್ಟಗಳು ಇಂದು ನಮ್ಮ ದೇಶದ ಆಚಾರ-ವಿಚಾರ,ಸಂಸ್ಕೃತಿ-ಸಂಸ್ಕಾರಅರಿಯಲು ಉತ್ಸುಕರಾಗಿದ್ದರೆ ಅಂದರೆ ಅದಕ್ಕೆ ಕಾರಣೀಭೂತರು ವಾಲ್ಮೀಕಿಯವರು. ಆದರೆ ನಾವು ನಮ್ಮ ಸಂಸ್ಕೃತಿಯನ್ನೆ ಮರೆತು ನಮ್ಮತನವನ್ನು ಬಿಟ್ಟು ಪಾಶ್ಚಿಮಾತ್ಯಸಂಸ್ಕೃತಿಗೆಮಾರುಹೋಗಿದ್ದು ದುರ್ದೈವದ ಸಂಗತಿ. 24 ಸಾವಿರ ಶ್ಲೋಕ, 7 ಕಾಂಡ ಒಳಗೊಂಡ ರಾಮಾಯಣದ ಮೂಲಕ ವಾಲ್ಮೀಕಿ ಅವರು ವಿಶ್ವಕ್ಕೆ ವಸುದೈವ ಕುಟುಂಬಕ್ಕಂ ಪರಿಕಲ್ಪನೆ ನೀಡಿದ್ದವರಾಗಿದ್ದಾರೆ. ಇಂತಹ ವಾಲ್ಮೀಕಿ ಸಮಾಜ ಇಂದು ನಾಯಕತ್ವ, ರಾಜಕೀಯ, ಒಗ್ಗಟಿನ ಕೊರತೆ ಅನುಭವಿಸುತ್ತಿದೆ ಎಂದರು.

ಮಹಾಪೌರರಿಂದ ಮೆರವಣಿಗೆಗೆ ಚಾಲನೆ

ವೇದಿಕೆ ಕಾರ್ಯಕ್ರಮದ ಮುನ್ನ ನಗರದ ಸರ್ದಾರ ವಲ್ಲಭಭಾಯ್ ಪಟೇಲ್ ವೃತ್ತದಿಂದ ರಂಗಮಂದಿರ ವರೆಗೆ ನಡೆದ ವಾಲ್ಮೀಕಿ ಭಾವಚಿತ್ರದ ಭವ್ಯ ಮೆರವಣಿಗೆಗೆ ಮಹಾನಗರ ಪಾಲಿಕೆಯ ಪ್ರಥಮ ಪ್ರಜೆಯಾಗಿರುವ ಮಹಾಪೌರರಾದ ವರ್ಷಾ ರಾಜೀವ ಜಾನೆ ಅವರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ಡಿ.ಸಿ. ಬಿ.ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಎಸ್.ಡಿ. ಶರಣಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಮೊದಲಾದವರು ಇದ್ದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರಿ, ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ನಂದಕುಮಾರ ಮಾಲಿಪಾಟೀಲ, ಗೌರವಾಧ್ಯಕ್ಷ ಗುರುರಾಜ ಎಚ್. ಸುಬೇದಾರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಆಹಾರ ಇಲಾಖೆಯ ಉಪನಿರ್ದೇಶಕ ಭೀಮರಾಯ, ರೇಷ್ಮೆ ಇಲಾಖೆಯ ಪ್ರಕಾಶ, ಪ್ರಾಂಶುಪಾಲರಾದ ಶಿವರಾಮ ಚವ್ಹಾಣ, ಅಮರನಾಥ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಸಮಾಜ ಬಾಂಧವರು, ಮುಖಂಡರು ಭಾಗವಹಿಸಿದ್ದರು. ಡಾ.ರಾಜಶೇಖರ್ ಎಸ್. ಮಾಂಗ್ ನಿರೂಪಿಸಿದರು, ವಿದ್ಯಾಧರ ಕಾಂಬಳೆ ಸ್ವಾಗತಿಸಿದರು.



# ಭವಾನಿ ಮಾತೆಯ ಭಾವಚಿತ್ರದ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.7:ತಾಲ್ಲೂಕಿನಆನಂದವಾಡಿ ಗ್ರಾಮದಲ್ಲಿ

ಸಿಗ ಹುಣ್ಣಿಮೆ, ಭವಾನಿ ಮಾತೆಯ ಖಾಂಡ ಪ್ರಯುಕ್ತ ಭವಾನಿ ಮಾತೆಯ ಭಾವಚಿತ್ರದ ಮೆರವಣಿಗೆ ನಡೆಯಿತು.

ಸಿದ್ಧರಾಮೇಶ್ವರ ಪಟ್ಟದೇವರು ಭವಾನಿ ಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೆರವಣಿಗೆಗೆ ಚಾಲನೆ ನೀಡಿದರು. ಪ್ರಮುಖರಾದ ಜಗನ್ನಾಥ ಸಿದ್ದೇಶ್ವರ, ಸಿದ್ದರಾಮೇಶ್ವ ಭುರೆ, ಸತೀಶ್ ಸಿದ್ದೇಶ್ವರೆ, ರಾಜಕುಮಾರ ಭುರೆ, ಗಂಗಶೆಟ್ಟಿ ಭುರೆ ಮಾಣಿಕಪ್ಪ ಭುರೆ, ಜಗದೀಶ ಘೋದೆ ಸೇರಿದಂತೆ ಇತರರು ಇದ್ದರು.

# ದುಬಲಗುಂಡಿ ಜೈ ಭವಾನಿ ಪಲ್ಲಕ್ಕಿ ಉತ್ಸವ ಪ್ರಯುಕ್ತ ಅನ್ನ ದಾಸೋಹ

ಮಲ್ಲಮ್ಮನುಡಿವಾರ್ತೆಹುಮನಾಬಾದ: ಅ.7:ತಾಲೂಕಿನದುಬಲಗುಂಡಿಗ್ರಾಮದ ಬಸವೇಶ್ವರ ವೃತ್ತ ಹತ್ತಿರ ಜೈಭವಾನಿ ಸಮಿತಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನವರಾತ್ರಿ ಮಹೋತ್ಸವ ಸಡಗರ ಸಂಭ್ರಮದಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಪಲ್ಲಕ್ಕಿ ಮಹೋತ್ಸವ ಅಂಗವಾಗಿ ವಿಶೇಷ ಅನ್ನದಾಸೋಹ ಜರುಗಿತು. ಅನ್ನ ದಾಸೋಹದಲ್ಲಿ ಸಮಸ್ತದುಬಲಗುಂಡಿಗ್ರಾಮದ ಸರ್ವ ಜನಾಂಗದವರು ಭಾಗವಹಿಸಿ ದೇವಿಯ ದರ್ಶನ ಪಡೆದು ಮಹಾಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ



ನಾಗರಾಜ ಟಿ. ಬೋಸಗೊಂಡ, ಜೈ ಭವಾನಿ ಸಮಿತಿ ಅಧ್ಯಕ್ಷ ರೇವಣ್ಣಪ್ಪ ನಾರಾಯಣಪುರ, ಉಪಾಧ್ಯಕ್ಷ ಸಂಗಮೇಶ ಗಂಗಶೆಟ್ಟಿ, ರಾಮಣ್ಣ ಪಸರ್ಗಿ, ವಿಶ್ವನಾಥ ಧುಮುನಸೂರ್, ರಮೇಶ ಧುತ್ತರಗಿ, ಸುನೀಲ ಕಣಜಿ, ಸುನೀಲ ಬೋನಾಕುಂಡಟಿ, ಶಂಕರ ಬಳಗಾರ, ರವಿ ಬೋನಾಕುಂಡಟಿ, ವೈಜಿನಾಥ ಕಲಶೆಟ್ಟಿ, ರಮೇಶ ಸಂಗನಾಯಕ, ಸುಭಾಷ ಬೋನಾಕುಂಡಟಿ, ಚನ್ನಪ್ಪ ಬಳತಿ, ರಾಜಕುಮಾರ ಆಣದೂರ, ವೆಂಕಟ ಗುಜರಾತಿ, ಮಲ್ಲಪ್ಪ ಪ್ಯಾಟಿ, ಸುಂದರ್ ಚಿಂಚೋಳಿ, ರಾಮಶೆಟ್ಟಿ ಸಿದ್ಧವೀರ್, ಮಹೇಶ್ ಸರ್ಜನ್, ಅಂಬಾದಾಸ್ ಮುಚಳಂಬಾ, ಪಾಂಡು ಜಮಾದರ್, ಸಾಗರ್ ಗಂಗಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಇಟಗಾ ಗ್ರಾಮ ಪಂಚಾಯತ್15ನೇ ಹಣಕಾಸಿನ ಅವ್ಯವಹಾರ ತನಿಖೆಗೆ ಆಗ್ರಹ

ಮಲ್ಲಮ್ಮನುಡಿವಾರ್ತೆಚಿಟಗುಪ್ಪ:ಅ.7: ತಾಲೂಕಿನ ಇಟಗಾ ಗ್ರಾಮ ಪಂಚಾಯತನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಏಪ್ರಿಲ್ 2025ರಿಂದ ಆಗಸ್ಟ್ 2025ರ ವರೆಗೆ ಸುಮಾರು 21 ಲಕ್ಷ ರೂಪಾಯಿ ಯಾವುದೇ ಕಾಮಗಾರಿಗಳು ಮಾಡದೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರು ಅವ್ಯವಹಾರ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಬೇಕೆಂದು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಗ್ರಾಮಸ್ಥರು ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಗ್ರಾಮದಲ್ಲಿ ಯಾವುದೇ ತುರ್ತು ಕಾಮಗಾರಿ ಕೆಲಸಗಳು ಮಾಡಬೇಕಾದರೆ ಕ್ರಿಯಾ ಯೋಜನೆಯಲ್ಲಿ ಇಲ್ಲ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ. 21ಲಕ್ಷ ರೂಪಾಯಿ ಕೈಗೊಂಡ ಕಾಮಗಾರಿ ಗ್ರಾಮ ಪಂಚಾಯತ್ ಸಭೆಯಲ್ಲಿ ಅನುಮೋದನೆ ಪಡೆ-ಯದೆ ಮನಬಂದಂತೆ ಹಣವನ್ನು ದುರುಪಯೋಗ ಮಾಡಿಕೊಂಡು ಅವ್ಯವಹಾರ ಮಾಡಿದ್ದಾರೆ. ಗ್ರಾಮ ಪಂಚಾಯತ್ ಅಧ್ಯಕ್ಷ ಸಂಬಂಧಿಕರಾದ ಧನರಾಜ ಅರ್ಜುನ್ ಅವರೇ ಎಲ್ಲ ಅಧಿಕಾರ ಚಲಾಯಿಸುತ್ತಿದಾರೆ. ಗ್ರಾಮ ಪಂಚಾಯತ್ ಅಧ್ಯಕ್ಷರು ಪಂಚಾಯತ್ ಕಚೇರಿಗೆ ಜಯಂತಿ ಕಾರ್ಯಕ್ರಮಕ್ಕೆ ಮಾತ್ರ ಬರುತ್ತಾರೆ. ಕಡತಗಳ ಮೇಲೆ ಸಹಿ ತೆಗೆದುಕೊಳಬೇಕಾದರೆ ಮನೆಗೆ ಹೋಗಿ ಸಹಿ ಪಡೆದುಕೊಳ್ಳುವ ಪ್ರಸ್ಥಿತಿ ಗ್ರಾಮ ಪಂಚಾಯತ್ ಅವರಿಗೆ ಹಾಗೂ ಗ್ರಾಮಸ್ಥರಿಗೆ ಆಗುತ್ತಿದೆ. 15ನೇ ಹಣಕಾಸಿನಲ್ಲಿ ಗುತ್ತಿಗೆದಾರ ಜಾನಿ ಪಟೇಲ್ ಎಂಬ ಏಜೆನ್ಸಿ ಮೇಲೆ ಹಣ ಪಾವತಿ ಮಾಡುತ್ತಿದ್ದಾರೆ ಅವರಿಂದ ಇಟಗಾ ಗ್ರಾಮ ಪಂಚಾಯತಿಗೆ ಸಾಮಗ್ರಿ ಸರಬರಾಜು ಮಾಡಿದ ಬಿಲ್ಲುಗಳು ಮಾತ್ರ ಇವೆ. ಖರೀದಿ ಮಾಡಿದ ಯಾವುದೇ ಸಾಮಾಗ್ರಿ ಇರುವುದಿಲ್ಲ. ಏಜೆನ್ಸಿ ಹೆಸರಿನ ಮೇಲೆ ಹಣ ಹಾಕಿ ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳು ಇವರಿಬ್ಬರ ಸಂಬಂಧಿಕರ ಹೆಸರಿನ ಮೇಲೆ ಹಣ ಪಡೆದಿರುತ್ತಾರೆ ಮಹಾತ್ಮ ಗಾಂಧೀಜಿ, ಬಾಬಾ ಸಾಹೇಬ್ ಅಂಬೇಡ್ಕರ್, ಅಬ್ದುಲ್ ನಜೀರಸಾಬರವರ ಕನಸು ಗ್ರಾಮಗಳ ಅಭಿವೃದ್ಧಿ ಮಾಡುವುದಿತ್ತು. ಆದರೆ ಇವರುಗಳು ಅವರ ಕನಸು ನನಸು ಮಾಡಲು ವಿಫಲರಾಗಿದ್ದಾರೆ. ಈ ಅವ್ಯವಹಾರದಲ್ಲಿ ಭಾಗಿಯಾದ ಅಭಿವೃದ್ಧಿ ಅಧಿಕಾರಿಗಳ ಮೇಲೆ ಮತ್ತು ಅಧ್ಯಕ್ಷರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೋಮವಾರ ನೀಡಿದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಗೋಪಾಲ ಮರಪಳ್ಳಿ, ಗೌಸಿಯಾ ಬೇಗಂ, ಪವಿತ್ರಾ, ಅನೀಲರೆಡ್ಡಿ, ಗ್ರಾಮಸ್ಥರಾದ ಸಂಜು ಲವನ, ಕಂಠಯ್ಯ ಸ್ವಾಮಿ, ಮಹಂತಯ್ಯಾ ಮಡಪತಿ, ಶ್ರೀನಿವಾಸ ಮೇತ್ರೆ, ಭೀಮಶಾ ಹರಸುರ್, ನೀಲಕಂಠರೆಡ್ಡಿ ಸೇರಿದಂತೆ ಇತರರು ಆಗ್ರಹಿಸಿದ್ದಾರೆ.



# ದೇವಾಲಯಕ್ಕೆ ಭಕ್ತರೇ ಆಸರೆ : ದೇಶಮುಖ



ಮಲ್ಲಮ್ಮನುಡಿ ವಾರ್ತೆ ಭಾಲ್ಕಿ:ಅ.7: ಮೊರಂಭಿಶರಣಬಸವೇಶ್ವರದೇವಾಲಯಕ್ಕೆ ಭಕ್ತರೇ ಆಸರೆಯಾಗಿದ್ದಾರೆ ಎಂದು ಕಲಬುರ್ಗಿ ಶರಣಬಸವೇಶ್ವರ ವಿದ್ಯಾವರ್ಧಕಸಂಘದಕಾರ್ಯದರ್ಶಿ ಬಸವರಾಜ್ ದೇಶಮುಖ ಹೇಳಿದರು.

ತಾಲೂಕಿನ ಮೋರಂಬಿ ಗ್ರಾಮದ ಶರಣ ಬಸವೇಶ್ವರ ದೇವಳದಲ್ಲಿ ಮಂಗಳವಾರ ನಡೆದ 53ನೆ ವರ್ಷದ ಸಿಗೆ ಹುಣ್ಣಿಮೆ ಸಂಬ್ರಮ, ಸುಮಂಗಲಿಯರೆಗೆ ಉಡಿತುಂಬುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮೊರಾಂಬಿಯ ಶರಣಬಸವೇಶ್ವರದೇವಾಲಯದಲ್ಲಿ ಶರಣ ಮಹದೇವಪ್ಪ ಗುಂದಗಿ ಯವರ ಸತ್ಯ ಸಂಕಲ್ಪದಂತೆ 52 ವರ್ಷಗಳಿಂದ ಸುಮಂಗಲಿಯರ ಉಡಿ ತುಂಬುವ ಕಾರ್ಯ ಕ್ರಮ ನಡೆಸಿಕೊಂಡು ಬರುತ್ತಿರುವುದು ಪ್ರಶಂಸನೀಯ ಕಾರ್ಯವಾಗಿದೆ.

ಈ ದೇವಸ್ಥಾನಕ್ಕೆ ಯಾವುದೇ ಆಸ್ತಿ ಇಲ್ಲ, ಭಕ್ತರ ಸಹಕಾರದಿಂದ ಮುಂದೆಯೂ ಈ ಕಾರ್ಯ ಹೀಗೆ ಮುನ್ನಡೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು. ತಾ.ಪಂ.ಮಾಜಿ ಅಧ್ಯಕ್ಷೆ ರೇಖಾ ವಿಲಾಸ ಪಾಟೀಲ್ ಮಾತನಾಡಿ, ದೇವಾಲಯದಲ್ಲಿ ನಿರಂತರ ದಾಸೋಹ ನಡೆಸಬೇಕೆಂದು ಲಿಂ.ಮಹದೇವಪ್ಪ ನವರ ಸಂಕಲ್ಪವಾಗಿದೆ, ಗೀತಾ ಖಂದ್ರೆಯವರು ಮುತುವರ್ಜಿ ವಹಿಸಿ ನಿರಂತರ ದಾಸೋಹ ಭವನಕ್ಕೆ ಸಾಕಾರ ನೀಡಬೇಕು ಎಂದು ಹೇಳಿದರು. ಡಾಕ್ಟರ್ ಅಶ್ವಿನಿ ಶರಣು ಅಷ್ಟೂರೆ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ಶರಣ ಬಸವೇಶ್ವರ ಚಾರಿಟೇಬಲ್ ಟ್ರಸ್ಟ್ ಮೊರಂಬಿಯ ಅಧ್ಯಕ್ಷ ಸಿದ್ರಾಮಪ್ಪ ಗುಂದಗಿ ಗೀತಾ ಖಂಡ್ರೆ ಯವರಿಗೆ ನಿರಂತರ ದಾಸೋಹ ಭವನ ನಿರ್ಮಿಸಲು ಮನವಿ ಪತ್ರ ಸಲ್ಲಿಸಿದರು.

ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಡಾಕ್ಟರ್ ಗೀತಾ ಖಂಡ್ರೆ ಅಧ್ಯಕ್ಷತೆ ವಹಿಸಿದ್ದರು. ಇದೇವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮೆರೆದ ಪ್ರಮುಖರಾದ ರೂಪಾ ಸಿದ್ರಾಮಯ್ಯ ಸ್ವಾಮಿ ಮತ್ತು ನಿರ್ಮಲ ಚಾನ್ಶೆಟ್ಟಿ ಮೈನಾಲೆ ಯಾವರಿಗೆ ವಿಶೇಷ ಸನ್ಮಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾವತಿ ಸೊಮನಾಥಪ್ಪ ಅಸ್ತುರೆ, ಶಿಲ್ಪಾ ಶಿವಾನಂದ ಪವಾಡಶೆಟ್ಟಿ, ಕಸ್ತೂರಬಾಯಿ ಕರಡೇ, ಶೋಭಾವತಿ ಜಯರಾಜ್ ಧಾಬಶೆಟ್ಟಿ, ಮಲ್ಲಿಕಾರ್ಜುನ್ ಸ್ವಾಮಿ, ಕಾವೇರಿ ಮಹೇಶ್ ಸಜ್ಜನ್ ಶೆಟ್ಟಿ, ಸವಿತಾ ಅಶೋಕ ಲದ್ದೆ, ರೇಖಾ ಸಂಜೀವ ಪಾಟೀಲ್, ಶಿವರುದ್ರಪ್ಪ ಜಗನಾಥಪ್ಪ ವಾರದ, ಗಾಯತ್ರಿ ಶಶಿಬ್ಬುಷಣ ವಾರದ, ಸೋಮಶೇಖರ್ ಗುಂದಗೆ, ಗುರುದೇವಿ ಗುಂದಗೆ, ವರ್ಷ ಉಚ್ಚೇಕರ, ಪ್ರಭಾವತಿ ಆಳ್ಳೆ, ಸಂಗಮ್ಮ ವಾರದ, ಪೂಜಾ ಧೂಮನಸುರೆ, ಅಂಕುಶರಾವ್ ಪಾಟೀಲ್, ಷಣ್ಮುಖಪ್ಪ ಉಚೆಕರ, ರಾಜೇಶ್ರೀ ಪಾಟೀಲ್ ಸೇಡಂ ಉಪಸ್ಥಿತ ರಿದ್ದರೂ. ಅಶ್ವಿನಿ ಆಸ್ತುರೆ ಸ್ವಾಗತಿಸಿದರು. ವಿಜಯಕುಮಾರ್ ವಾರದ ನಿರೂಪಿಸಿದರು. ಜ್ಯೋತಿ ಗುಂದಗೆ ವಂದಿಸಿದರು.



ಕಲಬುರಗಿ: ನ್ಯಾ.ಬಿ.ಆರ್.ಗವಾಯಿಯವರ ಮೇಲಿನ ದಾಳಿಯನ್ನು ಖಂಡಿಸಿ ನಗರದ ಜಗತ್ ವೃತ್ತದಲ್ಲಿ ಬೌದ್ಧ ಉಪಾಸಕರ ಸಂಘದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ಸಂದರ್ಭದಲ್ಲಿ ಅರ್ಜುನ ಭದ್ರೆ, ಹಣಮಂತ ಬೋಧನಕರ್, ಎ.ಬಿ.ಹೋಸಮನಿ ಸೆರಿದಂತೆ ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಅ 10,11ರಂದು ಅಂತರಾಷ್ಟ್ರೀಯ ಆಯುರ್ವೇದ ವಿಚಾರ ಸಂಕಿರಣ: ಡಾ:ಮಹಾಂತೇಶ್ ಸಾಲಿಮಠ




ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ಅ.7:ಶ್ರೀ ಗವಿಮಠದ ದೈವಿಕ ಆಶೀರ್ವಾದದೊಂದಿಗೆ, ಶ್ರೀ ಜಗದ್ಗುರುಗವಿಸಿದ್ದೇಶ್ವರಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮತ್ತು ಆರೋಗ್ಯ ಭಾರತಿ ಕರ್ನಾಟಕ ಉತ್ತರ (ರಿ) ಮತ್ತು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸಹಯೋಗದೊಂದಿಗೆ, ಅಂತರರಾಷ್ಟ್ರೀಯ ವಿಚಾರ ಸಂಕಿರಣ 'ಗವಿ ದೀಪ್ತಿ, ಕೌಶಲ್ಯ ಭಾರತಿ, ಅಕ್ಟೋಬರ್ 10 ಮತ್ತು 11, 2025 ರಂದು ಕೊಪ್ಪಳದ ಹೊಸಪೇಟೆ ರಸ್ತೆಯ ಮಧುಶ್ರೀ ಗಾರ್ಡನ್‌ನಲ್ಲಿ ಆಯೋಜಿಸಲಾಗಿದೆ ಎಂದು. ಡಾ:ಮಹಾಂತೇಶ ಸಾಲಿಮಠ ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಶಿ ಮಾತನಾಡಿದ ಅವರು.

ಈ ಪ್ರತಿಷ್ಠಿತ ಶೈಕ್ಷಣಿಕ ಸಭೆಯು ಆರೋಗ್ಯ ಭಾರತಿಯ ಪ್ರಮುಖ ಉಪಕ್ರಮವಾದ ಕೌಶಲ್ಯ ಭಾರತಿಯ ಭಾಗವಾಗಿದೆ. ಇದು ಆಯುರ್ವೇದ ಶಿಕ್ಷಣ, ವೈದ್ಯಕೀಯ ಕೌಶಲ್ಯಗಳು ಮತ್ತು ಸಂಶೋಧನೆಯಲ್ಲಿ ಶ್ರೇಷ್ಠತೆಯನ್ನು ಪೋಷಿಸಲು ಮೀಸಲಾಗಿರುವ ದೂರದೃಷ್ಟಿಯ ಚಳುವಳಿಯಾಗಿದೆ. ಜ್ಞಾನ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ-ಯ ಐತಿಹಾಸಿಕ ಕೇಂದ್ರವಾದ ಶ್ರೀ ಗವಿಮಠದ ಆಶ್ರಯದಲ್ಲಿ, ಆಯೋಜಿಸುತ್ತಿದೆ ಜಾಗತಿಕ ಪ್ರಸ್ತುತತೆಗಾಗಿ ಆಯುರ್ವೇದವನ್ನು ಬಲಪಡಿಸುವ ತನ್ನ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಹೇಳಿದರು. ಈ ಸಂಧರ್ಭದಲ್ಲಿ,

ಡಾ:ಎಸ್ ಏನ್ ಹಕ್ಕಂಡಿ, ಡಾ:ಸಿದ್ದನಗೌಡ ಪಾಟೀಲ್, ಡಾ:ಜಿಜಿ ಪಾಟೀಲ್, ಡಾ:ಶ್ರೀಧರ್, ಡಾ:ಅನಿತಾ, ಇನ್ನಿತರರು ಉಪಸ್ಥಿತರಿದ್ದರು.

ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸಾ, ಪ್ಯಾರಾ ಸರ್ಜಿಕಲ್, ಪಂಚಕರ್ಮ ಮತ್ತು ಮಹಿಳೆಯರ ಆರೋಗ್ಯ ಕಾರ್ಯವಿಧಾನಗಳು

ಆಚಾರ್ಯ ಸುಶ್ರುತರ ಯೋಗ ಸೂತ್ರಕ್ಕೆ ಅನುಗುಣವಾಗಿ ಕೌಶಲ್ಯ ಆಧಾರಿತ ಪ್ರದರ್ಶನಗಳು ಮತ್ತು ಪ್ರಾಯೋಗಿಕ ತರಬೇತಿ

ವಿದ್ಯಾರ್ಥಿಗಳುಮತ್ತುವಿದ್ಯಾಂಸರಿಗಾಗಿ ಪೇಪರ್, ಪೋಸ್ಟರ್ ಮತ್ತು ಕಾರ್ಯ ಮಾದರಿ ಸ್ಪರ್ಧೆಗಳು

ಆಯುರ್ವೇದ ನಾವೀನ್ಯತೆಗಳು, ಅಪ್ಲಿಕೇಶನ್‌ಗಳು, ಪರಿಕರಗಳು ಮತ್ತು ಪೇಟೆಂಟ್ ಪಡೆದ ಕಾರ್ಯವಿಧಾನಗಳನ್ನು ಒಳಗೊಂಡ ನಾವೀನ್ಯತೆ ಪ್ರದರ್ಶನ

# ಲೋಕಕಲ್ಯಾಣಕ್ಕಾಗಿ ಸಂಪನ್ನಗೊಂಡ ಗಾಳಿ ದುರ್ಗಾದೇವಿ ವಿಶೇಷ ಪೂಜೆ

ಮಲ್ಲಮ್ಮ ನುಡಿವಾರ್ತೆ

ಕುಕನೂರ:ಅ.7:ಸಂಪನ್ನ ಮಳೆ,ಬೆಳೆಯೊಂದಿಗೆ ಲೋಕಕಲ್ಯಾಣರ್ಥಕ್ಕಾಗಿ ಶ್ರೀಗಾಳಿ ದುರ್ಗಾದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳನ್ನು ಸಂಪನ್ನಗೊಳಿಸಿ ಅನ್ನಸಂತರ್ಪಣೆಯನ್ನು ಆಯೋಜಿಸಲಾಯಿತು.



ತಾಲೂಕಿನ ಮಂಡಲಗಿರಿ ಗ್ರಾಮದ ಶ್ರೀ ಗಾಳಿ ದುರ್ಗಾದೇವಿ ದೇವಸ್ಥಾನದಲ್ಲಿ ವರ್ಷದ ಪ್ರತಿ ಸಿಹಿ ಹುಣ್ಣಿಮೆಯ ದಿನದಂದು ಲೋಕಕಲ್ಯಾಣರ್ಥವಾಗಿ ವಿಶೇಷ ಪೂಜಾ ವಿಧಿ ವಿಧಾನಗಳೊಂದಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ನೆರವೇರಿಸುತ್ತಾ ಬಂದಿದ್ದು ಈ ವರ್ಷವೂ ಸಹ ದೇವಸ್ಥಾನದಲ್ಲಿ ಬೆಳಗಿನ ಜಾವದಿಂದ ವಿಶೇಷ ಪೂಜಾ ವಿಧಿ ವಿಧಾನ ಅಭಿಷೇಕ ಇತ್ಯಾದಿಗಳನ್ನು ನೆರ್ವೇರಿಸಲಾಯಿತು ನಂತರ ಭಕ್ತರು ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸುವುದರೊಂದಿಗೆ ತಮ್ಮ ಇಷ್ಟಾರ್ಥಗಳನ್ನು ಶ್ರೀಗಾಳಿ ದುರ್ಗಾದೇವಿಗೆ ಸಮರ್ಪಿಸುವುದರೊಂದಿಗೆ ದೇವಿ ಕೃಪೆಗೆ ಪಾತ್ರರಾದರು.

ನಂತರ ಮಧ್ಯಾಹ್ನದ ವೇಳೆಗೆ ಮಹಾಪ್ರಸಾದದ ಅನ್ನದಾಸೋಹ ಕಾರ್ಯಕ್ರಮವನ್ನು ಆಯೋಜಿಸಲಾಯಿತು, ವಿವಿಧ ಬಗೆ ಬಗೆಯ ಭಕ್ಷಗಳನ್ನು ಭಕ್ತರಿಗೆ ಗಾಳಿ ದುರ್ಗಾದೇವಿ ದೇವಸ್ಥಾನದ ಕಾಲೋನಿಯ ಮಹಿಳಾ ತಂಡದವರು ಅನ್ನ ಸಂತರ್ಪಣೆಯಲ್ಲಿ ವಿತರಿಸಿದರು.

ಈ ವೇಳೆಯಲ್ಲಿ ಪೂಜಾ ವಿಧಿ ವಿಧಾನಗಳನ್ನು ಶಿವಶರಣಯ್ಯ ಹಿರೇಮಠ ನೆರವೇರಿಸಿದರು. ಪ್ರಮುಖರಾದ ಮಲ್ಲಯ್ಯ ಗದುಗಿನ, ವೀರನಗೌಡ ತೋಟಗಂಟಿ, ಭೀಮರೆಡ್ಡಿ ಕರ್ಮುಡಿ, ಹನುಮಂತಪ್ಪ ಕೊನಾರಿ, ಜಯಪ್ರಕಾಶ್ ಗೌಡ ಪೊಲೀಸ್ ಪಾಟೀಲ, ವಿಶ್ವನಾಥ ಹೋರಪೇಟೆ,ಗೊಳನಗೌಡ ಮಾಲಿಪಾಟೀಲ, ಈಶ್ವರಯ್ಯ ಚಂದ್ರಗಿರಿ, ಶಿವನಗೌಡ ಬಿನ್ನಾಳ, ದೇವಪ್ಪ ದಳವಾಯಿ,ವಿಶ್ವನಾಥ ಹಿರೇಗೌಡರ್,ಮಾರುತಿ ಗೊಲ್ಲರ್, ಶರಣಯ್ಯ ಗದಗಿನ, ಹಂಚಳಪ್ಪ ಸಂಗಟಿ,ಅಶೋಕ್ ಗಾಣಿಗೇರ, ಮಾರುತಿ ಭಜಂತ್ರಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಸಾಹಿತಿಗಳಿಗೆ ಬೆಳೆಸಿದ, ರುಕ್ಮೋದ್ದೀನ್ ಇಸ್ಲಾಂಪೂರ:ತರನ್ನಳ್ಳಿ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:



ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಪತ್ರಿಕಾ ವಿತರಕರಾದ ಕೆ.ಪ್ರಭಾಕರ್ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಬರಹಗಾರರ ಸಂಘ ಹುಮ್ನಾಬಾದ್ ಹಾಗೂ ವಿವಿಧ ಕನ್ನಡ ಪರ ಸಾಹಿತಿಗಳು ಸೇರಿ ಕಲ್ಯಾಣ ಕರ್ನಾಟಕದ ಸಾಹಿತಿಗಳಾದ ರುಕ್ಮೋದ್ದೀನ್ ಇಸ್ಲಾಂಪೂರ್ ರವರಿಗೆ ಭಾವಪೂರ್ಣದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯರು ಸಾಹಿತಿಗಳಾದ ಶಿವಶಂಕರ ತರನ್ನಳ್ಳಿಯವರು ಮಾತನಾಡಿ, ನಮ್ಮ ಕಲ್ಯಾಣ ಕರ್ನಾಟಕಕ್ಕೆ ಒಬ್ಬ ಹಿರಿಯ ಸಾಹಿತಿ ರುಕ್ಮೋದ್ದೀನ್ ಇಸ್ಲಾಂಪೂರ ಅವರು ಬೀದರ ಜಿಲ್ಲೆಗೆ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಸಮ್ಮೇಳನಗಳಲ್ಲಿ ಭಾಗಿಯಾಗಿ, ಸಾಹಿತಿಗಳಿಗೆ ಬೆಳೆಸಿದ, ಅಲ್ಲದೇ ಕನ್ನಡಕ್ಕೆ ಅವರ ಕೊಡುಗೆ ಅಪಾರವಿದೆ ಎಂದು ನುಡಿದರು. ಹಾಗೂ ಆಯ್ .ಎಸ್. ಶಕಿಲ್ ಸಾಹಿತಿ ಮಾತನಾಡಿ,

ಕಲ್ಯಾಣ ಕರ್ನಾಟಕ ಭಾಗದ ಒಬ್ಬ ಸಾಹಿತ್ಯರತ್ನವನ್ನು ಕಳೆದುಕೊಂಡಂತಾಗಿದೆ. ರುಕುಮುದ್ದಿನ ರವರು ಹತ್ತು ಪುಸ್ತಕಗಳು ಬರೆದು ಗಡಿನಾಡಿಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಅವರ ಅಕಾಲಿ ಮರಣ ದುಃಖ ತಂದಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನುಡಿದರು, ರುಕುಮುದ್ದಿನ ಸಾಹಿತಿಗಳು ಸರಕಾರಿ ಸಾರಿಗೆ ಸಾರಿಗೆ ಇಲಾಖೆ ಅಧಿಕಾರಿಯಾಗಿ ಅವರು ನಿಷ್ಠಾವಂತರಾಗಿ ಕಾಯಕವನ್ನು ಮಾಡುತ್ತ ಬೇದಭಾವ ಇಲ್ಲದೆ ಸಾಹಿತ್ಯ ಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂದರು. ಪತ್ರಿಕಾ ವಿತರಕ ಕೆ.ಪ್ರಭಾಕರ್ ಮಾತನಾಡಿ,

ವಿಶ್ವದಾದ್ಯಂತ ಕನ್ನಡದ ಸಾಹಿತ್ಯ ಲೋಕವನ್ನು ಬಿಂಬಿಸುವಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಕೀರ್ತಿ ರುಕ್ಮೋದ್ದೀನ್ ಇಸ್ಲಾಂಪೂರರಿವರಿಗೆ ಸಲ್ಲುತ್ತದೆ. ಅವರ ಕೃತಿಗಳು ಇಂದಿನ ಯುವಕರಿಗೆ ಸ್ಫೂರ್ತಿ ನೀಡುತ್ತವೆ ಎಂದು ಹೇಳಿದರು. ರುಕ್ಮೋದ್ದೀನ್ ಇಸ್ಲಾಂಪೂರ ರವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಕರ್ನಾಟಕ ರಾಜ್ಯ ಬರಹಗಾರರ ಸಂಘದ ಜಿಲ್ಲಾಧ್ಯಕ್ಷರಾದ ವಿಜಯಕುಮಾರ್ ಚಟ್ಟಿ ರುಕುಮುದ್ದಿನವರ ಕವನ ವಾಚನ ಮಾಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಪ್ರಭಾಕರ್ ಕುಲಕರ್ಣಿ, ಕಸಾಪ ಮಾಜಿ ಅಧ್ಯಕ್ಷರಾದ ಶ್ರೀ ವೀರಂತರೆಡ್ಡಿ ಜಂಪಾ, ರವೀಂದ್ರ ಭಂಡಾರಿ, ಸಾರಿಗೆ ಇಲಾಖೆಯ ನಾರಾಯಣ ರೆಡ್ಡಿ ಟ್ರಾಫಿಕ್ ಸಂಚಾರಿ, ಹಣಮಂತ ಚಾಲಕರು, ಸುಖಾನಂದ ಚಾಲಕರು, ಮಲ್ಲಾರೆಡ್ಡಿ ನಿರ್ವಾಹಕರು, ಹಾಗೂ ಮಾರುತಿ ಸಂಚಾರಿ ನಿಯಂತ್ರಕರು ಉಪಸ್ಥಿತರಿದ್ದರು.

ಕಸಾಪ ಮಾಜಿ ಅಧ್ಯಕ್ಷರು ವೀರಂತ ರೆಡ್ಡಿ ಜಂಪಾ ಮಾತನಾಡಿ ಶ್ರೀ ರುಕ್ಮೋದ್ದಿನ್ ಇಸ್ಲಾಂಪೂರ ರವರನ್ನು ಕನ್ನಡಾಭಿಮಾನಿಗಳು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನೋಡಬೇಕೆನ್ನುವ ತವಕದಲ್ಲಿ ಇದ್ದರು. ಆದರೇ ವಿಧಿ ಅವರನ್ನು ಇಂದು ಇಲ್ಲವಾಗಿಸಿ ನಮ್ಮ ಭಾಗದ ಒಬ್ಬ ಸಾಹಿತಿಯನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದರು. ಈ ಸಂದರ್ಭದಲ್ಲಿ ಅನೇಕ ಅವರ ಹಿತೈಷಿಗಳು ಉಪಸ್ಥಿತರಿದ್ದು ನುಡಿನಮನ ಸಲ್ಲಿಸಿದರು.

# ಮಹಾಪುರುಷರನ್ನು ಜಾತಿಗೆ ಸೀಮಿತ ಮಾಡಬೇಡಿ:ಹರನಾಳ




ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಅ.7: ಈ ಜಗತ್ತಿಗೆ ಬಂದ ಎಲ್ಲ ಮಹಾಪುರುಷರು ದಾರ್ಶನಿಕರು ಸಂತ– ಶರಣರು ಯಾವುದೇ ಒಂದು ಸೀಮಿತ ಜಾತಿಯ ಜನರ ಉದ್ಧಾರಕ್ಕಾಗಿ ಬಂದವರಲ್ಲ ಅವರು ಇಡೀ ಮನುಕುಲದ ಒಳಿತಿಗಾಗಿ ಬಂದವರಾಗಿದ್ದಾರೆ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ಮುದ್ದೇಬಿಹಾಳ ಎಂಜಿಎಂಕೆ ಪ.ಪೂ. ಕಾಲೇಜ ಪ್ರಾಚಾರ್ಯ ಡಾ.ಸುರೇಶ ಹರನಾಳ ಹೇಳಿದರು. ಮಂಗಳವಾರ ಪಟ್ಟಣದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ತಾಲೂಕ ಆಡಳಿತ,ತಾಪಂ ತಾಳಿಕೋಟಿ ಸಮಾಜ ಕಲ್ಯಾಣ ಇಲಾಖೆ ಪುರಸಭೆ ತಾಳಿಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ನಿಮಿತ್ಯವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಾಮನಂತಹ ಆದರ್ಶ ವ್ಯಕ್ತಿಯನ್ನು ಸೃಷ್ಟಿಸಿದವರು ವಾಲ್ಮೀಕಿ, ಮತ್ತೆ ಅಂತಹ ವ್ಯಕ್ತಿಯನ್ನು ಸೃಷ್ಟಿಸಲು ಜಗತ್ತಿನಲ್ಲಿ ಈವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ. ವಾಲ್ಮೀಕಿ ರಾಮನ ಮೂಲಕ ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಲು ಸಮಾಜಕ್ಕೆ ಪಾಠ ಹೇಳಿದ್ದಾರೆ. ವಾಲ್ಮೀಕಿಯನ್ನು ಪೂಜಿಸುವ ಪ್ರತಿಯೊಬ್ಬರೂ ರಾಮಾಯಣ ಪೂಜಿಸಬೇಕು. ನಿಷ್ಠೆಗೆ ಹೆಸರಾದ ವಾಲ್ಮೀಕಿ ಜನಾಂಗದವರಲ್ಲಿ ಜಗತ್ತಿಗೆ ರಾಮಾಯಣ ಕೊಟ್ಟ ಮಹರ್ಷಿ ವಾಲ್ಮೀಕಿಯ ವಾರಸದಾರರು ನಾವು ಎಂಬ ಬಗ್ಗೆ ಹೆಮ್ಮೆ ಅಭಿಮಾನ ಇರಬೇಕು ಎಂದು ತಿಳಿಸಿದರು. ಯಾವುದೇ ಒಂದು ಸಮಾಜದ ಪ್ರಗತಿ ಆಗಬೇಕಾದರೆ ಆ ಸಮಾಜದ ಜನರು ಶಿಕ್ಷಣವಂತರಾಗಬೇಕು, ಆದ್ದರಿಂದ ವಾಲ್ಮೀಕಿ ಸಮಾಜದ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಒಳ್ಳೆಯ ಸಂಸ್ಕಾರಗಳನ್ನು ನೀಡುವ ಮೂಲಕ ಅವರ ಉಜ್ವಲ ಭವಿಷ್ಯದ ನಿರ್ಮಾಣಕ್ಕಾಗಿ ಪ್ರಯತ್ನಿಸಬೇಕು ಎಂದರು. ವಾಲ್ಮೀಕಿ ಸಮಾಜದ ಮುಖಂಡರಾದ ಅಶೋಕ ದೊರೆಗೋಳ, ಶರಣಗೌಡ ಪಾಟೀಲ (ಕರಿಭಾಂವಿ) ಮಾತನಾಡಿ ವಾಲ್ಮೀಕಿ ಸಮಾಜ ಬೇಡುವ ಸಮಾಜವಾಗದೆ ಸ್ವಾಭಿಮಾನದ ಸಮಾಜವಾಗಿದೆ. ನಮ್ಮ ಪೂರ್ವಜರು 122 ಸಂಸ್ಥಾನಗಳಲ್ಲಿ ರಾಜ್ಯಭಾರ ನಡೆಸಿದರೂ ಅವರು ಸಿರಿ ಸಂಪತ್ತು ಅಧಿಕಾರಕ್ಕಾಗಿ ರಾಜ್ಯಭಾರ ಮಾಡಲಿಲ್ಲ ಜನರ ಸೇವೆ ಅವರ ಮುಖ್ಯಧ್ಯೇಯವಾಗಿತ್ತು, ನಮ್ಮ ಸಮಾಜದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿ ತಹಸಿಲ್ದಾರ್ ಡಾ.ವಿನಯಾ ಹೂಗಾರ ಮಾತನಾಡಿ ಕೇವಲ ಮಹಾತ್ಮರ ಜಯಂತಿಗಳನ್ನು ಆಚರಿಸಿದರೆ ಸಾಲದು ಅವರು ಸಮಾಜಕ್ಕೆ ನೀಡಿದ ಉತ್ತಮ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅವಳಿಸಿಕೊಂಡಾಗ ಜಯಂತಿ ಆಚರಣೆಗೆ ಸಾರ್ಥಕತೆ ಆಗುತ್ತದೆ ಎಂದರು. ಇದೇ ಸಂದರ್ಭದಲ್ಲಿ 2024 –25 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಾಲ್ಮೀಕಿ ಸಮಾಜದ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪಿಜ್ಯೋತಿಖೋತ್,ತಾಪಂ ಸಹಾಯಕ ನಿರ್ದೇಶಕಿ ಸುಜಾತಾ ಯಡ್ರಾಮಿ,ಸ.ಕ.ಇ.ಕಛೇರಿ ಅಧೀಕ್ಷಕ ಶಿವಲಿಂಗಪ್ಪ ಹಚಡದ, ಕಂದಾಯ ನಿರೀಕ್ಷಕ ಸುರೇಶ ಅಮರಣ್ಣವರ, ನಿವೃತ್ತ ಶಿಕ್ಷಕ ಎಲ್.ಬಿ.ಕೊಡೆಕಲ್,ಸಿ.ಆರ್.ಸಿ.ರಾಜು ವಿಜಾಪುರ, ಸಿದ್ದಲಿಂಗಯ್ಯ ಪಾಟೀಲ, ವಾಲ್ಮೀಕಿ ಸಮಾಜದ ಪ್ರಮುಖರಾದ ಸಂಜೀವಪ್ಪ ಬರೆದೆನಾಳ, ಕಾಶಿನಾಥ ಪಾಟೀಲ, ಕುಮಾರ ಅಸ್ಕಿ, ಅಶೋಕ ಅಸ್ಕಿ, ಪ್ರಕಾಶ ಪಾಟೀಲ,ಯಮನಪ್ಪ ಬರ್ದೇನಾಳ, ಹಣವಂತ ಮೇಲಿನಮನಿ, ಹನುಮಂತರಾಯ ನಾಯ್ಕೋಡಿ, ಮಂಜುನಾಥ ಮಾಲಿ ಪಾಟೀಲ,ಅಂಬೇಡ್ಕರ್ ಸೇನೆಯ ಬಸ್ಸು ಮಾದರ, ಗೋಪಾಲ ಕಟ್ಟಿಮನಿ,ನಿಲಯ ಪಾಲಕರಾದ ಎಸ್. ಎನ್. ಮಲ್ಲಾಡೆ, ಎನ್.ವಿ.ಕೋರಿ, ಎಸ್.ಎಂ.ಕಲಬುರ್ಗಿ, ಮಹಾಂತೇಶ ತಾಳಿಕೋಟಿ, ಸಿಬ್ಬಂದಿಗಳಾದ ಮಂಜುನಾಥ ನರಸಣಗಿ, ನವೀನಕುಮಾರ ಇಜೇರಿ, ರಮೇಶ ಸಂಗಮ, ಹಣಮಂತ ಗೋಡ್ಯಾಳ, ಯೋಗನಾಥ ತಳವಾರ ಇದ್ದರು. ಮೆರವಣಿಗೆಗೆ ತಹಶೀಲ್ದಾರ್ ಚಾಲನೆ: ಇದಕ್ಕೂ ಮುನ್ನ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆಗೆ ತಹಸಿಲ್ದಾರ್ ಡಾ.ವಿನಯಾ ಹೂಗಾರ ತಹಸಿಲ್ದಾರ್ ಕಾರ್ಯಾಲಯದ ಆವರಣದಲ್ಲಿ ಚಾಲನೆ ನೀಡಿದರು. ಮೆರವಣಿಗೆ ಮಹಾರಾಣಾ ಪ್ರತಾಪ್ ಸಿಂಹ ವೃತ್ತ, ಶಿವಾಜಿ ವೃತ್ತ, ಕತ್ರಿ ಬಜಾರ, ಅಂಬೇಡ್ಕರ್ ವೃತ್ತ, ಶ್ರೀ ಬಸವೇಶ್ವರ ವೃತ್ತ ಮಾರ್ಗವಾಗಿ ವಾಲ್ಮೀಕಿ ಭವನಕ್ಕೆ ತಲುಪಿ ಸಮಾವೇಶಗೊಂಡಿತು.

# ಬಹುಜನ ಸಮಾಜ ಪಕ್ಷದಿಂದ ಡಿಸಿ ಕಚೇರಿ ಎದುರು ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಅ.7: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ಬಿ.ಆರ್. ಗವಾಯಿ ರವರಿಗೆ ಶೂ ಎಸೆದಿರುವ ಆರೋಪಿಯಾದ ಕಿಶೋರ್ ರಾಜೇಶ ಈತನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಶಿಕ್ಷೆಗೆ ಒಳಪಡಿಸುವಂತೆ ಆಗ್ರಹಿಸಿ ಬಹುಜನ ಸಮಾಜ ಪಕ್ಷದಿಂದ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಡಿಸಿ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಾಧೀಶರಾದ ಬಿ.ಆರ್. ಗವಾಯಿ ರವರಿಗೆ ಶೂ ಎಸೆದ ಘಟನೆ ಇಡೀ ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಅವಮಾನವಾಗಿದೆ. ಆರೋಪಿಯಾದ ಕಿಶೋರ್ ರಾಜೇಶ ಈತನಿಗೆ ಕಠಿಣ ಜೀವಾವಧಿ ಶಿಕ್ಷೆ ವಿಧಿಸುವ ಜೊತೆಗೆ ಅವನ ವಕೀಲಗಿರಿಯ ಲೈಸೆನ್ಸ್ ರದ್ದು ಮಾಡಬೇಕು. ಈ ದೇಶದ ಬೌದ್ಧ (ಎಸ್ಸಿ) ವ್ಯಕ್ತಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದು ಮೇಲ್ಜಾತಿ ಮನುವಾದಿಗಳಿಗೆ ಸಹಿಸಲಾಗುತ್ತಿಲ್ಲ.



ಈ ಮನುವಾದಿಗಳು ಹುದ್ದೆಯಲ್ಲಿ ಇರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರನ್ನು ಹಲ್ಲೆ ಮಾಡುತ್ತಾರೆ ಎಂದರೆ ಈ ದೇಶದ ಇನ್ನುಳಿದ ಅಸಹಾಯಕ ಶೋಷಿತರ ಸ್ಥಿತಿ ಹೇಗೆ? ಎಂಬುದರ ಬಗ್ಗೆ ಉನ್ನತ ಸ್ಥಾನದಲ್ಲಿ ಕುಳಿತು ಶೋಷಿತ, ದಮನಿತ, ದಲಿತರು ಒಮ್ಮೆ ಆಲೋಚಿಸಬೇಕಿದೆ. ಇಂತಹ ಅಹಿತಕರ ಘಟನೆ ಬಹುಜನ ಸಮಾಜ ಪಕ್ಷ ತೀವ್ರವಾಗಿ ಖಂಡಿಸುತ್ತದೆ. ಆದ್ದರಿಂದ ಆರೋಪಿಯಾದ ಕಿಶೋರ್ ರಾಜೇಶ ಈತನಿಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಆರೋಪಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ. ಜಿಲ್ಲಾ ಅಧ್ಯಕ್ಷ ಆನಂದ ಮಸ್ಕಿ, ಎಲ್. ಆರ್. ಭೋಸಲೆ, ತಿಪ್ಪಣ್ಣ ಕಿನ್ನೂರ, ಮೈಲಾರಿ ಶೇಳ್ಳಗಿ, ಬಸವರಾಜ ಝಳಕಿ, ಶರಣು ಹಂಗರಗಿ, ಶಿವಯೋಗಿ ಹಡಗಿಲ್, ಯಲ್ಲಪ್ಪಾ ಚಲವಾದಿ ಇದ್ದರು.

# ಶಿಕ್ಷಕರಿಗೆ ಮಕ್ಕಳು, ಶಾಲೆ ನಿಜವಾದ ಆಸ್ತಿ

ಕೊಡೇಕಲ್ಲ(ಹುಣಸಗಿ):ಅ.7:'ಒಬ್ಬ ವ್ಯಕ್ತಿ ಸಮಾಜದಲ್ಲಿ ಸಚ್ಚಾರಿತ್ರ್ಯವಂತನಾಗಿ ಬೆಳೆದು, ಉತ್ತಮ ವ್ಯಕ್ತಿ ಎಂದು ಗುರುತಿಸಿಕೊಂಡರೆ ಅದುವೇ ಗುರುಗಳಿಗೆ ಸಲ್ಲುವ ದೊಡ್ಡ ಕಾಣಿಕೆ' ಎಂದು ನಿವೃತ್ತ ಉಪನ್ಯಾಸಕ ಭೀಮನಗೌಡ ಗುಳಬಾಳ ಹೇಳಿದರು.

ಹುಣಸಗಿ ತಾಲ್ಲೂಕಿನ ಕೊಡೇಕಲ್ಲ ಗ್ರಾಮದಲ್ಲಿ 1996 ಸಾಲಿನ ಪ್ರಾಥಮಿಕ ಹಾಗೂ 1999ನೇ ಸಾಲಿನ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಭಾನುವಾರ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಸಮಾಜದಲ್ಲಿ ಯಾರಿಗೂ ಸಲ್ಲದ ಸ್ಥಾನ ಶಿಕ್ಷಕರಿಗೆ ಇದೆ. ಆದ್ದರಿಂದ ಶಿಕ್ಷಕರು ಕೂಡಾ ಯಾವುದೇ ತಾರತಮ್ಯ ಮಾಡದೇ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮವಹಿಸಿದಾಗ ಮಾತ್ರ ಶಿಕ್ಷಕ ಜೀವನ ಸಾರ್ಥಕ ಎಂದರು.

ಶಿಕ್ಷಕ ವೀರಣ್ಣ ಬೆಳ್ಳುಬ್ಬಿ ಮಾತನಾಡಿ, 'ಗುರು ಶಿಷ್ಯರ ಸಂಬಂಧಗಳು ಎಲ್ಲ ಎಲ್ಲೆಗಳನ್ನು ಮೀರಿದ್ದಾಗಿದೆ. ಅದು ಅಷ್ಟೇ ಪಾವಿತ್ರ್ಯತೆಯಿಂದ ಕೂಡಿದೆ. 26 ವರ್ಷಗಳ ಬಳಿಕ ಮತ್ತೆ ಎಲ್ಲ ಹಳೇ ವಿದ್ಯಾರ್ಥಿಗಳು ಕೂಡಿ–ಕೊಂಡು, ತಮಗೆ ಅಕ್ಷರ ಕಲಿಸಿದ ಗುರುಗಳನ್ನು ಒಂದೆಡೆ ಸೇರಿಸಿ ಗೌರವಿಸಿದ್ದು ಶ್ಲಾಘನೀಯ' ಎಂದರು.

ಹಳೇ ವಿದ್ಯಾರ್ಥಿಗಳಾದ ಬಸವರಾಜ ತಂಗಡಗಿ, ಡಾ.ಸಂಜೀವಕುಮಾರ ಪಾಟೀಲ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಹಳೇ ವಿದ್ಯಾರ್ಥಿಗಳು ಗುರುಗಳನ್ನು ವಾದ್ಯಮೇಳಗಳೊಂದಿಗೆ ಮೆರವಣಿಗೆ,


ಪುಷ್ಪವೃಷ್ಟಿ ಮಾಡುವ ಮೂಲಕ ವೇದಿಕೆಗೆ ಸ್ವಾಗತಿಸಿಕೊಂಡರು.

ಹಿರಿಯ ನಿವೃತ್ತ ಶಿಕ್ಷಕ ಸಿದ್ದಣ್ಣ ಬಂಟನೂರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಭೀಮರಾಯ ಮಾಗಿ, ಬಿ.ಸಿ. ಪಾಟೀಲ, ಬಾಪುಗೌಡ ಪಾಟೀಲ, ಸಂಗಣ್ಣ ಹಾವೇರಿ, ಭೀಮಣ್ಣ ನಾಲ್ನೋಡಿ, ಪದ್ಮಾವತಿ ಮಡಿವಾಳರ, ನಂದಣ್ಣ ಜಾಲಿಬೆಂಚಿ, ಬಸವರಾಜ ಕುಂಟೋಜಿ, ಎಚ್. ಢವಳಗಿ, ಸಾವಿತ್ರಿ ಪಾಟೀಲ, ವಿದ್ಯಾಲತಾ ಹೊಳಿಕಟ್ಟಿ, ರೇಖಾ ಕೊಡೇಕಲ್ಮಠ, ಶಾರದಮ್ಮ ಮಹೇಂದ್ರಕರ ಇದ್ದರು. ಎಸ್.ಎಸ್.ಕಣ್ಣೂರ,

ಬಸವರಾಜ ಭದ್ರಗೋಳ ನಿರೂಪಿಸಿದರು. ಪವನ ದೇಶಪಾಂಡೆ ಪ್ರಸ್ತಾವಿಕ ಮಾತನಾಡಿದರು. ಸಂಗಮೇಶ ನಾಗಲೀಕ ಸ್ವಾಗತಿಸಿದರು. ವಕೀಲ ಹುಡೇದ ವಂದಿಸಿದರು.

# ವಾಲ್ಮೀಕಿ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ




ಕಲಬುರಗಿ: ಅ.7:ನಗರದ ರಾಮ ಮಂದಿರ ಹತ್ತಿರ ವಿರುವ ಮಹರ್ಷಿ ವಾಲ್ಮೀಕಿ ವೃತ್ತದಲ್ಲಿ ಕರ್ನಾಟಕ ರಾಜ್ಯ ತಳವಾರ ಮಹಾಸಭಾ ಜಿಲ್ಲಾ ಘಟಕಯಿಂದ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲರ್ಪಣೆ ಮಾಡುವುದರ ಮುಖಾಂತರ ಮಹರ್ಷಿ ವಾಲ್ಮೀಕಿಯವರ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಎ.ಪಿ.ಎಮ್.ಸಿ ಮಾಜಿ ಅಧ್ಯಕ್ಷ

ಅವ್ವಣ್ಣ ಮ್ಯಾಕೇರಿ, ಕರ್ನಾಟಕ ರಾಜ್ಯ ತಳವಾರ ಮಹಾಸಭಾ ಜಿಲ್ಲಾಧ್ಯಕ್ಷ ಚಂದ್ರಕಾಂತ ತಳವಾರ, ಜಿಲ್ಲಾ ಕಾರ್ಯದರ್ಶಿ ರಾಜೇಂದ್ರ ರಾಜವಾಳ, ತಳವಾರ ಮಹಾಸಭಾ ಅಫಜಲಪೂರ ತಾಲೂಕ ಅಧ್ಯಕ್ಷ ಗುರುನಾಥ ಹಾವನೂರ, ನಗರ ಉಪಾಧ್ಯಕ್ಷ ರವಿ ಡೊಂಗರಗಾಂವ, ಶರಣು ತಳವಾರ, ನಾಗರಾಜ ನಂದೂರ, ಪ್ರೇಮ ಕೋಲಿ ಮುಂಬೈ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅ. 18 ಕ್ಕೆ ದಾಸ ಸಾಹಿತ್ಯ ಸಮ್ಮೇಳನ:

## ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಎರಡು ಕಣ್ಣುಗಳಿದ್ದಂತೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.7: ಕನ್ನಡ ಸಾಹಿತ್ಯ ಪರಿಷತ್ ದಕ್ಷಿಣ ವಲಯದ ಆಶ್ರಯದಲ್ಲಿ ಅಕ್ಟೋಬರ್ 18 ರಂದು ನಗರದ ಕನ್ನಡ ಭವನದಲ್ಲಿ ಹಿರಿಯ ಪತ್ರಕರ್ತ–ಸಾಹಿತಿ ಡಾ. ಶ್ರೀನಿವಾಸ ಸಿರನುರಕರ್ ಅವರ ಸರ್ವಾಧ್ಯಕ್ಷತೆಯಲ್ಲಿ ಹಮ್ಮಿಕೊಂಡಿರುವ ಕಲಬುರಗಿ ವಿಭಾಗ ಮೂರನೇ ದಾಸ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರನ್ನಾಗಿ ನೇಮಕಗೊಂಡ ಉದ್ಯಮಿ ಕೃಷ್ಣಾಜೀ ಕುಲಕರ್ಣಿ ಅವರನ್ನು ಸತ್ಕರಿಸಿ ಸಮ್ಮೇಳನಕ್ಕೆ ಅಧಿಕೃತ ಆಹ್ವಾನ ನೀಡಲಾಯಿತು.



ನಂತರ ಮಾತನಾಡಿದ ಉದ್ಯಮಿ ಕೃಷ್ಣಾಜೀ ಕುಲಕರ್ಣಿ, ನಾಡು–ನುಡಿಗಾಗಿ ಪ್ರತಿಯೊಬ್ಬರೂ ಮುಮದಾಗಿ ನಿರಂತರ ಸೇವೆ ಮಾಡಬೇಕು. ಯಾವುದೇ ಸೇವೆ ಅಮೂಲ್ಯವಾದುದು. ಅದನ್ನು ನಿಸ್ವಾರ್ಥ ಮತ್ತು ನಿಷ್ಠೆಯಿಂದ ಮಾಡಿದರೆ ಸಾರ್ಥಕವಾಗುತ್ತದೆ. ಹಾಗೆಯೇ ಭಾಷೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸಬೇಕಾದರೆ ಕನ್ನಡ ನಿತ್ಯ–ಸತ್ಯವಾಗಬೇಕು ಎಂದ ಅವರು, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಕನ್ನಡಕ್ಕಾಗಿ ಶ್ರಮಿಸುತ್ತಿದೆ. ಕನ್ನಡದ ರಥ ಮುನ್ನಡೆಸಲು ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಹಾಗೂ ಅವರ ತಂಡ ಸಮರ್ಥರಾಗಿದ್ದು, ಸಾಂಸ್ಕೃತಿಕ ಜಿಲ್ಲೆಯನ್ನಾಗಿಸುವ ಅವರ ಪ್ರಯತ್ನಕ್ಕೆ ಬೆಂಬಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಈ ಸಮಾಜದ ಎರಡು ಕಣ್ಣುಗಳಿದ್ದಂತೆ. ಇವೆರಡರ ಕಾಲಘಟ್ಟಗಳು ಬೇರೆ ಬೇರೆ ಯಾಗಿದ್ದರೂ, ಸಮಾಜ ಪರಿವರ್ತನೆಯ ಉದ್ದೇಶ ಒಂದೇ ಆಗಿದೆ. ಈ ನಿಟ್ಟಿನಲ್ಲಿ ದಾಸ ಸಾಹಿತ್ಯದಲ್ಲಿ ಅಡಗಿರುವ ಮೌಲ್ಯಗಳು ಹೊಸ ಪೀಳಿಗೆಗೆ ಪರಿಚಯಿಸುವ ಕಾರ್ಯ ಈ ಸಮ್ಮೇಳನ ಮಾಡುತ್ತಿದೆ ಎಂದು ಆಶಯ ವ್ಯಕ್ತಪಡಿಸಿದರು. ಕಸಾಪ ದಕ್ಷಿಣ ವಲಯ ಅಧ್ಯಕ್ಷ ರವಿಕುಮಾರ ಶಹಾಪುರಕರ್ ಮಾತನಾಡಿ, ದಾಸ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗಿ ಆಯೋಜಿಸಲು ಈಗಾಗಲೇ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಸಮ್ಮೇಳನದ ಯಶಸ್ವಿಗೆ ಸರ್ವರ ಸಹಕಾರ ಮುಖ್ಯವಾಗಿದೆ. ದಾಸ ಸಾಹಿತ್ಯ ಕಲ್ಯಾಣ ನಾಡನ ಬಹು ದೊಡ್ಡ ಸಂಪತ್ತಾಗಿದೆ ಎಂದರು.

ಕಸಾಪ ಜಿಲ್ಲಾ ಕಾರ್ಯದರ್ಶಿ ಧರ್ಮಣ್ಣ ಧನ್ನಿ, ಕೋಶಾಧ್ಯಕ್ಷ ಶರಣ–ರಾಜ ಛಪ್ಪರಬಂದಿ, ಪ್ರಮುಖರಾದ ರಾಜೇಂದ್ರ ಮಾಡಬೂಳ, ವೆಂಕುಬಾಯಿ ರಜಪೂತ, ಜಯಶ್ರೀ ಯಾದಗಿರಿ, ಮಲ್ಲಿನಾಥ ಸಂಗಶೆಟ್ಟಿ, ಮಂಜುನಾತ ಕಂಬಾಳಿಮಠ, ಎಂ.ಎನ್. ಸುಗಂಧಿ, ಶಿವಕುಮಾರ ಸಿ.ಎಚ್., ಮಹಾಲಿಂಗಯ್ಯ ಸ್ವಾಮಿ, ಅಮೃತಪ್ಪ ಅಣೂರ, ಸಂಗಪ್ಪ, ಗಂಗಾಧರ, ಸಿದ್ಧಲಿಂಗ ಬಾಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಭೂತಾಯಿಯ ಸೀಮಂತದ ಪ್ರತೀಕ ಸೀಗೆ ಹುಣ್ಣಿಮೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ : ಅ.7:ಭಾರತ ಕೃಷಿ ಪ್ರಧಾನವಾದ ದೇಶವಾಗಿದ್ದು, ಕೃಷಿ ಹಾಗೂ ರೈತರೇ ದೇಶದ ಬೆನ್ನೆಲುಬು. ನಮ್ಮ ದೇಶವನ್ನು ತಾಯಿಯ ಸ್ವರೂಪದಲ್ಲಿ ಕಾಣಲಾಗುತ್ತದೆ. ಮಹಿಳೆ ಗರ್ಭವತಿಯಾದಾಗ ಸೀಮಂತ ಮಾಡುವಂತೆ, ಭೂಮಿಯನ್ನು ತಾಯಿ, ದೇವರೆಂದು ನಂಬಿ ಕಾಯಕ ಮಾಡುವ ಶ್ರಮಜೀವಿಯಾದ ರೈತ, ತಾನು ಬೆಳೆದ ಫಸಲಿಗೆ ಪೂಜೆ, ಗೌರವ ಸಲ್ಲಿಸಿ ಸೀಮಂತದ ಕಾರ್ಯಕ್ರಮದಂತೆ ಪೂಜಿಸಿ, ಆರಾಧಿಸುವ ಪ್ರತೀಕ ಸೀಗೆ ಹುಣ್ಣಿಮೆಯಾಗಿದೆ ಎಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು. ಸುಂಟನೂರ ಗ್ರಾಮದ ರಾಮಚಂದ್ರ ಬಬಲಾದಿಯವರ ತೊಗರಿ ಹೊಲದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಮಂಗಳವಾರ ಬೆಳಿಗ್ಗೆ ಜರುಗಿದ 'ಸೀಗೆ ಹುಣ್ಣಿಮೆ'ಯ ಕಾರ್ಯಕ್ರಮದಲ್ಲಿ ತೊಗರಿ ಬೆಳೆಗೆ ವಿಶೇಷವಾದ ಪೂಜೆ ಸಲ್ಲಿಸಿ ವರು ಮಾತನಾಡುತ್ತಿದ್ದರು.

ಸೀಗೆ ಹುಣ್ಣಿಮೆ ದಿನದಂದು ಬೆಳೆಯನ್ನು ಪೂಜಿಸಿ ಇಳುವರಿ ಹೆಚ್ಚಾಗಲಿ ಎಂಬ ಪ್ರಾರ್ಥನೆ ರೈತನದಾಗಿದೆ. ಪ್ರಸ್ತುತ ವರ್ಷ ನಮ್ಮ ಭಾಗದಲ್ಲಿ ಅತಿವೃಷ್ಟಿಯಿಂದ ಸಾಕಷ್ಟು ಬೆಳೆ ಹಾನಿಯಾಗಿದೆ. ಆದರೂ ಕೂಡಾ ಇಲ್ಲಿನ ತೊಗರಿ ಉತ್ತಮವಾಗಿದ್ದು, ಸಂತೋಷದಾಯಕವಾಗಿದೆ. ದೇಶಕ್ಕೆ ಆಹಾರ ನೀಡುವ ರೈತನ ಬದುಕು ಸಮೃದ್ಧವಾಗಲಿ, ಉತ್ತಮ ಫಸಲು, ಬೆಲೆ ದೊರೆಯಲಿ, ರೈತಪರ ನೀತಿ, ಕಾರ್ಯಕ್ರಮಗಳನ್ನು ರೂಪಿಸಿ, ಸೂಕ್ತ ರೈತರಿಗೆ ದೊರೆಯಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್.ಬಿರಾದಾರ ರೈತರಿಗೆ ಸಲಹೆಗಳನ್ನು ನೀಡಿದರು. ರಾಮಚಂದ್ರ ಬಬಲಾದಿ, ಶಂಕರ ಹುಲಮನಿ, ದತ್ತು ಮರಾಠಾ, ನಾಗೇಂದ್ರ ನ್ಯಾಮನ್, ಸಮೀರ್ ಆಳಂದ, ಶಂಕರ ಕುಂಬಾರ ಸೇರಿದಂತೆ ಮತ್ತಿತರರಿದ್ದರು.

# ಶ್ರೀವೇದವರ್ಧನತೀರ್ಥ ಶ್ರೀಪಾದಂಗಳವರು ನಗರಕ್ಕೆ ಆಗಮನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.7:ಜನೆವರಿ18.ರಂದು ಪ್ರಪ್ರಥಮವಾಗಿ ಪರ್ಯಾಯ ಸರ್ವಜ್ಞ ಪೀಠಾರೋಹಣ ಮಾಡಲಿರುವ ಉಡುಪಿಯ ಶಿರೂರುಮಠದ ಪೀಠಾಧಿಪತಿಗಳಾದ ಶ್ರೀ ಶ್ರೀವೇದವರ್ಧನತೀರ್ಥ ಶ್ರೀಪಾದಂಗಳವರು ಪರ್ಯಾಯಪೂರ್ವ ಸಂಚಾರದ ಅಂಗವಾಗಿ ಕಲಬುರಗಿ ನಗರಕ್ಕೆ ದಿನಾಂಕ 15.10.2025 ಬುಧವಾರ ದಂದು ನಗರಕ್ಕೆ ಆಗಮಿಸಲಿದ್ದಾರೆ. ಅಂದು ಸಂಜೆ ರಾಮಮಂದಿರದಲ್ಲಿ



ಶ್ರೀಗಳವರಿಗೆ ಸ್ವಾಗತ ಕೋರಿ ಗೌರವ ಸಮರ್ಪಣೆ ಮಾಡಲಾಗುವುದು 15–18 ರ ಸಾಯಂಕಾಲದ ವರೆಗೆ(ಶ್ರೀಕೃಷ್ಣ ಮಂದಿರ ವಿದ್ಯಾನಗರದಲ್ಲಿ ಅವರು ವಾಸ್ತವ್ಯ ಹೂಡಲಿದ್ದಾರೆ).

18 ಸಾಯಂಕಾಲದಿಂದ 20ರ ವರೆಗೆ(ಜಯತೀರ್ಥರ ಮೂಲವೃಂದಾವನ ಮಳಖೇಡದಲ್ಲಿ ವಾಸ್ತವ್ಯ) ಹೆಚ್ಚಿನ ಮಾಹಿತಿಗಾಗಿ ಶ್ರೀ ರಾಮಾಚಾರ್ಯ ಘಂಟಿ, ಮಠಾಧಿಕಾರಿಗಳು ಉತ್ತರಾದಿಮಠ (9686528491) ಪಂ.ವೆಂಕಣ್ಣಾಚಾರ ಪೂಜಾರ(9448181288) ಪಂ.ವಿನೋದ ಆಚಾರ್ಯಗಲಗಲಿ(9448441740) ಮತ್ತು ಶ್ರೀಕಿಶೋರದೇಶಪಾಂಡೆ(9449731728) ಅವರನ್ನು ಸಂಪರ್ಕಿಸಬಹುದು.

# ಅತಿವೃಷ್ಟಿಯಿಂದ 11 ರೈತರ ಆತ್ಮಹತ್ಯೆ: ಪರಿಹಾರ ಹೆಚ್ಚಿಸಲು ಆಗ್ರಹಿಸಿ ಅ. 13ರಂದು ಕಲಬುರಗಿ ಬಂದ್‌ಗೆ ಕರೆ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಅ.7: ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಹನ್ನೊಂದು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಂತ್ರಸ್ತ ರೈತ ಕುಟುಂಬಕ್ಕೆ ತಲಾ 25 ಲಕ್ಷ ರೂ.ಗಳ ಪರಿಹಾರ ನೀಡುವಂತೆ ಹಾಗೂ ಎಕರೆಗೆ 25000ರೂ.ಗಳ ಪರಿಹಾರವನ್ನು ಹೆಚ್ಚಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತ, ದಲಿತ, ಕನ್ನಡ, ಮಹಿಳಾ ಪರ ಹಾಗೂ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯು ಅಕ್ಟೋಬರ್ 13ರಂದು ಸ್ವಯಂಪ್ರೇರಿತ ಕಲಬುರ್ಗಿ ಬಂದ್ ಕರೆ ನೀಡಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂದ್‌ಗೆ ಕಲ್ಯಾಣ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಸಂಸ್ಥೆ, ಗಂಜ್ ವ್ಯಾಪಾರಿಗಳು, ಸೂಪರ್ ಮಾರ್ಕೆಟ್‌ನ ಕಿರಾಣಾ ಬಜಾರ್, ಚಪ್ಪಲ್ ಬಜಾರ್‌ನ ವ್ಯಾಪಾರಿಗಳು, ಆಟೋ ಚಾಲಕರು, ಪೆಟ್ರೋಲ್ ಪಂಪ್ ಮಾಲಿಕರು ಸೇರಿದಂತೆ ಸರ್ವರೂ ಸಹ ಬೆಂಬಲ ಕೊಟ್ಟಿದ್ದಾರೆ ಎಂದರು.

ಇದಕ್ಕೂ ಮೊದಲು ಶ್ರೀಶೈಲಂ ಮತ್ತು ಸುಲಫಲ ಮಠದ ಸಾರಂಗಧರೇಶ್ವರ ಜಗದ್ಗುರುಗಳು ಮಾತನಾಡಿ, ರೈತ ಬೆಳೆಯುವ ಅನ್ನದ ಮೇಲೆ ರಾಷ್ಟ್ರಪತಿಗಳು, ಪ್ರಧಾನಿಯೂ ಸೇರಿ ಎಲ್ಲರ ಜೀವನ ಅವಲಂಬಿಸಿದೆ. ಅತಿವೃಷ್ಟಿಯಿಂದಾಗಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳು ಘೋಷಿಸಿದ ಪರಿಹಾರ ಸಾಕಾಗುವುದಿಲ್ಲ. ಕೂಡಲೇ ಎಕರೆಗೆ 25000ರೂ. ಗಳ ಪರಿಹಾರವನ್ನು ನೀಡಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತೀಯ ಕಿಸಾನ್ ಸಭಾದ ಮುಖಂಡ ಮೌಲಾ ಮುಲ್ಲಾ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ವೈಮಾನಿಕ ಸಮೀಕ್ಷೆ ಮಾಡಿ ಪರಿಹಾರ ಕೊಡದೇ ನಾಟಕ ಮಾಡುತ್ತಿದ್ದಾರೆ. ಒಂದು ಕಡೆ ಪರಿಹಾರ ಕೊಟ್ಟಂತೆ ಆಗಿರಬೇಕು. ಇನ್ನೊಂದೆಡೆ ಪರಿಹಾರ ಕೊಟ್ಟಿರಬಾರದು ಎನ್ನುವ ರೀತಿಯಲ್ಲಿ ಪರಿಹಾರವನ್ನು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಕೇಂದ್ರ ಸರ್ಕಾರವು ಕಲ್ಯಾಣ ಕರ್ನಾಟಕವನ್ನು ಸಂಪೂರ್ಣ ಮರೆತಿದೆ. ಹೀಗಾಗಿ ನಾವು ಹೋರಾಟದ ಮೂಲಕ ಸಂತ್ರಸ್ತರಿಗೆ ನ್ಯಾಯ ದೊರಕಿಸಬೇಕಾಗಿದೆ ಎಂದರು.

ಭೀಮಾಶಂಕರ್ ಮಾಡ್ಯಾಳ್ ಅವರು ಮಾತನಾಡಿ, ಅಂದು ಗಂಜ್ ಪ್ರದೇಶದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದೆ. ಬೆಳಿಗ್ಗೆಯೇ ಬಂದ್ ಆರಂಭವಾಗಲಿದೆ. ರೈಲು ನಿಲ್ದಾಣ, ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಜಗತ್ ವೃತ್ತ, ಬಸ್ ನಿಲ್ದಾಣ ಸೇರಿದಂತೆ ನಗರದ ವಿವಿಧೆಡೆ 15ರಿಂದ 20 ಸಂಘಟನೆಗಳ ಕಾರ್ಯಕರ್ತರು ಅಲ್ಲಲ್ಲಿ ಪ್ರತಿಭಟನೆಯಲ್ಲಿ ತೊಡಗಲಿದ್ದಾರೆ ಎಂದು ಹೇಳಿದರು.

ಕೂಡಲೇ ನೆರೆ ಮತ್ತು ಅಧಿಕ ಮಳೆಯಿಂದಾಗಿ ಆದ ನಷ್ಟ ಕುರಿತು ವೈಮಾನಿಕ ಸಮೀಕ್ಷೆ ಮಾಡಿ, ಹೆಕ್ಟೇರಿಗೆ ಖುಷ್ಕಿ ಭೂಮಿಗೆ 17000 ರೂ.,ಗಳು, ಅಂದರೆ ಎಕರೆಗೆ 7000 ರೂ. ಗಳು, ನೀರಾವರಿ ಭೂಮಿಗೆ ಹೆಕ್ಟೇರಿಗೆ 25000 ರೂ.ಗಳು, ಅಂದರೆ 10200 ರೂ.ಗಳು ಮತ್ತು ಬಹು ವಾರ್ಷಿಕ ಬೆಳೆಗೆ ಹೆಕ್ಟೇರಿಗೆ 31000 ರೂ.ಗಳು, ಅಂದರೆ ಎಕರೆಗೆ 12400 ರೂ.ಗಳ ಪರಿಹಾರ ಘೋಷಣೆ ಮಾಡಿದ್ದಾರೆ. ಸದರಿ ಪರಿಹಾರವು ತೀರಾ ಕಡಿಮೆ ಮಟ್ಟದ್ದಾಗಿದೆ ಎಂದು ರೈತರು ಅದನ್ನು ತಿರಸ್ಕಾರ ಮಾಡಿದ್ದಾರೆ ಎಂದು ಅವರು ಹೇಳಿದರು.

ಜಿಲ್ಲೆಯನ್ನು ಹಸಿರು ಬರಗಾಲ ಎಂದು ಘೋಷಿಸುವಂತೆ, ಪ್ರತಿ ಎಕರೆಗೆ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಕೂಡಿ ಪ್ರತಿ ಎಕರೆಗೆ 25000ರೂ.ಗಳ ಪರಿಹಾರ ನೀಡುವಂತೆ, ರೈತರ ಸಹಕಾರಿ ಮತ್ತು ರಾಷ್ಟ್ರೀಯ ಬ್ಯಾಂಕುಗಳಲ್ಲಿನ ಸಾಲ ಮನ್ನಾ ಮಾಡುವಂತೆ, ಹಿಂಗಾರು ಬಿತ್ತನೆಗಾಗಿ ಕಡಲಿ, ಜೋಳ, ಕುಸುಬಿ, ಸೂರ್ಯಕಾಂತಿ, ಶೇಂಗಾ ಬೀಜ ರೈತರಿಗೆ ಉಚಿತವಾಗಿ ಕೊಡುವಂತೆ, ಮುಂಗಾರು ಬಿತ್ತನೆಗಾಗಿ ಬೀಜ ಪಡೆದ ರೈತರಿಗೆ ಹಿಂಗಾರು ಬಿತ್ತನೆಗಾಗಿ ಎಲ್ಲ ರೈತರಿಗೆ ಉಚಿತವಾಗಿ ಬೀಜ ಕೊಡುವಂತೆ ಅವರು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಒಟ್ಟು 11 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ 25 ಲಕ್ಷ ರೂ.ಗಳ ಪರಿಹಾರ ನೀಡುವಂತೆ ಮತ್ತು ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ಒದಗಿಸುವಂತೆ, ರೈತರ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ಕಾಲೇಜುಗಳಲ್ಲಿ 2ನೇ ಕಂತಿನ ಶುಲ್ಕ ಮನ್ನಾ ಮಾಡುವಂತೆ, ಭೀಮಾ ನದಿಯ ಮತ್ತು

ಜಿಲ್ಲೆಯ ಇತರೆ ಉಪನದಿಗಳಾದ ಗಂಡೋರಿ ನಾಲಾ, ಅಮರ್ಜಾ, ಮುಲ್ಲಾಮಾರಿ ಏತ ನಿರಾವರಿ, ಕಾಗಿಣಾ, ಚಂದ್ರಂಪಳ್ಳಿ, ಮತ್ತು ಇತರೆ ನದಿಗಳ ನೆರೆ ಹಾವಳಿಗೆ ತುತ್ತಾದ ನೂರಾರು ರೈತರಿಗೆ ಶಾಶ್ವತ ಪರಿಹಾರ ಒದಗಿಸುವಂತೆ, ಅದಕ್ಕಾಗಿ ತಜ್ಞರ ತಂಡ ರಚಿಸಿ ತ್ವರಿತ ಅಧ್ಯಯನ ಕೈಗೊಳ್ಳುವಂತೆ ಅವರು ಆಗ್ರಹಿಸಿದರು.

ವಿಶೇಷ ಪರಿಹಾರವಾಗಿ 1000 ಕೋಟಿ ರೂ.ಗಳ ಪ್ಯಾಕೇಜ್ ಘೋಷಿಸುವಂತೆ, 2025 ಮತ್ತು 2026ರ ಸಾಲಿನ ಎಲ್ಲ ರೈತರಿಗೆ ಬೆಳೆ ವಿಮೆ ಮಂಜೂರು ಮಾಡುವಂತೆ ಅವರು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಮಹಾಂತಗೌಡ ನಂದಿಹಳ್ಳಿ, ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಆದಿನಾಥ ಹೀರಾ, ಉಮಾಪತಿ ಪಾಟೀಲ್, ಸುಂದರ್ ಡಿ. ಸಾಗರ್, ನಾಗಮ್ಮ ದೇಸಾಯಿ, ಮಂಜುಳಾ ಭಜಂತ್ರಿ ಮುಂತಾದವರು ಉಪಸ್ಥಿತರಿದ್ದರು.

# ಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರು: ಮಾಕಲ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.7–ಕಾನೂನಾತ್ಮಕವಾಗಿಯೂ ಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರು ಎಂದು ವಿಶ್ವ ಲಿಂಗಾಯತ ಮಹಾಸಭಾ ಅಧ್ಯಕ್ಷ ಪ್ರೊ. ಸಂಜಯ್ ಮಾಕಲ್ ಅವರು ವಿಜಯಪುರ ಬಿಜೆಪಿ ಉಚ್ಛಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ತಿರುಗೇಟು ನೀಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯತ ಪ್ರತ್ಯೇಕ ಧರ್ಮ ಕಾನೂನಾತ್ಮಕವಾಗಿ ಅಲ್ಲ ಎಂದಿರುವ ಯತ್ನಾಳ್ ಅವರೂ ಸಹ ಲಿಂಗಾಯತ ಧರ್ಮಿಯರೇ, ಅವರು ಕಾನೂನುಗಳನ್ನು ಅರಿತುಕೊಳ್ಳಬೇಕು. ವಿವಿಧ ಹಂತಗಳಲ್ಲಿನ ಕಾನೂನು ಕ್ರಮಗಳನ್ನು ಅವಲೋಕಿಸಬೇಕು ಎಂದರು. ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿಲ್ಲ, ಹಿಂದೂ ಧರ್ಮದಲ್ಲಿನ ಮೂಢನಂಬಿಕೆ ತೆಗೆದಿದ್ದಾರೆ. ಲಿಂಗಾಯತ ಧರ್ಮ ಕೆಲವೊಂದು ಕಂಪೆನಿಯವರು ತಯಾರು ಮಾಡಿಕೊಂಡಿದ್ದಾರೆ ಎಂಬ ಯತ್ನಾಳ್ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಬಸವಣ್ಣನವರ ಕುರಿತು ಯತ್ನಾಳ್ ಅವರು ಆಳವಾಗಿ ಅಧ್ಯಯನ ಮಾಡದೇ ಹಗುರವಾಗಿ ಹೇಳಿಕೆಗಳನ್ನು ನೀಡಿದ್ದಾರೆ ಎಂದರು.

1930ರಲ್ಲಿ ಮದ್ರಾಸ್ ಉಚ್ಛ ನ್ಯಾಯಾಲಯವು ಲಿಂಗಾಯತವು ಮೂಲತ: ಹಿಂದೂವಿನಿಂದ ಭಿನ್ನವಾಗಿದೆ. ಬಸವ ಸ್ಥಾಪಿಸಿದ್ದಾರೆ ಎಂಬ ತೀರ್ಪು ನೀಡಿದೆ. 1943ರಲ್ಲಿ ಬೊಂಬಾಯಿ ಉಚ್ಛ ನ್ಯಾಯಾಲಯವು ಲಿಂಗಾಯತರು ಹಿಂದೂಗಳಲ್ಲ ಎಂದು ತೀರ್ಪು ನೀಡಿದೆ. 1966ರಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯದ ಆದೇಶವು ಬುದ್ಧ ಬೌದ್ಧ ಮತವನ್ನು, ಮಹಾವೀರರು ಜೈನ ಮತವನ್ನು, ಗುರುನಾನಕರು ಸಿಖ್ ಧರ್ಮವನ್ನು ಹಾಗೂ ಬಸವ ಲಿಂಗಾಯತ ಧರ್ಮ ಸ್ಥಾಪಿಸಿದರು ಎಂದು ನಿರ್ಣಾಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ ಎಂದು ಅವರು ವಿವರಿಸಿದರು.

1980ರಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ತನ್ನ ಆದೇಶದಲ್ಲಿ ಲಿಂಗಾಯತುವ ಒಂದು ತತ್ವ ನಂಬಿಕೆಯಾಗಿದೆ ಎಂದು ತಿಳಿಸಿದೆ. ಲಿಂಗಾಯತದಲ್ಲಿ ಕುರುಹಿನಶೆಟ್ಟಿ ಇದ್ದ ಹಾಗೆ ಲಿಂಗಾಯತದಲ್ಲಿ ಗಾಣಿಗವೂ ಒಂದು ಜನಾಂಗ. ಲಿಂಗಾಯತ ಗಾಣಿಗ ಎಂದು ಬರೆಯಿಸಿ ವೈದ್ಯಕೀಯ ಸೀಟು ಪಡೆದುಕೊಂಡ ವಿದ್ಯಾರ್ಥಿಯ ಮೀಸಲಾತಿಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ ಎಂದು ಅವರು ತಿಳಿಸಿದರು. ಹಿಂದೂಗಳು ಇಲ್ಲದೇ ಇರುವಂತಹ ಪಟ್ಟಿಯಲ್ಲಿ ಸಿಖ್, ಜೈನ್, ಬೌದ್ಧ ಧರ್ಮಗಳ ಜೊತೆ ಲಿಂಗಾಯತರು ಎಂದು ಇದೆ. ಲಿಂಗಾಯತರೇ ಬೇರೆ, ಹಿಂದೂಗಳೇ ಬೇರೆ ಎಂದು ಭಾರತದ ಹಿಂದೂ ಕಾನೂನಿನ ಶಾಸನದಲ್ಲಿಯೇ ಇದೆ. 1871ರಿಂದ 1931ರವರೆಗಿನ ಮೈಸೂರು ಸಾಮ್ರಾಜ್ಯದ ಮತ್ತು ಬೊಂಬಾಯಿ ಪ್ರಾಂತ್ಯದ ಜನಗಣತಿಯಲ್ಲಿ ಲಿಂಗಾಯತವು ಬೇರೆ ಎಂದೇ ಪರಿಗಣಿಸಲಾಗಿತ್ತು. 1883ರ ಡಬ್ಲು ಚಇಚೆಲೆ ಪ್ಲೌಡೆನ್, 190ರ ಹೆಚ್. ಎಚ್. ರಿಸ್ಲೇ, ಇ.ಎ. ಗೈಟ್, ಎಡ್ಗಾರ್ ತರ್ಸ್ಟನ್ ಮುಂತಾದವರ ವರದಿಗಳಲ್ಲಿ ಲಿಂಗಾಯತ ಮತ್ತು ಹಿಂದೂ ಪ್ರತ್ಯೇಕವಾಗಿಯೇ ಬೇರೆ, ಬೇ–ರೆಯಾಗಿ ಗುರುತಿಸಲಾಗಿದೆ. ಹಾಗಾಗಿ ಯತ್ನಾಳ್ ಅವರು ಸರ್ವೋಚ್ಛ ನ್ಯಾಯಾಲಯಗಳ ತೀರ್ಪುಗಳನ್ನು ಗೌರವಿಸಬೇಕು ಎಂದು ಅವರು ಹೇಳಿದರು.

ಜಾತಿ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದೇ ಬರೆಸಬೇಕು, ಹೊರತು ಹಿಂದೂ ಅಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಹಾಂತೇಶ್ ಪಾಟೀಲ್, ಶಿವಶರಣಪ್ಪ ದೇಗಾಂವ್, ಗುರುಬಸಪ್ಪ ಪಾಟೀಲ್, ಅಯ್ಯಣ್ಣ ವ್ಹಿ. ನಂದಿ, ನಾಗರಾಜ್ ಕಾಮಾ, ಅಯ್ಯಣ್ಣಗೌಡ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# ಕಲ್ಯಾಣ ಕರ್ನಾಟಕ ನ್ಯಾಯಪೂರ್ಣ ಅಭಿವೃದ್ಧಿಗಾಗಿ ಜಾಥಾ




ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ:ಅ.7:ಕಲ್ಯಾಣ ಕರ್ನಾಟಕ ಭಾಗದ ಜನತೆಗೆ ನ್ಯಾಯ ಸಿಗಬೇಕೆಂಬ ಉದ್ದೇಶದಿಂದ ವೇಲ್ಫೇರ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ವತಿಯಿಂದ ಅಕ್ಟೋಬರ್ 06 ರಿಂದ 13, 2025 ರವರೆಗೆ "ಕಲ್ಯಾಣ ಕರ್ನಾಟಕ ನ್ಯಾಯಪೂರ್ಣ ಅಭಿವೃದ್ಧಿ ಜಾಥಾ ಆಯೋಜಿಸಲಾಗಿದೆ ಈ ಜಾಥಾ ಬಳ್ಳಾರಿ ಯಿಂದ ಆರಂಭವಾಗಿ ಬೀದರ್ ತನಕ ನಡೆಯಲಿದೆ. ಎಂದು ವೇಲ್ಫೇರ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕದ ರಾಜ್ಯಾಧ್ಯೇಕ್ಷ ಅಡ್ವೋಕೆಟ್ ತಾಹೀರ್ ಹುಸೇನ್ ಮಂಗಳವಾರ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಶಿ ಮಾತನಾಡಿದ ಅವರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 78 ವರ್ಷಗಳಾದರೂ ಕಲ್ಯಾಣ ಕರ್ನಾಟಕ ಭಾಗ ಇಂದು ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾಗಿಯೇ ಉಳಿದಿದ ಸಂವಿಧಾನದ 98ನೇ ತಿದ್ದುಪಡಿ ಮೂಲಕ 2013 ರಲ್ಲಿ ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರೆತಿದ್ದರೂ, ಮತ್ತು ಒಂದು ವಿಶೇಷ ನಿಗಮ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ'ಯ ಹೆಸರಿನಲ್ಲಿ ಸ್ಥಾಪಿಸಿ ಸುಮಾರು 25,000 ಕೋಟಿ ಅನುದಾನ ಕಳೆದ 12 ವರ್ಷಗಳಲ್ಲಿ ಬಿಡುಗಡೆಯಾದರೂ, ಅಭಿವೃದ್ಧಿ ಫಲಿತಾಂಶಗಳು ಜನರ ಕೈ ಸೇರುವಂತಾಗಿಲ್ಲ.

ಕಾರ್ಮಿಕರು ಕೆಲಸ ಹೊಡುಕಿಕೊಂಡು ಗುಳೇಹೋಗುವುದು ತಪ್ಪಲಿಲ್ಲ, ಯುವಕರಿಗೆ ಅರ್ಹತೆಗೆ ತಕಂತೆ

ಉದ್ಯೋಗ ಸಿಗುತ್ತಿಲ್ಲ, ಜನಸಂಖ್ಯೆಗೆ ಅನುಗುಣವಾಗಿ ಆರೋಗ್ಯ ಕೇಂದ್ರಗಳು ಸ್ಥಾಪನೆ ಯಾಗಿಲ್ಲ, ಅಪೌಷ್ಠಿಕತೆ ಯಿಂದ ಮಕ್ಕಳ ಹಾಗು ಬಾಣಂತಿಯರ ಸಾವಿನ ಸರಣಿ ನೀಲಲಿಲ್ಲ, ಉರಿ ಬಿಸಿಲಿನಲ್ಲಿ ಶ್ರಮಿಸುವ ಅನ್ನದಾತನ ಸಮಸ್ಯೆಗಳು ಬಗೆಹರಿಯದೆ ಆತ್ಮಹತ್ಯೆಗಳು ನೀಲಲಿಲ್ಲ, ಇಲ್ಲಿ ನೆಲೆಸುವ ಹಿಂದುಳಿದ,

ಅಲ್ಪಸಂಖ್ಯಾತ, ದಲಿತ, ಅದಿವಾಸಿಗಳಿಗೆ ಇನ್ನು ತನಕ ಸಾಮಾಜಿಕ ನ್ಯಾಯ ದೊರಕಲಿಲ್ಲ. ಪ್ರತಿ ಬಾರಿ ಹೊಸ ಯೋಜನೆಗಳ ಭರವಸೆ ದೊಡ್ಡ ದೊಡ್ಡ ಅನುದಾನಗಳ ಘೋಷಣೆ ಆದರೆ ಎಲ್ಲಿ ಹೋಗುತ್ತಿದೆ ಆ ಅನುದಾನ ಯಾರಿಗೆ ತಲುಪುತ್ತಿದೇ ಎನ್ನುವುದು ಎಕ್ಷಪ್ರಶ್ನೆಯಾಗಿದೆ ಎಂದು ಹೇಳಿದರು. ಈ ಸಂಧರ್ಭದಲ್ಲಿ, ರಾಜ್ಯ ಪ್ರಧಾನ ಕಾರ್ಯದರ್ಶಿ ರಿಯಾಜ್ ಅಹಮದ್, ರಾಜ್ಯ ಉಪಾಧ್ಯಕ್ಷ ಶ್ರೀಕಾಂತ್ ಸಾಲಿಯಾನ್, ಇನ್ನಿತರರು ಉಪಸ್ಥಿತರಿದ್ದರು.

ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ತಲಾ ಆದಾಯ ಹೆಚ್ಚಿಸಬೇಕು.

ಜಿಲ್ಲಾ ಖನಿಜ ಪ್ರತಿಷ್ಠಾನ (DMF), ಕರ್ನಾಟಕ ಗಣಿ ಪರಿಸರ ಪುನಶ್ವೇತನ ನಿಗಮ (KMERC) ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಅನುದಾನಗಳನ್ನು ಸಮರ್ಪಕವಾಗಿ ಬಳಸಬೇಕು.

**ಉದ್ಯೋಗ ಅವಕಾಶಗಳು ಹೆಚ್ಚಿಸಬೇಕು.**

ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಮತ್ತು ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ಅವಕಾಶ ದೊರತಿಸಬೇಕು 5. ಕಲ್ಯಾಣ ಕರ್ನಾಟಕದಲ್ಲಿ ಬಹಳಷ್ಟು ಐತಿಹಾಸಿಕ ಸ್ಮಾರಕ /ಸ್ಥಳಗಳಿದ್ದು ಈ ಭಾಗದಲ್ಲಿ ಪ್ರಾಸೋದ್ಯಮಕ್ಕೆ ಹೆಚ್ಚಿನ ಅದ್ಯತೆ ನೀಡಬೇಕು.

ಖಾಲಿ ಇರವು ಸರಕಾರಿ ಹುದ್ದೆಗಳು ಕೂಡಲೇ ಭರ್ತಿ ಮಾಡಬೇಕು.

ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಕೈಗಾರಿಕಾ ನೀತಿ ರೂಪಿಸಬೇಕು ಮತ್ತು ಬಂಡವಾಳ ಹೂಡಿಕೆಯ ಪ್ರಮಾಣ ಹೆಚ್ಚಿಸಬೇಕು.

ಈ ಭಾಗದ ಎಲ್ಲ ನೀರಾವರಿ ಯೋಜನೆಗಳನ್ನು ಶೀಘ್ರದಲ್ಲಿ ಪ್ರಾರಂಭ ಮಾಡಬೇಕು 9. ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸಮಿತಿ ರಚನೆ ಮಾಡಬೇಕು ಮತ್ತು ಖಾಲಿ ಇರುವ ಎಲ್ಲ ಶಿಕ್ಷಕರ ಮತ್ತು ಉಪನ್ಯಾಸಕರ ಹುದ್ದೆಗಳು ಕೂಡಲೇ ಭರ್ತಿ ಮಾಡಬೇಕು.

ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗಗಳ ಮೇಲೆ ನಡೆಯುವ ಅನ್ಯಾಯ ತಡೆಯಲು ವಿಶೇಷ ನ್ಯಾಯಮಂಡಲ್ಲಿ ಸ್ಥಾಪಿಸಬೇಕು.

ಜನಸಂಖ್ಯೆಯ ಆಧಾರದ ಮೇಲೆ ಪ್ರಾಥಮಿಕ ಅರೋಗ್ಯ ಕೇಂದ್ರ ಮತ್ತು ಮಲ್ಲಿ ಸೇಪ್ಪಲಿಟಿ ಆಸ್ಪತ್ರೆಗಳ ನಿರ್ಮಾಣ ಆಗಬೇಕು.

# ಬಳ್ಳಾರಿಯಲ್ಲಿ ಸಂಭ್ರಮದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ

## 1.10 ಕೋಟಿ ರೂ. ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ಪ್ರತಿಷ್ಠಾಪನೆ: ಶಾಸಕ ನಾರಾ ಭರತ್ ರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,ಅ.07:ನಗರದ ವಾಲ್ಮೀಕಿ ವೃತ್ತ(ಎಸ್.ಪಿ ವೃತ್ತ)ದಲ್ಲಿ 1.10 ಕೋಟಿ ರೂ. ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿ ಪ್ರತಿಷ್ಠಾಪಿಸಲಾಗುವುದು ಹಾಗೂ ವೃತ್ತವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಬಳ್ಳಾರಿ ನಗರ ನಾರಾ ಭರತ್ ರೆಡ್ಡಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ನಲ್ಲಚೇರುವು ಪ್ರದೇಶದ ವಾಲ್ಮೀಕಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಖ್ಯಾತ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರ ಹಸ್ತ ವಿನ್ಯಾಸದಲ್ಲಿ ಪುತ್ಥಳಿಯು ಅರಳಲಿದೆ. ಶುಭದಿನದಂದು ರಾಜ್ಯದ ವಿವಿಧ ಭಾಗಗಳಿಂದ ಸಮುದಾಯದ ಜನರನ್ನು ಒಗ್ಗೂಡಿಸಿ ಅದ್ದೂರಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಅದೇರೀತಿಯಾಗಿ ಬಳ್ಳಾರಿಯಲ್ಲಿ ಮಹರ್ಷಿ ವಾಲ್ಮೀಕಿ ಶಾಖಾ ಮಠ ಸ್ಥಾಪಿಸಲಾಗುವುದು. ಇದಕ್ಕಾಗಿ ವೈಯಕ್ತಿಕವಾಗಿ ಎರಡು ಎಕರೆ ಭೂಮಿ ನೀಡುತ್ತೇನೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ರಾಮಾಯಣ ಎಂದರೆ ಒಂದು ರೋಮಾಂಚನಕಾರಿ ಗ್ರಂಥ. ಜೀವನದಲ್ಲಿ ಪ್ರತಿಯೊಬ್ಬರು ಒಮ್ಮೆಯಾದರೂ ಓದಬೇಕು ಎಂದು ನುಡಿದರು.

ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರು ರಚಿಸಿದಂತಹ ರಾಮಾಯಣ ಕೃತಿಯು ದೇಶದಲ್ಲಿಯೇ ಸರ್ವಶ್ರೇಷ್ಠ ಗ್ರಂಥವಾಗಿದೆ. ಒಟ್ಟು 24,000 ಶ್ಲೋಕಗಳನ್ನು ಕಾಣಬಹುದಾಗಿದೆ ಎಂದರು.

ರಾಜ್ಯ ಸರ್ಕಾರ ಜಾರಿತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಂದ ಸಬಲೀಕರಣ ಹೊಂದುತ್ತಿದ್ದೇವೆ. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಸಮುದಾಯ ಅಭಿವೃದ್ಧಿ ಹೊಂದಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಕರೆ ನೀಡಿದರು.

ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಮಾತನಾಡಿ, ಋಷಿ ಮತ್ತು ಕವಿ ಮಹರ್ಷಿ ವಾಲ್ಮೀಕಿ ಅವರ ಮಹಾಕಾವ್ಯವಾದ ರಾಮಾಯಣದ ಮೂಲಕ ಧರ್ಮಕ್ಕೆ ನೀಡಿದ ಅಪ್ರತಿಮ ಕೊಡುಗೆಗಾಗಿ ಅವರನ್ನು ಪೂಜಿಸಲಾಗುತ್ತದೆ. ರಾಮಾಯಣ ಕೃತಿಯಲ್ಲಿನ ಪಾತ್ರಧಾರಿಗಳ ಉತ್ತಮ ಅಂಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದರು.

ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ ಅವರು ಮಾತನಾಡಿ ಸತ್ಯವು ಸದಾಚಾರ ಮತ್ತು ಧರ್ಮದ ಅಡಿಪಾಯ. ಧರ್ಮ ಎಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಗೌರವಿಸುವುದು ಎಂದು ತೋರ್ಪಡಿಸುತ್ತದೆ. ಸತ್ಯವಂತ ಜೀವನವು ಶಾಂತಿ ಮತ್ತು ದೈವಿಕ ಅನುಗ್ರಹಕ್ಕೆ ಕಾರಣವಾಗುತ್ತದೆ. ಹಾಗಾಗಿ ಮಹರ್ಷಿ ವಾಲ್ಮೀಕಿಯವರ ಜೀವನದ ಆದರ್ಶ ತತ್ವಗಳನ್ನು ಪಾಲಿಸಬೇಕು ಎಂದರು.

ರಾಜ್ಯ ಸರ್ಕಾರವು ಮಹನೀಯರ ಜೀವನದ ನಡೆ–ನುಡಿ ಮತ್ತು ಅವರ ಆದರ್ಶಪ್ರಾಯಗಳನ್ನು ಈಗಿನ ಪೀಳಿಗೆಗೆ ತಿಳಿಸಲು ಜಯಂತಿ ಕಾರ್ಯಕ್ರಮ ಆಚರಿಸಲಾಗುತ್ತದೆ. ಪ್ರತಿಯೊಬ್ಬರೂ ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಮಾತ್ರ ಮಹನೀಯರಿಗೆ ಗೌರವ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಹೊಸಪೇಟೆಯ ಶ್ರೀ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ವೀರಭದ್ರಪ್ಪ ತಂಬ್ರಳ್ಳಿ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಮಹರ್ಷಿ ವಾಲ್ಮೀಕಿ ತ್ರೇತಾಯುಗದಲ್ಲಿ ಜನಿಸಿದವರು. ರತ್ನಾಕರನಾಗಿ ಜನಿಸಿದ ಋಷಿ ವಾಲ್ಮೀಕಿಯ ಜೀವನವು ನಾರದ ಋಷಿಯನ್ನು ಭೇಟಿಯಾದ ನಂತರ ಅವರನ್ನು ತಪಸ್ಸಿಗೆ ಕರೆದೊಯ್ದಾಗ ನಂತರ ತಿರುವು ಪಡೆದು ಅಂತಿಮವಾಗಿ ಮಹಾನ್ ಕವಿಯಾದವರು ಎಂದು ತಿಳಿಸಿದರು.

ವಾಲ್ಮೀಕಿಯವರ ರಾಮಾಯಣ ಕೃತಿಯಿಂದ ಭಾರತೀಯ ಸಂಸ್ಕೃತಿಯ ಮೇಲೆ ಆಳವಾದ ಪ್ರಭಾವ ಬೀರಿದೆ. ವಾಲ್ಮೀಕಿಯ ಬೋಧನೆಗಳು ರಾಮನ ಮೌಲ್ಯಗಳನ್ನು ಉತ್ತೇಜಿಸುತ್ತವೆ, ಸತ್ಯ, ಕರ್ತವ್ಯ ಮತ್ತು ಕರುಣೆಯನ್ನು ಒತ್ತಿಹೇಳುತ್ತವೆ ಎಂದರು.

ಮಹರ್ಷಿ ವಾಲ್ಮೀಕಿಯವರ ಸಂಪೂರ್ಣ ಜೀವನವು ದುಷ್ಟ ಕಾರ್ಯಗಳನ್ನು ತ್ಯಜಿಸಲು ಮತ್ತು ಒಳ್ಳೆಯ ಕಾರ್ಯಗಳು ಹಾಗೂ ಭಕ್ತಿಯ ಮಾರ್ಗವನ್ನು ಅನುಸರಿಸಲು ದಾರಿ ಮಾಡಿಕೊಡುತ್ತದೆ. ಈ ಮಹಾನ್ ವ್ಯಕ್ತಿಯ ಸಂದೇಶವನ್ನು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ 2024–25 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಿಭಾಗದಲ್ಲಿ ಅತ್ಯುತ್ತಮ ಅಂಕಗಳಿಸಿದ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕೃಷಿ, ತೆ–ೂಟಗಾರಿಕೆ ಕ್ಷೇತ್ರದಲ್ಲಿ ಸಾಧನೆಗೈದ ರೈತರನ್ನು ಸನ್ಮಾನಿಸಲಾಯಿತು. ಕಲೆ, ಸಾಹಿತ್ಯ–ಸಂಗೀತ ಕ್ಷೇತ್ರದಲ್ಲಿನ ಪರಿಣಿತರನ್ನು ಅಭಿನಂದಿಸಲಾಯಿತು.


*ಜಿಲ್ಲಾಡಳಿತದಿಂದ ಪುಷ್ಪನಮನ:*

ಜಯಂತಿ ಅಂಗವಾಗಿ ನಗರದ ಎಸ್.ಪಿ ವೃತ್ತದ ಬಳಿಯ ಮತ್ತು ವಾಲ್ಮೀಕಿ ಭವನದಲ್ಲಿರುವ ಶ್ರೀ ಮಹರ್ಷಿ ವಾಲ್ಮೀಕಿಯವರ ಪುತ್ಥಳಿಗೆ ಜಿಲ್ಲಾಡಳಿತದಿಂದ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ, ಪುಷ್ಪಾರ್ಚನೆಗೈಯ್ಯಲಾಯಿತು.

*ಅದ್ದೂರಿ ಮೆರವಣಿಗೆ:*

ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ನಗರದಲ್ಲಿ ಅದ್ದೂರಿಯಾಗಿ ಜರುಗಿತು. ನಗರದ ಎಸ್.ಪಿ ವೃತ್ತ(ವಾಲ್ಮೀಕಿ ವೃತ್ತ) ದಲ್ಲಿ ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಅವರು ಬಾವುಟ ತೋರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ನಗರದ ಎಸ್.ಪಿ ವೃತ್ತದಿಂದ ಆರಂಭವಾಗಿ ಕನಕದುರ್ಗಮ್ಮ ದೇವಸ್ಥಾನ–ಗಡಿಗಿ ಚೆನ್ನಪ್ಪ ವೃತ್ತ– ಬೆಂಗಳೂರು ರಸ್ತೆ–ಹಳೆಯ ಬ್ರೂಸ್ ಪೇಟೆ ಪೊಲೀಸ್ ಠಾಣೆ– ಜೈನ್ ಮಾರ್ಕೆಟ್ ರಸ್ತೆ–ಹೆಚ್.ಆರ್.ಗವಿಯಪ್ಪ ವೃತ್ತ–ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಮುಂಭಾಗದಿಂದ ವಾಲ್ಮೀಕಿ ಭವನದ ವೇದಿಕೆ ಕಾರ್ಯಕ್ರಮದವರೆಗೆ ಸಾಗಿಬಂದು ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ ಮಹರ್ಷಿ ವಾಲ್ಮೀಕಿಯವರ ಪುತ್ಥಳಿ ಒಳಗೊಂಡು ಸಾಗಿಬಂದ ಬೆಳ್ಳಿರಥ ಪ್ರಮುಖ ಆಕರ್ಷಣೆಯಾಗಿತ್ತು. ರಾಮಾಯಣ ಕಥಾಸಂಗ್ರಹದ ಪಾತ್ರ–ವೇಷಧಾರಿಗಳನ್ನೊಳಗೊಂಡ ಕಲಾತಂಡ, ಡೊಳ್ಳು ಕುಣಿತ, ತಾಷೆ ರಾಂಡೋಲ್ ಹಾಗೂ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಭಾಗವಹಿಸಿ ಮೆರವಣಿಗೆಗೆ ಇನ್ನಷ್ಟು ಮೆರಗು ನೀಡಿದವು. ಈ ವೇಳೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಬಳ್ಳಾರಿ ವಲಯ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಉಪವಿಭಾಗಾಧಿಕಾರಿ ಪಿ.ಪ್ರಮೋದ್, ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್. ಮಂಜುನಾಥ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಸಮಾಜದ ಹಿರಿಯ ಮುತ್ಸದ್ದಿ ಜಿ.ರುದ್ರಪ್ಪ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಪಾಲಿಕೆಯ ಸದಸ್ಯರು, ಜಿಲ್ಲೆಯ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಜನಪ್ರತಿನಿಧಿಗಳು, ವಾಲ್ಮೀಕಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಫಲಿತಾಂಶ ವಿಳಂಬ ವಿರೋಧಿಸಿ ಬಿಇಡಿ ವಿದ್ಯಾರ್ಥಿಗಳ ಪ್ರತಿಭಟನೆ



ಕಲಬುರಗಿ: ಅ.7– ಬಿಇಡಿ ಫಲಿತಾಂಶವನ್ನು ಪ್ರಕಟಿಸದೇ ವಿಳಂಬ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಆರೋಪಿಸಿ ಬಿಎಡ್ ವಿದ್ಯಾರ್ಥಿಗಳು ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಎದುರು ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿ ಮುಖಂಡ ಸಂತೋಷಕುಮಾರ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ಅಧಿಕಾರಿಗಳ ತಪ್ಪಿನಿಂದ ಬಿ.ಇಡಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆ ವಿಳಂಬವಾಗಿದೆ. ಅಧಿಕಾರಿಗಳ ಭ್ರಷ್ಟಾಚಾರದ ಫಲವನ್ನು ವಿದ್ಯಾರ್ಥಿಗಳು ಅನುಭವಿಸುವಂತಾಗಿದೆ. ಉಚ್ಛ ನ್ಯಾಯಾಲಯವೂ ಕೂಡ ಎರಡು ವಾರಗಳಲ್ಲಿ ಫಲಿತಾಂಶ ಪ್ರಕಟಿಸುವಂತೆ ಸೂಚಿಸಿದೆ. ಅದಕ್ಕೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಫಲಿತಾಂಶದ ಬಗ್ಗೆ ವಿಚಾರಿಸಿದರೆ ಸಿಂಡಿಕೇಟ್ ಸಭೆ ನಡೆಯಬೇಕಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಕುರಿತು ಸಿಂಡಿಕೇಟ್ ಸದಸ್ಯರೊಂದಿಗೆ ಮಾತನಾಡಿದ್ದು, ಶೀಘ್ರವೇ ವಿಶೇಷ ಸಿಂಡಿಕೇಟ್ ಸಭೆ ಕರೆದು ಚರ್ಚಿಸಿ ಇನ್ನೊಂದು ವಾರದಲ್ಲಿ ಫಲಿತಾಂಶ ಪ್ರಕಟಿಸಬೇಕು. ಇಲ್ಲದಿದ್ದರೆ ಮತ್ತೆ ವಿಶ್ವವಿದ್ಯಾಲಯದ ವಿರುದ್ಧ ಬೃಹತ್ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಪ್ರತಿಭಟನೆಕಾರರು ನಂತರ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಜಿ. ಕಣ್ಣೂರ್ ಅವರಿಗೆ ಮನವಿ ಪತ್ರ ಸಲ್ಲಿಸಿ, ಕಳೆದ 2024ರ ಡಿಸೆಂಬರ್‌ನಲ್ಲಿ ಬಿ.ಇಡಿ 4ನೇ ಸೆಮಿಸ್ಟರ್ ಪರೀಕ್ಷೆಗಳು ನಡೆದಿದ್ದವು. ಪರೀಕ್ಷೆಗಳು ಆಗಿ 9 ತಿಂಗಳು ಕಳೆದಿವೆ. ಈವರೆಗೂ ಫಲಿತಾಂಶ ಪ್ರಕಟಿಸಿಲ್ಲ.

ಇದರಿಂದ ಕೆಪಿಎಸ್‌ಸಿ ನಡೆಸುವ ವಿವಿಧ ನೇಮಕಾತಿ ಪರೀಕ್ಷೆಗಳು, ಕೇಂದ್ರ ಸರ್ಕಾರದಿಂದ ಚಾಲ್ತಿಯಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆ ಪರೀಕ್ಷೆ ಹಾಜರಾಗಲು ತೊಂದರೆ–ಯಾಗುತ್ತಿದೆ. ಅದಕ್ಕೆ ಅರ್ಜಿ ಹಾಕಲು ಅಕ್ಟೋಬರ್ 23ರಂದು ಕೊನೆಯ ದಿನವಿದ್ದು, ಅಷ್ಟರೊಳಗೆ ಫಲಿತಾಂಶ ಪ್ರಕಟಿಸಬೇಕು ಎಂದು ಒತ್ತಾಯಿಸಿದರು. ಕುಲಸಚಿವರು ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

# ಸತ್ಯ ಸಂಸ್ಕೃತಿ ಗೌರವಿಸುವುದರಿಂದ ಜೀವನಕ್ಕೆ ಬೆಲೆ ನೆಲೆ: ರಂಭಾಪುರಿ ಜಗದ್ಗುರುಗಳು

ಮಲ್ಲಮ್ಮ ನುಡಿ ವಾರ್ತೆ

ಶ್ರೀರಂಭಾಪುರಿಪೀಠ(ಬಾಳೆಹೊನ್ನೂರು)- ಅ 7:

ಚಂಚಲವಾದ ಮನಸ್ಸನ್ನು ತಣ್ಣಗಿಡುವ ಜೀವನ ಮಾರ್ಗವೇ ಆಧ್ಯಾತ್ಮ. ಬದುಕು ಬಲಗೊಳ್ಳಲು ಆಧ್ಯಾತ್ಮದ ಅರಿವು ಸಾಧನೆ ಮತ್ತು ಪ್ರಯತ್ನ ಬೇಕು. ಸತ್ಯ ಸಂಸ್ಕೃತಿ ಗೌರವಿಸದೇ ಹೋದರ ಜೀವನ ನಾಶಗೊಳ್ಳುತ್ತದೆ.ಸತ್ಯಸನಾತನಸಂಸ್ಕೃತಿ ಗೌರವಿಸುವುದರಿಂದಜೀವನಕ್ಕೆಬೆಲೆ ನೆಲೆ ಪ್ರಾಪ್ತವಾಗುತ್ತದೆ ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಹುಣ್ಣಿಮೆ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ



ನೀಡುತ್ತಿದ್ದರು.

ಸುಖಕ್ಕೊಂದು ಅರ್ಥ ಬರುವುದು ಕಷ್ಟದಿಂದ.ಸಂಪಾದಿಸಿದ ಆಸ್ತಿಗಳಿಸಿದ ಸಂಪತ್ತು ಶಾಶ್ವತವೆಂದು ಮನುಷ್ಯ ತಿಳಿದಿದ್ದಾನೆ. ಸತ್ಯದ ಸತ್ಪಥದಲ್ಲಿ ಜೀವನ ವಿಕಾಸಗೊಳ್ಳಬೇಕು. ಒಂದು ಧರ್ಮ ಇನ್ನೊಂದು ಧರ್ಮದ ಆ ಸತ್ಯವನ್ನು ಪರಿಗಣಿಸದಿದ್ದರೂ ಸತ್ಯ ಬದಲಾಗುವುದಿಲ್ಲ. ವಸ್ತು ಒಡವೆಗಳ ಹೊರ ರೂಪ ಬದಲಾಗಬಹುದು. ಆದರೆ ಒಳಗಿರುವ ಮೂಲ ಸತ್ಯ ಬದಲಾಗುವುದಿಲ್ಲ. ಕಾಲಿಗೆ ಆದ ಗಾಯ ಹೇಗೆನಡೆಯಬೇಕೆಂಬುದುನ್ನು ಕಲಿಸುತ್ತದೆ. ಮನಸ್ಸಿಗೆ ಆದ ಗಾಯ ಹೇಗೆ ಬದುಕಬೇಕೆಂಬುದನ್ನು ತಿಳಿಸುತ್ತದೆ. ದೊಡ್ಡದಾಗಿ ಹೊತ್ತಿ ಉರಿಯುವ ದೀಪ ಬಹಳ ಹೊತ್ತು ಬೆಳಗುವುದಿಲ್ಲ.ನಂದಾದೀಪನಿಧಾನವಾಗಿ ಬಹಳ ಹೊತ್ತು ಉರಿದು ಬೆಳಕು ನೀಡುವುದು. ಬದುಕಿನಲ್ಲಿ ಸಾಧಿಸುವ ಗುರಿ ಹೊತ್ತು ಆತ್ಮ ವಿಶ್ವಾಸದಿಂದ ಮುನ್ನಡೆಯುವುದರಿಂದ ಶ್ರೇಯಸ್ಸು ಪ್ರಾಪ್ತವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲೆಯಡ್ರಾಮಿ ತಾಲೂಕಿನ ಶ್ರೀಮದ್ ರಂಭಾಪುರಿ ಶಾಖಾ ಮಾಗಣಗೇರಿ ಶ್ರೀ ರುದ್ರಮುನೀಶ್ವರ ಹಿರೇಮಠಕ್ಕೆ ವಿದ್ಯಾ ವಿನಯ ಸಂಪನ್ನರಾದ ದಾನಯ್ಯ ದೇವರನ್ನು ನಿಯುಕ್ತಿಗೊಳಿಸಿ ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು. ಈ ಅಪೂರ್ವ ಸಮಾರಂಭದಲ್ಲಿ ಸಂಗೊಳ್ಳಿ, ಆಲೂರು, ಮಾದನಹಿಪ್ಪರಗಿ, ತೇರದಾಳ, ಐನಾಪುರ ಶ್ರೀಗಳು ಮತ್ತು ಮಾಗಣಗೇರಿ ಗೊಲ್ಲಾರಪ್ಪಗೌಡ ಮಾಲಿ ಪಾಟೀಲ ಮತ್ತು ಅನೇಕ ಗಣ್ಯರು, ತೇರದಾಳ, ಜಮಖಂಡಿ, ಸಿಂದಗಿ, ಕರಜಗಿ ಮೊದಲಾದ ಗ್ರಾಮಗಳಿಂದ ಆಗಮಿಸಿದ ಭಕ್ತರು ಪಾಲ್ಗೊಂಡಿದ್ದರು.

# ಜಾಲಿವುಡ್ ಸ್ಟುಡಿಯೋಸ್‌ಗೆ ಬೀಗ : ಬಿಗ್ ಬಾಸ್ ಸ್ಥಗಿತಕ್ಕೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ರಾಮನಗರ:ಅ.7:ಪರಿಸರನಿಯಮ ಉಲ್ಲಂಘನೆಆರೋಪದಲ್ಲಿಜಾಲಿವುಡ್ ಸ್ಟುಡಿಯೋಸ್‌ಗೆ ಬೀಗ ಬಿದ್ದಿದೆ. ಬಿಗ್ ಬಾಸ್ ನಡೆಯುತ್ತಿರುವ ಜಾಗಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಬೀಗ ಜಡಿದಿದ್ದಾರೆ.

ನಿಯಮ ಮೀರಿ ಜಾಲಿವುಡ್ ಸ್ಟುಡಿಯೋಸ್ ನಡೆಸುತ್ತಿರುವ ಬಗ್ಗೆ ನೋಟಿಸ್ ನೀಡಲಾಗಿತ್ತು. ಆದರೆ, ಯಾವುದೇ ಪಾಲನೆ ಆಗದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಇಂದು ಸಂಜೆ ಸ್ಟುಡಿಯೋಸ್‌ಗೆ ಭೇಟಿ ನೀಡಿದರು.

ರಾಮನಗರ ತಹಶೀಲ್ದಾರ್ ತೇಜಸ್ವಿನಿ, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರ ಸ್ಥಳಕ್ಕೆ ಭೇಟಿ ನೀಡಿ ಜಾಲಿವುಡ್ ಒಳಗೆ ಪರಿಶೀಲನೆ ನಡೆಸಿದರು.




ನೋಟಿಸ್ ತೆಗೆದುಕೊಳ್ಳಲು ಜಾಲಿವುಡ್ ಆಡಳಿತ ಮಂಡಳಿ ನಕಾರ ಮಾಡಿತು. ಆಗ ಜಾಲಿವುಡ್ ಸ್ಟುಡಿಯೋಸ್ ಸಿಬ್ಬಂದಿಯನ್ನು ತಹಶೀಲ್ದಾರ್ ತರಾಟೆಗೆ ತೆಗೆದು- ಕೊಂಡರು. ನೋಟಿಸ್ ಸ್ವೀಕರಿಸೋದಕ್ಕೆ ಬರಲು ಅರ್ಧ ಗಂಟೆ ಬೇಕಾ ಎಂದು ಗರಂ ಆದರು.

ಕೂಡಲೇ ನೋಟೀಸ್ ತೆಗೆದುಕೊಳ್ಳಿ. ಅಧಿಕೃತವಾಗಿ ಇಂದು ಸೀಜ್ ಮಾಡ್ತೀವಿ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಸಂಜೆ 7 ಗಂಟೆ ವರೆಗೂ ಎಕ್ಸಿಟ್ ಗೇಟ್ ಓಪನ್ ಮಾಡಿಕೊಳ್ಳಿ. ಕೂಡಲೇ ಜಾಲಿವುಡ್ ಸ್ಟುಡಿಯೋ ಕ್ಲೋಸ್ ಮಾಡುವಂತೆ ಸೂಚನೆ ನೀಡಿದರು.

ಕೊನೆಗೆಜಾಲಿವುಡ್ ಆಡಳಿತಮಂಡಳಿ ನೋಟಿಸ್ ಸ್ವೀಕರಿಸಿತು. ನಾಳೆಯಿಂದ ಜಾಲಿವುಡ್ ಸ್ಟುಡಿಯೋಸ್ ಯಾವುದೇ ಕಾರ್ಯಾಚರಣೆ ಮಾಡಬಾರದು. ಎಲ್ಲಾ ರೀತಿಯ ಕಾರ್ಯಚಟುವಟಿಕೆ ಸ್ಥಗಿತ ಮಾಡುವಂತೆ ಸೂಚನೆ ನೀಡಲಾಯಿತು. ಸ್ಟುಡಿಯೋಸ್ ಸ್ವತಃ ತಾವೇ ನಿಂತು ತಹಶೀಲ್ದಾರ್ ಬೀಗ ಹಾಕಿದರು. ಬಿಗ್ ಬಾಸ್ ಸ್ಥಗಿತಕ್ಕೂ ಸೂಚನೆ ನೀಡಿದರು.

ಸೀಲ್‌ಡೌನ್ ಆದಮೇಲೆ ಒಳಗೆ ಯಾವುದೇ ಆಕ್ಟಿವಿಟಿ ನಡೆಯುವಂತಿಲ್ಲ. ಯಾವುದೇ ವ್ಯಕ್ತಿಗಳೂ ಇರುವಂತಿಲ್ಲ. ಹಾಗಾಗಿ, ಬಿಗ್ ಬಾಸ್ ಮನೆಯಿಂದ ಸ್ಪರ್ಧಿಗಳನ್ನ ಆಚೆ ಕಳುಹಿಸುವ ಸಾಧ್ಯತೆ ಇದೆ.

# ಪರಿಶಿಷ್ಟ ಜಾತಿಯವರು ಬೌದ್ಧ ಧರ್ಮಕ್ಕೆ ಮತಾಂತರ ಆದ್ರು ’ಪರಿಶಿಷ್ಟ ಜಾತಿ ಪ್ರಮಾಣಪತ್ರ’: ರಾಜ್ಯ ಸರ್ಕಾರದ ಆದೇಶ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.7: ಪರಿಶಿಷ್ಟ ಜಾತಿಗೆ ಸೇರಿದವರು ಬೌದ್ಧ ಧರ್ಮಕ್ಕೆಮತಾಂತರಗೊಂಡರೂ ಅವರಿಗೆ ಖಅ ಜಾತಿ ಪ್ರಮಾಣಪತ್ರ ನೀಡಲು ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. 101 ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಯಾರೇ ಆದರೂ ಬೌದ್ಧಧರ್ಮಕ್ಕೆಮತಾಂತರಗೊಂಡರೂ ಇದು ಅನ್ವಯವಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ತನ್ನ ಆದೇಶದಲ್ಲಿ ತಿಳಿಸಿದೆ.

ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಇತ್ಯಾದಿಗಳಲ್ಲಿ ಮೀಸಲಾತಿ) ಕಾಯ್ದೆ 1990, 2024ರ ತಿದ್ದುಪಡಿ ಕಾಯ್ದೆ ಮತ್ತು 1992ರ ನಿಯಮದಂತೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಪರಿಶಿಷ್ಟ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ನೀಡಲು ಆಕ್ಟೋಬರ್ 6 ರಂದು ಹೊರಡಿಸಿದ ಆದೇಶದಲ್ಲಿ ಹೇಳಲಾಗಿದೆ.

ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮ ನಮೂದಿಸಲು ಅವಕಾಶ:

ಪರಿಶಿಷ್ಟ ಜಾತಿ ಪ್ರಮಾಣಪತ್ರಗಳ ಅರ್ಜಿಗಳ ಧರ್ಮದ ಕಾಲಂನಲ್ಲಿ 'ಬೌದ್ಧಧರ್ಮ' ಎಂದು ನಮೂದಿಸಲು ಆದೇಶವು ಅವಕಾಶ ನೀಡುತ್ತದೆ.

ಶೈಕ್ಷಣಿಕ ದಾಖಲೆಗಳಲ್ಲಿ ಬೌದ್ಧ ಧರ್ಮ ಸೇರಿಸಲು ಅವಕಾಶ:

ಅಲ್ಲದೆ, ಅರ್ಜಿದಾರರು, ಪೋಷಕರು ಅವರು ಬಯಸಿದಲ್ಲಿ ಸರ್ಕಾರಿ ಶಾಲೆ, ಖಾಸಗಿ ಶಾಲೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲಾ ಇತರ ಶಿಕ್ಷಣ ಸಂಸ್ಥೆಗಳ ದಾಖಲೆಗಳಲ್ಲಿ ಧರ್ಮದ ಕಾಲಂನಲ್ಲಿ ಬೌದ್ಧಧರ್ಮವನ್ನು ನಮೂದಿಸಲು ಅವಕಾಶ ನೀಡುತ್ತದೆ. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳು, ಮಂಡಳಿಗಳು ಮತ್ತು ನಿಗಮಗಳು, ಇತರ ಸಂಸ್ಥೆಗಳು ಆದೇಶದಂತೆ ಕಾರ್ಯನಿರ್ವಹಿಸುತ್ತವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರ 1990ರಲ್ಲಿ ಬರೆದಿದ್ದ ಪತ್ರದ ಆಧಾರದ ಮೇಲೆ ಬೌದ್ಧ ಧರ್ಮಕ್ಕೆಮತಾಂತರಗೊಂಡ ಪರಿಶಿಷ್ಟ ಜಾತಿಯವರಿಗೆ ಎಸ್ ಸಿ ಪ್ರಮಾಣ ಪತ್ರ ನೀಡಲು ರಾಜ್ಯಸರ್ಕಾರ 2013 ರಲ್ಲಿ ಸುತ್ತೋಲೆಯೊಂದನ್ನು ಹೊರಡಿಸಿತ್ತು.

2016 ರಲ್ಲಿ ಬೌದ್ಧರಾಗುವ ಪರಿಶಿಷ್ಟ ಜಾತಿಯ ಜನರು ಎಸ್‌ಸಿ ಪ್ರಮಾಣಪತ್ರಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವಂತೆ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಕೇಂದ್ರ ಸರ್ಕಾರ ಸೂಚಿಸಿತ್ತು 'ಸುತ್ತೋಲೆ ಹೊರಡಿಸಿದ್ದರೂ ಈ ಕುರಿತು ಸ್ಪಷ್ಟನೆ ಹಾಗೂ ಸೂಕ್ತ ಆದೇಶ ಕೋರಿ ಹಲವು ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿವೆ ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ.

ಕರ್ನಾಟಕದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು, ಪಾರ್ಸಿಗಳು ಮತ್ತು ಜೈನರೊಂದಿಗೆ ಬೌದ್ಧರು ಧಾರ್ಮಿಕ ಅಲ್ಪಸಂಖ್ಯಾತರ ಪಟ್ಟಿಗೆ ಬರುತ್ತಾರೆ.

# ತಮ್ಮದೇ ಜನರ ಹತ್ಯೆ ಮಾಡುವವರಿಂದ ಕಲಿಯಬೇಕಿಲ್ಲ:ಪಾಕ್‌ಗೆ ಭಾರತದ ತಿರುಗೇಟು

ಮಲ್ಲಮ್ಮ ನುಡಿ ವಾರ್ತೆ

ವಿಶ್ವಸಂಸ್ಥೆ:ಅ.7: ತಮ್ಮದೇ ಜನರ ಮೇಲೆ ಬಾಂಬ್ ದಾಳಿ ನಡೆಸುವ, 4 ಲಕ್ಷ ಜನರ ಸಾಮೂಹಿಕ ಅತ್ಯಾಚಾರಕ್ಕೆ ಅನುಮತಿ ನೀಡಿದವರಿಂದ ಪಾಠದ ಅಗತ್ಯ ನಮಗಿಲ್ಲ ಎಂದು ಹೇಳುವ ಮೂಲಕ ವಿಶ್ವಸಂಸ್ಥೆಯಲ್ಲಿ ಕಾಶ್ಮೀರಿ ಮಹಿಳೆಯರ ಬಗ್ಗೆ ಮಾತನಾಡಿದ ಪಾಕಿಸ್ತಾನಕ್ಕೆ ಭಾರತ ತಕ್ಕ ತಿರುಗೇಟು ನೀಡಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಹಿಳೆಯರು ಮತ್ತು ಭದ್ರತೆಯ ಕುರಿತ ಚರ್ಚೆಯ ಸಂದರ್ಭದಲ್ಲಿ ಮಾಡಿದ ಅತ್ಯಂತ ಕಠೋರ ಭಾಷಣದಲ್ಲಿ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್, 1971 ರ ಆಪರೇಷನ್ ಸರ್ಚ್‌ಲೈಟ್ ಹಾಗೂ ಕಳೆದ ತಿಂಗಳು ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದಲ್ಲಿ ಪಾಕಿಸ್ತಾನಿ ವಾಯುಪಡೆಯು ರಾತ್ರಿಯಿಡೀ ನಡೆಸಿದ ವಾಯುದಾಳಿಯನ್ನು ಉಲ್ಲೇಖಿಸಿಸಿ ಪಾಕಿಸ್ತಾನದ ಜನ್ಮ ಜಾಲಾಡಿದರು.

ಪಾಕಿಸ್ತಾನದ ಸೇನೆಯು "ವ್ಯವಸ್ಥಿತ ನರಮೇಧ" ನಡೆಸಿದೆ. 1971 ರಲ್ಲಿ ಆಪರೇಷನ್ ಸರ್ಚ್‌ಲೈಟ್ ಸಮಯದಲ್ಲಿ 400,000 ಕ್ಕೂ ಹೆಚ್ಚು ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಕ್ಕೆ ಅನುಮತಿ ನೀಡಿದೆ.

ಪಾಕಿಸ್ತಾನವು 1971 ರಲ್ಲಿ ಆಪರೇಷನ್ ಸರ್ಚ್‌ಲೈಟ್ ನಡೆಸಿದ ದೇಶವಾಗಿದ್ದು, ತನ್ನದೇ ಆದ ಸೈನ್ಯದಿಂದ




400,000 ಮಹಿಳಾ ನಾಗರಿಕರ ಮೇಲೆ ಜನಾಂಗೀಯ ಹತ್ಯೆಯ ಸಾಮೂಹಿಕ ಅತ್ಯಾಚಾರದ "ವ್ಯವಸ್ಥಿತ ಅಭಿಯಾನ"ಕ್ಕೆ ಅನುಮತಿ ನೀಡಿದೆ. ಆದರೂ ತಪ್ಪು ನಿರ್ದೇಶನ ಮತ್ತು ಅತಿಶಯೋಕ್ತಿಯಿಂದ ಜಗತ್ತನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತದೆ ಎಂದು ಹೇಳಿದ್ದಾರೆ.

ಪ್ರತಿ ವರ್ಷ, ದುರದೃಷ್ಟವಶಾತ್, ನನ್ನ ದೇಶದ ವಿರುದ್ಧ, ವಿಶೇಷವಾಗಿ ಅವರು ಬಯಸುವ ಭಾರತೀಯ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಪಾಕಿಸ್ತಾನದ ಭ್ರಮೆಯ ಟೀಕೆಗಳನ್ನು ಕೇಳುತ್ತಾ ಬಂದಿದ್ದೇವೆ. ಮಹಿಳೆಯರು, ಶಾಂತಿ ಮತ್ತು ಭದ್ರತಾ ಕಾರ್ಯಸೂಚಿಯಲ್ಲಿ ಭಾರತದ ದಾಖಲೆಯು ಕಳಂಕರಹಿತವಾಗಿದೆ. ತನ್ನದೇ ಜನರ ಮೇಲೆ ಬಾಂಬ್ ದಾಳಿ ಮಾಡುವ, ವ್ಯವಸ್ಥಿತ ನರಮೇಧವನ್ನು ನಡೆಸುವ ದೇಶವು ತಪ್ಪು ನಿರ್ದೇಶನ ಮತ್ತು ಅತಿಶಯೋಕ್ತಿಯಿಂದ ಮಾತ್ರ ಜಗತ್ತನ್ನು ಗಮನವನ್ನು ಬೇರೆಡೆ ಸೆಳೆಯಲು ಪ್ರಯತ್ನಿಸಬಹುದು ಎಂದು ತಿಳಿಸಿದ್ದಾರೆ.

ಜಗತ್ತು ಪಾಕಿಸ್ತಾನದ ಅಪಪ್ರಚಾರವನ್ನು ನೋಡುತ್ತದೆ. ವಿಶ್ವದ ಅತ್ಯಂತ ಕೆಟ್ಟ ಮಾನವ ಹಕ್ಕುಗಳ ದಾಖಲೆ ಹೊಂದಿದ ದೇಶವು ತನ್ನ ಸಮಾಜದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ರಾಜ್ಯ ಪ್ರಾಯೋಜಿತ ಕಿರುಕುಳ ಮತ್ತು ವ್ಯವಸ್ಥಿತ ತಾರತಮ್ಯವನ್ನು ನಡೆಸುತ್ತಾ ಬಂದಿದೆ ಎಂದು ವಾಗ್ದಾಳಿ ನಡೆಸಿದರು.

ಪಾಕಿಸ್ತಾನದ ಪ್ರತಿನಿಧಿ ಸೈಮಾ ಸಲೀಮ್ ತಮ್ಮ ಭಾಷಣದಲ್ಲಿ, ಕಾಶ್ಮೀರದ ಮಹಿಳೆಯರು ದಶಕಗಳಿಂದ "ಯುದ್ಧದ ಆಯುಧವಾಗಿ ಬಳಸಲಾಗುವ ಲೈಂಗಿಕ ಹಿಂಸೆಯನ್ನು ಸಹಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದರು.

# ಸಿಎಂ ಹುದ್ದೆ ಗೊಂದಲ ಬಗೆಹರಿಸಲು ಹೈಕಮಾಂಡ್‌ಗೆ ಪರಮೇಶ್ವರ್ ಒತ್ತಾಯ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.7: ಸಿಎಂ ಸ್ಥಾನ ಕುರಿತ ಹೇಳಿಕೆಗಳಿಂದ ಗೊಂದಲ ಆಗ್ತಿರುವುದನ್ನು ಹೈಕಮಾಂಡ್ ಬ್ರೇಕ್ ಹಾಕಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಮಾತಾಡಿದ ಅವರು, ಗೊಂದಲ ಬಗೆಹರಿಸಬೇಕೆಂಬ ಸತೀಶ್ ಜಾರಕಿಹೊಳಿ ಅವ್ರು ಹೇಳಿರೋದು ಸರಿ ಇದೆ. ನಿತ್ಯ ಒಬ್ಬೊಬ್ಬರು ಒಂದೊಂದು ಹೇಳಿಕೆ ಕೊಡ್ತಿದ್ದಾರೆ. ಇದನ್ನು ಬಗೆಹರಿಸಬೇಕು. ಇದನ್ನು ಬಗೆಹರಿಸುವ ಕೆಲಸ ಹೈಕಮಾಂಡ್ ಮಾಡುತ್ತೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಯಾವ ಸಂದರ್ಭದಲ್ಲಿ ಯಾವ ಔಷಧ ಕೊಡಬೇಕು ಅಂತ ಹೈಕಮಾಂಡ್‌ಗೆ ಗೊತ್ತಿದೆ. ಆ ಔಷಧ ಹೈಕಮಾಂಡ್ ಕೊಡುತ್ತೆ. ಗೊಂದಲಗಳನ್ನು ಬಗೆಹರಿಸಬೇಕು ಅಂತ ನಾನೂ ಹೈಕಮಾಂಡ್‌ಗೆ ಒತ್ತಾಯಿಸ್ತೇನೆ ಎಂದಿದ್ದಾರೆ.

ಬಿಹಾರ ಚುನಾವಣೆ ಬಳಿಕ ಕಾಂಗ್ರೆಸ್‌ನಲ್ಲಿ ಬದಲಾವಣೆಗಳಾಗಲಿವೆ ಎಂಬ ವಿಚಾರವಾಗಿ, ಬದಲಾವಣೆಗಳನ್ನು ಮಾಡಲು ಚುನಾವಣೆಯೇ ಆಗಬೇಕು



ಅಂತೇನಿಲ್ಲ. ಬದಲಾವಣೆ ಮಾಡೋದಿದ್ರೆ ಹೈಕಮಾಂಡ್‌ನವ್ರು ಮಾಡ್ತಾರೆ. ಸಿಎಂಗೆ ಆಗಲೀ ಡಿಸಿಎಂಗೆ ಆಗಲೀ ಎಲ್ರಿಗೂ ಜವಾಬ್ದಾರಿ ಇದೆ. ಒಂದು ಕಡೆ ಪ್ರವಾಹ ಆಗ್ತಿದೆ, ಆ ಕಡೆ ಗಮನ ಕೊಡಬೇಕು. ಸಮಸ್ಯೆಗಳನ್ನು ಬಗೆಹರಿಸುವತ್ತ ನಾವು ಗಮನ ಕೊಡಬೇಕು. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತದೆ. ಆದ್ರೆ ಈಗ ನಮ್ಮ ಆದ್ಯತೆ ಏನು ಅಂತ ನೋಡಬೇಕು ಎಂದರು. ಪೊಲೀಸ್ ಅಧಿಕಾರಿಗಳ ವರ್ಗಾವಣೆ ವಿಚಾರ ಹೈಕಮಾಂಡ್ ಗಮನಕ್ಕೆ ಹೋಗಿಲ್ಲ. ಶಾಸಕರು, ಮಂತ್ರಿಗಳ ಭಿನ್ನಾಭಿಪ್ರಾಯದಿಂದ ಗೃಹ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆಯಲ್ಲಿ ಗೊಂದಲ ಆಗಿದೆ ಅನ್ನೋದನ್ನು ಅಲ್ಲಗಳೆದಿದ್ದು, ನಮ್ಮ ಇಲಾಖೆಯಲ್ಲಿ ವರ್ಗಾವಣೆಗೆ ಅಂತ ನಿಗದಿತ ಸಮಯ ಇಲ್ಲ. 365 ದಿವಸವೂ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ ಆಗುತ್ತಿರುತ್ತೆ. ಯಾ- ಕೆಂದರೆ ಎಲ್ಲೋ ಖಾಲಿ ಇರುತ್ತೆ ಅದನ್ನ ತುಂಬಬೇಕು. ಯಾರೋ ಅಮಾನತು ಆಗ್ತಾರೆ ಆ ಸ್ಥಾನ ತುಂಬಬೇಕು. ನಿವೃತ್ತಿ ಆಗ್ತಾರೆ ಅದನ್ನ ತುಂಬಬೇಕು. ಹೊಸ ನೇಮಕಾತಿ ಆಗುತ್ತೆ ಅವರಿಗೆ ಪೋಸ್ಟಿಂಗ್ ನೀಡಬೇಕು. ಪೊಲೀಸ್ ಇಲಾಖೆಯಲ್ಲಿ ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಇದೆ. ಅಲ್ಲಿ ವರ್ಗಾವಣೆ ಮಾಡುವ ಬಗ್ಗೆ ತೀರ್ಮಾನ ಮಾಡಲಾಗುತ್ತೆ. ಸಬ್ ಇನ್ಸ್‌ಪೆಕ್ಟರ್, ಪಿಸಿಗಳಗಳ ವರ್ಗಾವಣೆ ಆಯಾ ಐಜಿಗಳು ತೀರ್ಮಾನ ಮಾಡ್ತಾರೆ. ನಿನ್ನೆ ಸಹ ಸಬ್ ಇನ್ಸೆಕ್ಟರ್, ಡಿವೈಎಸ್ಪಿಗಳನ್ನ ವರ್ಗಾವಣೆ ಮಾಡಿದ್ದೀವಿ. ಇದ್ಯಾವುದೂ ಹೈಕಮಾಂಡ್ ಗಮನಕ್ಕೆ ಏನು ಹೋಗಲ್ಲ ಎಂದಿದ್ದಾರೆ

# ಸರ್ವಿಸ್ ರಿವಾಲ್ವರ್‌ನಿಂದ ಗುಂಡು ಹಾರಿಸಿಕೊಂಡು ಹರಿಯಾಣ ಎಡಿಜಿಪಿ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಚಂಡೀಗಢ:ಅ.7: ಹರಿಯಾಣ ಕೇಡರ್ ಐಪಿಎಸ್ ಅಧಿಕಾರಿ ವೈ. ಪೂರಣ್ ಕುಮಾರ್ ಅವರ ಚಂಡೀಗಢದ ನಿವಾಸದಲ್ಲಿ ಮೃತದೇಹ ಪತ್ತೆಯಾಗಿದೆ. ಸ್ವತಃ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ವರದಿಯಾಗಿದೆ. ಪೂರಣ್ ಕುಮಾರ್ ಹರಿಯಾಣದಲ್ಲಿ ಎಡಿಜಿಪಿ ಹುದ್ದೆಯಲ್ಲಿದ್ದು ಅವರ ಪತ್ನಿ ಅಮ್ನೀತ್ ಪಿ. ಕುಮಾರ್ ಸಹ ಹರಿಯಾಣ ಕೇಡರ್‌ನ ಐಎಎಸ್ ಅಧಿಕಾರಿ. ಅವರು ಪ್ರಸ್ತುತ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ನೇತೃತ್ವದ ನಿಯೋಗದೊಂದಿಗೆ ಜಪಾನ್‌ನಲ್ಲಿದ್ದಾರೆ.

ವೈ. ಪೂರಣ್ ಕುಮಾರ್ ಅವರ ಕುಟುಂಬವು ಚಂಡೀಗಢದ ಸೆಕ್ಟರ್ 11ರಲ್ಲಿ ವಾಸಿಸುತ್ತಿದೆ. ವರದಿಗಳ ಪ್ರಕಾರ, ವೈ. ಪೂರಣ್ ಕುಮಾರ್ ತಮ್ಮ ಸೇವಾ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವೈ. ಪೂರಣ್ ಕುಮಾರ್ ತಮ್ಮ ಮನೆಯ ನೆಲಮಾಳಿಗೆಯಲ್ಲಿ ಗುಂಡು ಹಾರಿಸಿಕೊಂಡಿದ್ದಾರೆ. ನೆಲಮಾಳಿಗೆಯು



ಧ್ವನಿ ನಿರೋಧಕವಾಗಿದ್ದು ಹೀಗಾಗಿ ಗುಂಡೇಟಿನ ಶಬ್ದ ಹೊರಗೆ ಕೇಳಿಸಲಿಲ್ಲ. ಅವರ ಮಗಳು ಕೆಳಗೆ ಹೋದಾಗ, ರಿವಾಲ್ವರ್ ಜೊತೆಗೆ ತನ್ನ ತಂದೆಯ ದೇಹವು ನೆಲದ ಮೇಲೆ ಬಿದ್ದಿರುವುದನ್ನು ಕಂಡ ನಂತರ ಆಕೆ ಪೊಲೀಸರಿಗೆ ಮಾಹಿತಿ ನೀಡಿದರು.

ವೈ. ಪೂರಣ್ ಕುಮಾರ್ ಹರಿಯಾಣ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದರು. ಅವರು ಪ್ರಸ್ತುತ ಪೊಲೀಸ್ ತರಬೇತಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರ ಅಧಿಕಾರಾವಧಿಯಲ್ಲಿ ಅವರು ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರು. ಎಡಿಜಿಪಿ ಶ್ರೇಣಿಯ ಅಧಿಕಾರಿ ಪೂರಣ್ ಕುಮಾರ್ ಅವರ ಪತ್ನಿ ಅಮ್ನೀತ್ ಪಿ. ಕುಮಾರ್ ಘಟನೆಯ ಸಮಯದಲ್ಲಿ ಮನೆಯಲ್ಲಿ ಇರಲಿಲ್ಲ. ಅವರು ಪ್ರಸ್ತುತ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ನೇತೃತ್ವದ ಅಧಿಕೃತ ನಿಯೋಗದೊಂದಿಗೆ ಜಪಾನ್‌ನಲ್ಲಿದ್ದಾರೆ. ಪೊಲೀಸ್ ತಂಡ ಮತ್ತು ವಿಧಿವಿಜ್ಞಾನ ತಜ್ಞರನ್ನು ಘಟನಾ ಸ್ಥಳಕ್ಕೆ ಕಳುಹಿಸಲಾಗಿದ್ದು, ತನಿಖೆ ಮುಂದುವರೆದಿದೆ.

ಹರಿಯಾಣದ ಹಿರಿಯ ಐಪಿಎಸ್ ಅಧಿಕಾರಿ ವೈ. ಪೂರಣ್ ಕುಮಾರ್ ಅವರ ಆತ್ಮಹತ್ಯೆಗೆ ಕಾರಣ ಸ್ಪಷ್ಟವಾಗಿಲ್ಲ. ಎಡಿಜಿಪಿ ಶ್ರೇಣಿಯ ಅಧಿಕಾರಿ ಪೂರಣ್ ಕುಮಾರ್, ಐಪಿಎಸ್ ಅಧಿಕಾರಿಗಳ ಹಿರಿತನವನ್ನು ಪ್ರಶ್ನಿಸುತ್ತಿದ್ದರು ಮತ್ತು ವ್ಯವಸ್ಥೆಯನ್ನು ನಿರಂತರವಾಗಿ ಪ್ರಶ್ನಿಸುತ್ತಿದ್ದರು. ಅವರು ಕಾಲಕಾಲಕ್ಕೆ ಗೃಹ ಸಚಿವ ಅನಿಲ್ ವಿಜ್ ಅವರಿಗೆ ಪತ್ರಗಳನ್ನು ಬರೆದರು. ಹರಿಯಾಣದಲ್ಲಿ ಶಿಕ್ಷಕರ ಹತ್ಯೆಯ ತನಿಖೆ ನಡೆಸುತ್ತಿದ್ದರು.

# ದೈವಾರಾಧನೆ ಪವಿತ್ರವಾದದ್ದು.. ಅದನ್ನು ಅಪಹಾಸ್ಯ ಮಾಡಬೇಡಿ: ಪ್ರೇಕ್ಷಕಲ್ಲಿ ಹೊಂಬಾಳೆ ಫಿಲ್ಮ್ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.7:ದೈವಾರಾಧನೆ ಅತ್ಯಂತ ಪವಿತ್ರವಾದ ಆಧ್ಯಾತ್ಮಿಕ ಸಂಪ್ರದಾಯ. ಅದನ್ನು ಹಾಸ್ಯಾಸ್ಪದವಾಗಿ ಅಣಕು ಪ್ರದರ್ಶನ ಮಾಡಬೇಡಿ ಎಂದು 'ಕಾಂತಾರ ಚಾಪ್ಟರ್ 1' ಸಿನಿಮಾ ಪ್ರೇಕ್ಷಕರಲ್ಲಿ ಹೊಂಬಾಳೆ ಫಿಲ್ಮ್ಸ್ ಮನವಿ ಮಾಡಿಕೊಂಡಿದೆ.

ಕಾಂತಾರ ಚಾಪ್ಟರ್ 1 ಸಿನಿಮಾ ಥಿಯೇಟರ್‌ಗಳಲ್ಲಿ ಕೆಲ ಪ್ರೇಕ್ಷಕರ ಅನುಚಿತ ವರ್ತನೆಗೆ ಹೊಂಬಾಳೆ ಫಿಲ್ಮ್ಸ್ ಬೇಸರ ವ್ಯಕ್ತಪಡಿಸಿ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದೆ.

’ತುಳುನಾಡಿನ ಸಂಸ್ಕೃತಿಯ ಪ್ರೌಢತೆಯ ಸಂಕೇತವಾದ ದೈವಾರಾಧನೆ ನಮ್ಮ ನಂಬಿಕೆ, ಭಕ್ತಿ ಹಾಗೂ ತಾಯ್ನಾಡಿನ ಹೆಮ್ಮೆಯ ಪ್ರತಿರೂಪವಾಗಿದೆ. ಕಾಂತಾರ ಮತ್ತು ಕಾಂತಾರ ಚಾಪ್ಟರ್ 1 ಚಿತ್ರಗಳನ್ನು ನಾವು ಗೌರವದೊಂದಿಗೆ ದೈವಗಳ ಮಹಿಮೆಯನ್ನು ಕೊಂಡಾಡುವ ಸದುದ್ದೇಶದಿಂದ ನಿರ್ಮಿಸಿದ್ದೇವೆ. ದೈವಾರಾಧನೆ ಗೌರವ ಹಾಗೂ ಅಚಲ ಭಕ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ನಾವು ಶ್ರಮಪಟ್ಟು ಕೆಲಸ ಮಾಡಿದ್ದೇವೆ. ಇದರೊಂದಿಗೆ ತುಳುನಾಡಿನ ಸಂಸ್ಕೃತಿ ಮತ್ತು ಪರಂಪರೆಯ ಮಹತ್ವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾರಿ ಯಶಸ್ವಿಯಾಗಿದ್ದೇವೆ. ಪ್ರೇಕ್ಷಕರಿಂದ ಬಂದಿರುವ ಅಪಾರವಾದ ಪ್ರೀತಿಗೆ ಹಾಗೂ ಪ್ರೋತ್ಸಾಹಕ್ಕೆ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಆದಾಗ್ಯೂ, ಇತ್ತೀಚೆಗೆ ಕೆಲವು ಜನರು ಚಿತ್ರದಲ್ಲಿ ತೋರಿಸಿದ ದೈವಪಾತ್ರಗಳನ್ನು ಅನುಕರಿಸುತ್ತಾ, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಕಾರ್ಯಕ್ರಮಗಳಲ್ಲಿ ಅಸಭ್ಯ ರೀತಿಯಲ್ಲಿ ವರ್ತಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಚಿತ್ರಗಳಲ್ಲಿ ತೋರಿಸಲಾದ ದೈವಾರಾಧನೆ ಅಥವಾ ದೈವಪೂಜೆ ಅತ್ಯಂತ ಪವಿತ್ರವಾದ ಆಧ್ಯಾತ್ಮಿಕ ಸಂಪ್ರದಾಯಕ್ಕೆ ಆಧಾರಿತವಾಗಿದೆ. ಇದನ್ನು ಹಾಸ್ಯಾಸ್ಪದವಾಗಿ ಅಣುಕು ಪ್ರದರ್ಶನ ಮಾಡುವಂತಿಲ್ಲ. ಇಂತಹ ಕೃತ್ಯಗಳು ನಮ್ಮ ನಂಬಿಕೆ ಮತ್ತು ಧಾರ್ಮಿಕ ಸಂವೇದನೆಯನ್ನು ಹೀನಗೊಳಿಸುತ್ತವೆ ಮತ್ತು ತುಳುನಾಡಿನ ಜನರ ಭಾವನೆಗಳಿಗೆ ತೀವ್ರ ನೋವುಂಟು ಮಾಡುತ್ತವೆ.

ಆದ್ದರಿಂದ, ಹೊಂಬಾಳೆ ಫಿಲ್ಮ್ಸ್, ಜನತೆ ಹಾಗೂ ಪ್ರೇಕ್ಷಕರಿಗೆ ಮನವಿ ಮಾಡಿಕೊಳ್ಳುತ್ತದೆ. ದೈವಪಾತ್ರಗಳನ್ನು ಅನುಕರಿಸುವುದು, ಧ್ವನಿಯನ್ನು ಹೋಲುವುದು ಅಥವಾ ಅವರ ರೂಪ-ವೇಷಧಾರಣೆ ಮಾಡುವುದು ಸೇರಿದಂತೆ ಯಾವುದೇ ರೀತಿಯ ಕೃತ್ಯಗಳಿಂದ ದೂರವಿರಿ. ಇದನ್ನು ಚಿತ್ರಮಂದಿರಗಳಲ್ಲಿ ಆಗಲಿ, ಸಾರ್ವಜನಿಕ ಸ್ಥಳಗಳಲ್ಲಿ ಆಗಲಿ ಎಲ್ಲೂ ಮಾಡುವಂತಿಲ್ಲ. ದೈವಾರಾಧನೆಯ ಪವಿತ್ರತೆಯನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಆರಾಧನೆಯ ಆಧ್ಯಾತ್ಮಿಕ ಮಹತ್ವವನ್ನು ಎಲ್ಲರೂ ಗುರುತಿಸಿ, ಗೌರವದಿಂದ ನಡೆದುಕೊಳ್ಳಬೇಕು. ನಮ್ಮ ಚಿತ್ರಗಳ ಮೂಲಕ ನಾವು ಸಂಭ್ರಮಿಸಿದ ನಂಬಿಕೆಯನ್ನು ಯಾವುದೇ ಸಂದರ್ಭದಲ್ಲಿ ಹಾಸ್ಯಾಸ್ಪದವಾಗಲು ಅವಕಾಶ ನೀಡಬಾರದು. ಈ ಅಮೂಲ್ಯ ಸಾಂಸ್ಕೃತಿಕ ಪರಂಪರೆಯ ಪವಿತ್ರತೆಯನ್ನು ಕಾಪಾಡಲು ನೀವು ನೀಡುತ್ತಿರುವ ನಿರಂತರ ಪ್ರೋತ್ಸಾಹ ಮತ್ತು ಸಹಕಾರಕ್ಕೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು’ ಎಂದು ಹೊಂಬಾಳೆ ಫಿಲ್ಮ್ಸ್ ಮನವಿ ಮಾಡಿಕೊಂಡಿದೆ.

# ಸಂಪುಟ ಪುನರ್ ರಚನೆ ಸುಳಿವು ನೀಡಿದ ಸಿಎಂ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು, ಅ. 7: ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಂಚಿಕೆ, ಸೆಪ್ಟೆಂಬರ್ ಕ್ರಾಂತಿಯ ಚರ್ಚೆಗಳಿಗೆ ತೆರೆ ಎಳೆಯುವಂತೆ ಮುಂದಿನ ಎರಡೂವರೆ ವರ್ಷ ನಾನೇ ಮುಖ್ಯಮಂತ್ರಿ ಎಂದು ಮೈಸೂರು ದಸರಾ ಸಂದರ್ಭದಲ್ಲಿ ಹೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗ ಸಂಪುಟ ಪುನರ್ ರಚನೆಯ ಸುಳಿವು ನೀಡುವ ಮೂಲಕ ತಮ್ಮ ನಾಯಕತ್ವ ಅಭಾದಿತ ಎಂಬುದನ್ನು ಸಂದೇಶವನ್ನು ರವಾನಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿರುವ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸಂಪುಟ ಪುನರ್ ರಚಿಸುವ ಸ್ಪಷ್ಟ ಸೂಚನೆಯನ್ನು ನೀಡಿದರು. ಪರಿಶಿಷ್ಟ ಸಮುದಾಯದ ವಾಲ್ಮೀಕಿ ಶಾಸಕರೊಬ್ಬರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂಬ ಬೇಡಿಕೆ ಇರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮುಂದೆ ಸಂಪುಟ ಪುನರ್ ರಚನೆಯಾಗುತ್ತದೆ. ಆ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯದವರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದರು.

ರಾಜ್ಯದಲ್ಲಿ ನವೆಂಬರ್‌ನಲ್ಲಿ ಕ್ರಾಂತಿಯಾಗುತ್ತದೆ, ಅಧಿಕಾರ ಹಂಚಿಕೆ ಒಪ್ಪಂದ ಜಾರಿಯಾಗುತ್ತದೆ ಎಂಬ ಚರ್ಚೆಗಳು ನಡೆದಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವಸಂಪುಟ ಪುನರ್ ರಚನೆಯಬಗ್ಗೆ ಮಾತನಾಡಿರುವುದು ಮಹತ್ವಪಡೆದು- ಕೊಂಡಿದೆ.



ಈ ಹಿಂದೆ ಹಲವುಬಾರಿ ಮುಂದಿನ 5 ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿದ್ದ ಸಿದ್ದರಾಮಯ್ಯನವರು, ಮೊನ್ನೆ ದಸರಾ ಸಂದರ್ಭದಲ್ಲೂ ಮುಂದಿನ ಎರಡೂವರೆ ವರ್ಷ ನಾನೇ ಮುಖ್ಯಮಂತ್ರಿ. ಬರುವ ವರ್ಷವೂ ನಾಡದೇವತೆ ಚಾಮುಂಡೇಶ್ವರಿಗೆ ನಾನೇ ಪುಷ್ಪಾರ್ಚನೆ ಮಾಡುತ್ತೇನೆ ಎಂದು ಹೇಳಿದ್ದರು. ಮುಖ್ಯಮಂತ್ರಿಗಳ ಈ ಹೇಳಿಕೆ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿ ಕಾಂಗ್ರೆಸ್‌ನಲ್ಲೂ ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಮುಖ್ಯಮಂತ್ರಿ ಪರ ಇರುವ ಸಚಿವರು, ಶಾಸಕರು ಸಿದ್ದರಾಮಯ್ಯನವರೇ 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂಬ ಹೇಳಿಕೆ ನೀಡಿದ್ದರು. ಹಾಗೆಯೇ ಡಿ.ಕೆ. ಶಿವಕುಮಾರ್ ಮುಂದೆ ಮುಖ್ಯಮಂತ್ರಿಯಾಗಬೇಕು ಎಂದು ಡಿ.ಕೆ. ಶಿವಕುಮಾರ್ ಪರ ಶಾಸಕರು ಮಾತನಾಡಿದ್ದರು.

ಈ ಎಲ್ಲದಕ್ಕೂ ತೆರೆ ಎಳೆಯುವಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಇಲ್ಲ ಎಂದು ಹೇಳಿದ್ದರು. ಹಾಗೆಯೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಅಧಿಕಾರ ಹಂಚಿಕೆ ಬಗ್ಗೆ ಮಾತನಾಡುವುದು ಪಕ್ಷ ವಿರೋಧಿ ಕೆಲಸ. ಯಾರೂ ಈ ಬಗ್ಗೆ ಮಾತನಾಡಬಾರದು, ಮಾತನಾಡಿರುವ ಶಾಸಕರಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಹೇಳಿ, ತಮ್ಮ ಪರ ಮಾತನಾಡಿದ್ದ ಕುಣಿಗಲ್ ಶಾಸಕ ಡಾ. ರಂಗನಾಥ್ ರವರಿಗೂ ನೋಟಿಸ್ ಜಾರಿ ಮಾಡಿದ್ದರು. ಈ ಎಲ್ಲ ಬೆಳವಣಿಗೆ ನಡುವೆಯೇ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸಂಪುಟ ಪುನರ್ ರಚನೆಯ ಸುಳಿವು ನೀಡುವ ಮೂಲಕ ತಮ್ಮ ನಾಯಕತ್ವಕ್ಕೆ ಯಾವುದೇ ತೊಂದರೆಯಿಲ್ಲ. ಮುಂದೆ ಸಂಪುಟ ಪುನರ್ ರಚಿಸುತ್ತೇನೆ ಎಂಬ ಸಂದೇಶವನ್ನು ರವಾನಿಸಿದ್ದಾರೆ.

# ಹುರಸಗುಂಡಗಿಗೆ ಶಾಶ್ವತ ಸೌಲಭ್ಯ ಒದಗಿಸಿ : ಪ್ರದೀಪ ಅಣಬಿ

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಅ.7: ಹುರಸಗುಂಡಗಿ ಗ್ರಾಮದ ಸನ್ನತಿ ಬ್ರಿಡ್ಜ್ ಕಮ್ ಬ್ಯಾರೇಜ್‌ನ ಹಿನ್ನೀರಿನ ಪ್ರದೇಶ ಪ್ರತಿ ವರ್ಷ ಮಳೆ ಬಂದರೆ ಸಾಕು ಮುಳಗಡೆ ಇಲ್ಲಿನ ನಿವಾಸಿಗಳು ಸಂಕಷ್ಟತಂದೊಡ್ಡುತ್ತಿದೆ. ಈ ಹಿಂದೆ ಧಾರಕಾರ ಮಳೆಗೆ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದಾಗ ನೀಡಿದ ಪರಿಹಾರ ಇನ್ನೂ ಕೂಡ ಸಿಗದೇ ಕೆಲವು ಜನರು ಗ್ರಾಮ ತೊರೆಯುತ್ತಿಲ್ಲ ಕಾರಣ ಅಧಿಕಾರಿಗಳು ಉಳ್ಳುವವರಿಗೆ ಮಾತ್ರ ವಯಸ್ಕರ ಹಕ್ಕು ಪತ್ರ ಕೊಟ್ಟು ಉಳಿದವರಿಗೆ ಏನಾದರೂ ನೇಪ ಹೇಳಿ ಇನ್ನು ಕೂಡ ವಯಸ್ಕರ ಹಕ್ಕು ಪತ್ರ ಕೊಡುತ್ತಿಲ್ಲ ಇದರಿಂದ ಬೇಸತ್ತು ಗ್ರಾಮ ತೊರೆಯಲು ಹಿಂದೇಟು ಹಾಕುತ್ತಿದ್ದಾರೆ

ಎಂದು ಸರ್.ಎಂ.ವಿಶ್ವೇಶ್ವರಯ್ಯ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾದ ಪ್ರದೀಪ ಅಣಬಿ ಅವರು ಆರೋಪ ಮಾಡಿದ್ದಾರೆ.



ಗ್ರಾಮ ಸ್ಥಳಾಂತರಿಸಿದರೂ ಕೂಡ ಅಲ್ಲಿ ಸರಿಯಾಗಿ ನೀರು, ಚರಂಡಿ, ರಸ್ತೆ, ವಿದ್ಯುತ್ ಸರಿಯಾದ ಮೂಲಭೂತ ಸೌಕರ್ಯ ಇಲ್ಲದೆ ವಂಚಿತರಾಗಿದ್ದಾರೆ. ಪ್ರತಿಸಲ ಪ್ರವಾಹ ಬಂದಿರುವಾಗ ಮಾತ್ರ ಸಂಬಂಧಿಸಿದ ಅಧಿಕಾರಿಗಳು ಗ್ರಾಮಕ್ಕೆ ಬಂದು ಸುಳ್ಳು ಭರವಸೆ ಕೊಟ್ಟು ಹೋಗುತ್ತಿದ್ದಾರೆ ಆದರೆ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುತ್ತಿಲ್ಲ. ಇದರ ಬಗ್ಗೆ ಅಧಿಕಾರಿಗಳು ಯಾರು ಯೋಚನೆ ಮಾಡುತ್ತಿಲ್ಲ.

ಗ್ರಾಮದ ಎಲ್ಲಾ ಜನರು ಸ್ಥಳಾಂತರಗೊಂಡ ಜಾಗಕ್ಕೆ ಹೋಗಬೇಕೆಂದರೆ ಅಧಿಕಾರಿಗಳು ಕೂಡಲೆ ಮುಳುಗಿರುವ ಮನೆಗಳಿಗೆ ಪರಿಹಾರ ಕೊಟ್ಟು ಉಳಿದಿರುವ ಎಲ್ಲಾ ವಯಸ್ಕರಿಗೆ ಜಾಗದ ಹಕ್ಕುಪತ್ರ ಕೊಟ್ಟು ಅವರಿಗೆ ಸರಕಾರದಿಂದ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ಬಸವ ವಸತಿ ಯೋಜನೆಯಡಿಯಲ್ಲಿ ಮನೆಗಳನ್ನು ಮಂಜೂರು ಮಾಡಿಸಿ ಮನೆ ಕಟ್ಟಿಸಿ ಅನುಕೂಲ ಮಾಡಿಕೊಡಬೇಕು ಹಾಗೂ ಸ್ಥಳಾಂತರಗೊಂಡ ಗ್ರಾಮದಿಂದ ಹೊಲಗಳಿಗೆ ಹೋಗಲು ರಸ್ತೆ ಮಾಡಿಸಬೇಕೆಂದು ಗ್ರಾಮಸ್ಥರು ಅಕ್ರೋಶ ವ್ಯಕ್ತಪಡಿಸಿದ್ದಾರೆ.


# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.07:ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಚಿಕ್ಕಜೋಗಿಹಳ್ಳಿಯಲ್ಲಿರುವ ಜವಾಹರ ನವೋದಯ ವಿದ್ಯಾಲಯದ 9ನೇ ಮತ್ತು 11ನೇ ತರಗತಿಯ (2026–27ನೇ ಸಾಲಿಗಾಗಿ) ಪ್ರವೇಶ ಪರೀಕ್ಷೆಗೆ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಯ ಅವಧಿಯನ್ನು ಅಕ್ಟೋಬರ್ 21 ರ ವರೆಗೆ ವಿಸ್ತರಿಸಲಾಗಿದೆ.

ಆಸಕ್ತರು ಆನ್ ಲೈನ್ ವೆಬ್‌ಸೈಟ್: 9ನೇ ತರಗತಿಗಾಗಿ– https://cbseitms.nic.in/2025/nvsix9/registrationclassIX/registrationclassIX ಮತ್ತು 11ನೇ ತರಗತಿಗಾಗಿ– https://cbseitms.nic.in/2025/nvsxi_11/registrationclassXl/registrationclassXI ಗೆ ಭೇಟಿ ನೀಡಬಹುದು ಎಂದು ವಿದ್ಯಾಲಯದ ಪ್ರಾಚಾರ್ಯ ಸುದೇಶ ಗೋಪಾಲ ಮಲಾಜುರೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಜಾಗೃತಿ ಅಭಿಯಾನ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ. 07 : ಪಂಚ ಗ್ಯಾರಂಟಿ ಸಮಿತಿಯ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮದ ಸಮಯದಲ್ಲಿ ಗ್ಯಾರಂಟಿ ಸಮಿತಿಯ ಉಪಾಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಚಟನಳ್ಳಿ ಗ್ರಾಮ ಪಂಚಾಯತ ವತಿಯಿಂದ ಸನ್ಮಾನಿಸಿದರು.

ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸುವ ನಿಟ್ಟಿನಲ್ಲಿ ಮಾನ್ಯ *ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ* ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಟನಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

ಗೃಹ ಲಕ್ಷ್ಮಿ ಯೋಜನೆ: ಹಲವು ಮಹಿಳೆಯರಿಗೆ ಬ್ಯಾಂಕ್ ಖಾತೆ ಹಾಗೂ ಆಧಾರ್ ಜೋಡಣೆ (ಓಕಅಖ) ಸಮಸ್ಯೆಯಿಂದ ಹಣ ಜಮಾವಣೆಯಾಗಿರಲಿಲ್ಲ.

ಅಂತಹ ಪ್ರಕರಣಗಳನ್ನು ಸಮಿತಿ ಗುರುತಿಸಿ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸಮಸ್ಯೆ ಬಗೆಹರಿಸುತ್ತಿದೆ.

ಅನ್ನಭಾಗ್ಯ ಯೋಜನೆ: ಪಡಿತರ ಚೀಟಿ ತಿದ್ದುಪಡಿಗೆ ಸಂಬಂಧಿಸಿದಂತೆ ಗ್ರಾಮ ಒನ್ ಕೇಂದ್ರಗಳಲ್ಲಿ ಎದುರಾಗುತ್ತಿದ್ದ ತೊಂದರೆಗಳನ್ನು ನಿವಾರಿಸುವಲ್ಲಿ ತಂಡವು ಸಕ್ರಿಯವಾಗಿ ಕೆಲಸ ಮಾಡಿದೆ. ಅಲ್ಲದೆ, ಕಳ್ಳ ಸಾಗಣಿಕೆಯಂತಹ ಪ್ರಕರಣಗಳ ಬಗ್ಗೆಯೂ ನಿಗಾ ವಹಿಸಿ, ಅಧಿಕಾರಿಗಳ ಗಮನಕ್ಕೆ ತರುತ್ತಿದೆ. ಮತ್ತು

ಶಕ್ತಿ ಯೋಜನೆ, ಗೃಹ ಜ್ಯೋತಿ, ಯುವನಿಧಿ, ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು..

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಉದಯಕುಮಾರ ಚಟನಳ್ಳಿ, ಶಿವಕುಮಾರ ಕುತ್ತಾಬಬಾದ್, ಸಾಜೀದ್ ಪಾಷಾ, ಸೇವಾದಳ್ ಅಧ್ಯಕ್ಷ ಮೋಹಿನ್ ಪಠಾಣ್, ಮುಖಂಡರಾದ ದಿಲೀಪ್ ಪಾಸ್ವರ್, ಇಬ್ರಾಹಿಂ, ನಾಗೇಶ್ ಗೊಂಡ, ವೀರಶೆಟ್ಟಿ ಪೊಲೀಸ್ ಪಾಟೀಲ್, ಬಸವರಾಜ್ ಮಾಲಿ ಪಾಟೀಲ್, ಶರಣಪ್ಪಾ ಮುದ್ದ, ಶಿವಕುಮಾರ ಕಟಬ, ಗುರಯ್ಯ ಸ್ವಾಮಿ, ಪ್ರಭು ಲಿಂಗಾಯತ, ಹಾವಪ್ಪ, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು..

# ರಾಜ್ಯ ಮಟ್ಟದ ಕನ್ನಡ ಸೇವಾ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಅ. 07 : 70ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಶ್ರೀ ಕೇತಕಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕಂತಿಕ ಸಂಸ್ಥೆ ಹಾಗೂ ಹಣ್ಮು ಪಾಜಿ ಗೆಳೆಯರ ಬಳಗದ ವತಿಯಿಂದ ರಾಜ್ಯ ಮಟ್ಟದ ಕನ್ನಡ ಸೇವಾ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ, ಕಾನೂನು, ಪತ್ರಿಕೋದ್ಯಮ, ಕಲೆ, ಕೃಷಿ ಹಾಗೂ ಮಾಧ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಜನರಿಗೆ 70 ಸಾಧಕರಿಗೆ ಪ್ರಶಸ್ತಿ ಕೊಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಹಣ್ಮು ಪಾಜಿ ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಯ ಆಸಕ್ತರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಎರಡು ಪುಟಗಳ ತಮ್ಮ ಸಾಧನೆಯ ಮಾಹಿತಿಯೊಂದಿಗೆ ಅರ್ಜಿಯನ್ನು ಅಧ್ಯಕ್ಷರು, ಶ್ರೀ ಕೇತಕಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕಂತಿಕ ಸಂಸ್ಥೆ, ಅಲ್ಲಮಪ್ರಭುನಗರ, ಗುಂಪಾ, ಬೀದರ್ ವಿಳಾಸಕ್ಕೆ ಇಲ್ಲವೇ ಇ-ಮೇಲ್ ಃಚಿಟಿಟಣಾರಿಚಿಚಿರಿ55@ರಟಚಿಟ.ಛಿಂಟ ಗೆ ಸಲ್ಲಿಸಬಹುದು ಹಾಗೂ 8073122039 (ಪರಮೇಶ ವಿಳಸಪೂರೆ) 87479 30063 (ರವಿ ಚವ್ಹಾನ್ )ವಾಟ್ಸಪ್ ಕಳುಹಿಸಬಹುದು.

ಅರ್ಜಿ ಸಲ್ಲಿಕೆಗೆ ಅಕ್ಟೊಬರ್ 25 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9449031557,8073122039, ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಡಾ.ಗಂಗಣ್ಣ ಹೊಸ್ಮನಿಗೆ ಸಮಾಜದ ಅದ್ದೂರಿ ಸನ್ಮಾನ



ಮಲ್ಲಮ್ಮ ನುಡಿವಾರ್ತೆ

ಶಹಾಪುರ:ಅ.7:ಡಾ. ಗಂಗಣ್ಣ ಹೊಸಮನೆಯವರು ಕಡುಬಡತನದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡುವುದರ ಜೊತೆಗೆ ಖಾಸಗಿ ಶಾಲೆಯಲ್ಲಿ ಉಪನ್ಯಾಸಕರ ಸೇವೆ ಸಲ್ಲಿಸುತ್ತಾ ಜೊತೆಗೆ ಸಮಾಜದ ಯುವಕರನ್ನು ಪ್ರತಿಭಾವಂತ ಯುವಕರನ್ನು ಮುನ್ನಡೆಸುವ ಮುನ್ನಡೆಸುವ ದಿಟ್ಟ ಹೆಜ್ಜೆಯನ್ನು ಸಮಾಜದ ಯುವಕರನ್ನು ಒಗ್ಗೂಡಿಸುವ ಶಕ್ತಿ ಇವರದಾಗಿದೆ.

ಇವರು ರಾಜಸ್ಥಾನದ ಡಾಕ್ಟರೇಟ್ ಪದವಿ ಪಡೆದು ಸಮಾಜಕ್ಕೆ ದೊಡ್ಡ ಕೊಡುಗೆ ಇವರದಾಗಿದೆ. ರಾಜಸ್ಥಾನ ಸನ್ ರೈಸ್ ವಿಶ್ವವಿದ್ಯಾಲಯದದಿಂದ ಗೌರವ ಡಾಕ್ಟ–ರೇಟ್ ಪದವಿ ಪಡೆದೆದ್ದು. ರಾಷ್ಟ್ರೀಯ ಪಕ್ಷಗಳ ಮೈತ್ರಿ ಎಂಬ ವಿಷಯದ ಕುರಿತು ಅಭ್ಯಾಸ ಮುಗಿಸಿ ತಮ್ಮ ಡಾಕ್ಟರೇಟ್ ಪದವಿಯನ್ನು ಪಡೆದ ಪಾತ್ರರಾಗಿದ್ದಾರೆ.

ಸಮಾಜದ ಹಿರಿಯ ಜೀವಿ, ಸರಳ ಸಜ್ಜನಿಕೆಯ ವ್ಯಕ್ತಿತ್ವ, ಸಹಹೃದಯಿಗಳು, ಸಾಮಾಜಿಕ ಕಳಕಳಿಯ ನಾಯಕರು, ಹಾಗೇಸಮ ಸಮಾಜ ನಿರ್ಮಾಣದ ಕನಸುಗಾರ ಯುವಕರನ್ನು ಮುನ್ನಡೆಸುವ ಧೀಮಂತ ನಾಯಕರಾದಡಾ. ಗಂಗಣ್ಣ ಎಸ್ ಹೊಸ್ಮನಿ ನಾಗನಟಗಿಯವರಿಗೆ ಶಹಾಪುರ ತಾಲೂಕಿನ ಸಮುದಾಯದ ಹಿರಿಯ ಮುಖಂಡರು, ಯುವಮುಖಂಡರು ಜೊತೆ–ಗೂಡಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸಂಗಣ್ಣ ದಿಗ್ಗಿ. ಮಾನಪ್ಪ ವಠಾರ. ರುದ್ರಪ್ಪ ಹುಲಿಮನಿ.ಶಶಿಕಾಂತ್ ಕಟ್ಟಿಮನಿ. ವೆಂಕಟೇಶ್ ಆಲೂರು. ಮಲ್ಲಿಕಾರ್ಜುನ್ ಅಮರದೊಡ್ಡಿ. ವಿಜಯಕುಮಾರ್ ಗುತ್ತಿಪೇಟ್.ಪರಶುರಾಮ್ ಮಹಲ್ ರೋಜಾ. ಭೀಮರಾಯ ಪೂಜಾರಿ.ಶಿವಕುಮಾರ್ ದೊಡ್ಮನಿ. ಅಯ್ಯಾಳಪ್ಪ ದೋರನಹಳ್ಳಿ. ಬಸವರಾಜ್ ಗುತ್ತಿಪೇಟ್. ಲಕ್ಷ್ಮಣ್ ಶೆಟ್ಟಿಗೇರಿ. ಜಗು ಅನ್ವರ್.ರಾಮಚಂದ್ರ ಬೇ–ಟೆಗಾರ. ಶರಣಪ್ಪ ಸಾಹುರ್ .ಹೊನ್ನಪ್ಪ ನಾಟಕ. ಮೋಹನ್ ಗೌಡ ಕನ್ನೆ ಕೋಳೂರು. ಹಣಮಂತ ಗೊಬ್ಬುರ್. ಹನುಮಂತ ಹತ್ತಿಗೂಡೂರು. ಮಲ್ಲಪ್ಪ ಹತ್ತಿಗೂಡೂರು. ಶರಣು ಕಂಚನ್ ಕವಿ. ತಾಲೂಕಿನ ಇಡೀ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಪಟ್ಟಣ ಪಂ. ಕಚೇರಿಗೆ ಕಟ್ಟಡದ ಭೂಮಿ ಪೂಜೆ

ಮಲ್ಲಮ್ಮ ನುಡಿವಾರ್ತೆ



ಕುಕನೂರ:ಅ.7: ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ನಗರಾಭಿವೃದ್ಧಿ ಇಲಾಖೆ ಪೌರಾಡಳಿತ ನಿರ್ದೇಶನಾಲಯ ಜಿಲ್ಲಾಡಳಿತ ಕೊಪ್ಪಳ ಹಾಗೂ ಪಟ್ಟಣ ಪಂಚಾಯತ ಕಾರ್ಯಾಲಯದ ನೂತನ ಕಚೇರಿ ಕಟ್ಟಡ ಕಾಮಗಾರಿಯ ಶಂಕುಸ್ಥಾಪನೆ ಕಾರ್ಯಕ್ರಮ ನೆರವೇರಿಸಲಾಯಿತು. ಪಟ್ಟಣ ಪಂಚಾಯತಿಯ ನೂತನ ಕಟ್ಟಡ ಭೂಮಿ ಪೂಜೆಯನ್ನು ಪಟ್ಟಣ ಪಂಚಾಯ್ತಿಯ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ನೆರವೇರಿಸಿದರು.

ಪಟ್ಟಣ ಪಂಚಾಯತಿಯ ಸದಸ್ಯ ಗಗನ್ ನೋಟಗಾರ ಮಾತನಾಡುತ್ತಾ ಕುಕುನೂರು ಪಟ್ಟಣ ಪಂಚಾಯತಿಯಾಗಿದೆ ಮುಂದೆ ಪುರಸಭೆ ಮತ್ತು ನಗರಸಭೆ ಆದರೂ ಸಹಿತ ಅಲ್ಲಿಯವರೆಗೂ ಉತ್ತಮವಾದ ಸಸಜಿತವಾದ ಪಟ್ಟಣ ಪಂಚಾಯತಿಯ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.ಕಾಮಗಾರಿ ಅವಧಿ ಎರಡು ವರ್ಷ ಇದ್ದು ಆದಷ್ಟು ಬೇಗನೆ ಕಾಮಗಾರಿ ಮುಗಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಗುತ್ತಿಗೆದಾರರಿಗೆ ತಿಳಿಸಿದರು.

ಇನ್ನೋರ್ವ ಪಟ್ಟಣ ಪಂಚಾಯತ ಸದಸ್ಯರಾದ ಸಿದ್ದಲಿಂಗಯ್ಯ ಉಳ್ಳಾಗಡ್ಡಿ ಮಾತನಾಡುತ್ತಾ ಹಿಂದೆ ಇದ್ದಂತಹ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರದಲ್ಲಿ ಪಟ್ಟಣ ಪಂಚಾಯತ್ ಅಭಿವೃದ್ಧಿಗೆ ಅನುದಾನದ ನೀಡಲಾಗಿತ್ತು.

ಸ್ಥಳೀಯ ಬಿಜೆಪಿ ಮಾಜಿ ಸಚಿವರಾದ ಹಾಲಪ್ಪ ಆಚಾರ್ ಅವರು ಮಂತ್ರಿಗಳು ಇದ್ದಾಗ ಮೂರು ಕೋಟಿ ರೂಪಾಯಿ ಕುಕನೂರು ಪಟ್ಟಣ ಪಂಚಾಯಿತಿಗೆ ಹಾಗೂ ಯಲಬುರ್ಗಾ ಪಟ್ಟಣ ಪಂಚಾಯತಿಗೆ 2 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು.

ದುರಾದೃಷ್ಟ ಕರ ಸಂಗತಿ ಎಂದರೆ ಯಲಬುರ್ಗಾದಲ್ಲಿ ಅಧಿಕಾರಿಗಳು ವರ್ಕ್ ಆರ್ಡರ್ ತೆಗೆದುಕೊಂಡಿದ್ದರಿಂದ ಕೆಲಸ ಪ್ರಾರಂಭವಾಯಿತು. ನಮ್ಮಲ್ಲಿರುವ ಅಧಿಕಾರಿಗಳ ಬೇಜವಾಬ್ದಾರಿಯಿಂದ ಟೆಂಡರ್ ಪ್ರಕ್ರಿಯೆ ಪೂರ್ತಿಗೊಳ್ಳದೆ ಇರುವುದರಿಂದ ಚುನಾವಣಾ ದಿನಾಂಕ ಘೋಷಣೆ ಆಗಿದ್ದರಿಂದ ಸರ್ಕಾರ ಬದಲಾಯಿತು. ಯಾವ ಕಾಮಗಾರಿ ಪ್ರಾರಂಭ ಆಗಿಲ್ಲ ಅಂತ ಅನುದಾನವನ್ನು ಸರ್ಕಾರ ಮರಳಿ ತೆಗೆದುಕೊಂಡಿತು.

ತದನಂತರ ಪಟ್ಟಣ ಪಂಚಾಯಿತಿಯ 19 ವಾರ್ಡಿನ ಸದಸ್ಯರು ಸೇರಿಕೊಂಡು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಾಗ ನಮ್ಮ ಮನವಿಗೆ ಸ್ಪಂದಿಸಿ 2 ಕೋಟಿ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿ ನಬಿಸಾಬ್ ಕಂದಗಲ್, ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಲಲಿತಮ್ಮ ಯಡಿಯಾಪುರ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಪ್ರಶಾಂತ್ ಆರ್ ಬೆರಳಿನ, ಪಟ್ಟಣ ಪಂಚಾಯತ್ ಸದಸ್ಯ ಬಾಲ್ರಾಜ್ ಗಾಳಿ, ಜಗನ್ನಾಥ್ಭವಿ ಬೋವಿ, ಸಂಗಮೇಶ್ ಗುತ್ತಿ,ಮಂಜುನಾಥ್ ನಾಡಗೌಡ್ರು,ಮಾಂತೇಶ್ ಹೂಗಾರ್, ಮಲ್ಲಿಕಾರ್ಜುನ್ ಚೌದರಿ, ಮಂಜುನಾಥ್ ಮಾಲಗಿತ್ತಿ, ಗುತ್ತಿಗೆದಾರರಾದ ಅವಿನಾಶ್ ಅರಿಕೇರಿ, ಚನ್ನಬಸಯ್ಯ ದೂಪದ, ಕರಬಸಯ್ಯ ಬಿನ್ನಾಳ್, ಹಾಗೂ ಪಟ್ಟಣ ಪಂಚಾಯ್ತಿಯ ಸಿಬ್ಬಂದಿ ವರ್ಗ ಸಾರ್ವಜನಿಕರು ಪಾಲ್ಗೊಂಡಿದ್ದರು.

# ಅಧಿಕಾರ ವಹಿಸಿಕೊಂಡ ಶರಣಪ್ಪ ಸಲಾದಪುರ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಅ.7:ಬೆಂಗಳೂರಿನ ವಸಂತನಗರದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾಗಿ ಶರಣಪ್ಪ ಸಲಾದಪುರ ಸೋಮವಾರ ಅಧಿಕಾರ ಸ್ವೀಕರಿಸಿದರು. ನೂತನ ಅಧ್ಯಕ್ಷರಿಗೆ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್, ಕಲಬುರಗಿ ಸಂಸದ ರಾಧಾಕೃಷ್ಣ ದೊಡ್ಡಮನಿ ಶುಭ ಹಾರೈಸಿದರು.

# ವಾಲ್ಮೀಕಿ ಮಹರ್ಷಿ ಆದರ್ಶ ಪ್ರಾಯ ಋಷಿ ಮುನಿ: ಚಂದ್ರಶೇಖರ ಕಟ್ಟಿಮನಿ

ಶಹಾಪುರ:ಅ.7: ಶ್ರೀ ಮಹರ್ಷಿ ವಾಲ್ಮೀಕಿಯವರು ಇಡೀ ಪ್ರಪಂಚಕ್ಕೆ ಮರೆಯಲಾರದ ಕೊಡುಗೆ ನೀಡಿದ್ದಾರೆ ಅವರ ವ್ಯಕ್ತಿತ್ವ ಸರ್ವರಿಗೂ ಆದರ್ಶ ಪ್ರಾಯಾವಾಗಿರುತ್ತವೆ ಎಂದು ಆದರ್ಶ ಶಾಲೆಯ ಆಡಳಿತಾಧಿಕಾರಿ ಚಂದ್ರಶೇಖರ ಕಟ್ಟಿಮನಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಆದಿಲ್ ಪುರದ ಆದರ್ಶ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಂಗಳವಾರ ದಿನದಂದು

ಶ್ರೀ ಮಹರ್ಷಿ ವಾಲ್ಮೀಕಿ ಋಷಿ ಮುನಿಗಳ ಭಾವಚಿತ್ರಕ್ಕೆ ಫಲಪುಷ್ಪಸಮರ್ಪಿಸಿ ಮಾಲಾರ್ಪಣೆ ಮಾಡುವುದರೊಂದಿಗೆ ಜಯಂತಿ ನೆರವೇರಸಿ ಮಾತನಾಡಿದ ಅವರು ಅಶ್ವಿನಿ ಮಾಸದ ಶೀಗಿ ಹುಣ್ಣಿಮೆಯ ದಿನದಂದು ಶ್ರೀರಾಮನ ಜೀವನ ಚರಿತ್ರೆಯನ್ನು ವಿವರಿಸುವ



ರಾಮಾಯಣವನ್ನು ಬರೆದಂತಹ ಮಹಾನ್ ಋಷಿ ವಾಲ್ಮೀಕಿಯವರ ಜನ್ಮ ದಿನವಾಗಿ ದೇಶದ್ಯಾಂತ ವಾಲ್ಮೀಕಿ ಜಯಂತಿಯನ್ನು ಆಚರಣೆ ಮಾಡಲಾಗುತ್ತಾ ಬಂದಿರುತ್ತೇವೆ.

ಈ ದಿನದಂದು ಮಹಾನ ಋಷಿ ವಾಲ್ಮೀಕಿಯವರಿಗೆ ಪೂಜೆಯನ್ನು ಸಲ್ಲಿಸುವ ಮೂಲಕ ಗೌರವವನ್ನು ಸಮರ್ಪಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಶಾಲೆಯ ಸಿಬ್ಬಂದಿಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಸದ್ಭಾವನಾ ಪ್ರಶಸ್ತಿ

ಮಲ್ಲಮ್ಮ ನುಡಿವಾರ್ತೆ



ಕುಕನೂರ:ಅ.7: ತಾಲೂಕಿನ ಕಕ್ಕಿಹಳ್ಳಿ ತಾಂಡ ಗ್ರಾಮದ ಯುವ ಮುಖಂಡ ಹಾಗೂ ಕರ್ನಾಟಕ ಗೋರ ಸೇನಾ ರಾಜ್ಯ ಪ್ರಧಾನಕಾರ್ಯದರ್ಶಿ, ಸುರೇಶ ಬಳೂಟಗಿ ಅವರಿಗೆ ಗೋವಾ ರಾಜ್ಯದ ಸುವರ್ಣ ಚಾರಿಟೇಬಲ್ ಟ್ರಸ್ಟ್ ನವರು ಮಹಾತ್ಮ ಗಾಂಧಿ ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿಯನ್ನು ಘೋಷಣೆ ಮಾಡಿರುತ್ತಾರೆ. ಕುಕನೂರು ತಾಲೂಕಿನ ಅತ್ಯಂತ ಚಿಕ್ಕದಾದ ಕಕ್ಕಿಹಳ್ಳಿ ತಾಂಡದ ಯುವ ಮುಖಂಡನ ಸಮಾಜಮುಖಿ ಕಾರ್ಯವೈಕರಿಯನ್ನು ಗಮನಿಸಿದ ಸಂಸ್ಥೆಯು ರಾಷ್ಟಮಟ್ಟದ ಪ್ರಶಸ್ತಿಯನ್ನು ಘೋಷಣೆ ಮಾಡಿದ್ದು ಇದೆ ನವಂಬರ್ 11ರಂದು ಶನಿವಾರ ಸಾಯಂಕಾಲ ಗೋವಾ ರಾಜ್ಯದ ಕಲ್ಲಂಗುಟ್ಟ ಸನ್ ಸಿಟಿ ರೆಸಾರ್ಟ್ ನಲ್ಲಿ ನಡೆಯುವ ಸಮಾರಂಭದಲ್ಲಿ ಮಹಾತ್ಮ ಗಾಂಧಿ ಸದ್ಭಾವನ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರಧಾನ ಮಾಡುವುದಾಗಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಈವೇಳೆ ಸುರೇಶ್ ಬಳಟಗಿ ವರದಿಗಾರರೊಂದಿಗೆ ಮಾತನಾಡುತ್ತಾ ರಾಷ್ಟ್ರೀಯ ಪ್ರಶಸ್ತಿಗೆ ನನ್ನ ಹೆಸರನ್ನು ಆಯ್ಕೆ ಮಾಡಿರುವುದಕ್ಕೆ ಅತ್ಯಂತ ಸಂತೋಷವಾಗುತ್ತಿದ್ದು ಇದಕ್ಕೆಲ್ಲ ನನ್ನ ಆತ್ಮೀಯರು ಹಾಗೂ ಮಾರ್ಗದರ್ಶಕರ ನಿರಂತರ ಸಹಾಯ ಸಹಕಾರ ಪ್ರಮುಖವಾಗಿದ್ದು ಅವರೆಲ್ಲರಿಗೂ ಸಹ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

# ಅಭಿವೃದ್ಧಿ ಮರಿಚಿಕೆಯಾದ ಭಾತಂಬ್ರಾ ಗ್ರಾ. ಪಂ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.7: ತಾಲೂಕಿಗೆ 6 ಕಿ.ಮೀ ದೂರವಿರುವ ಭಾತಂಬ್ರಾ ಗ್ರಾಮ ಪಂಚಾಯತ ಅಭಿವೃದ್ಧಿಯಿಂದ ದೂರ ಸರೆದು ಸಮಸ್ಯೆಯ ಗೂಡಾಗಿ ಪರಿವರ್ತನೆಯಾಗಿದೆ. ಈ ಗ್ರಾಮದಲ್ಲಿ 8000 ಜನಸಂಖ್ಯೆ ಹೊಂದಿದ್ದು 5 ವಾರ್ಡಗಳನ್ನು ಒಳಗೊಂಡಿರುತ್ತವೆ. ಭಾತಂಬ್ರಾ ತಾಂಡಾ ಹಾಗೂ ಆನಂದವಾಡಿ ಗ್ರಾಮಗಳು ಈ ಗ್ರಾ.ಪಂಗೆ ಸೇರಲ್ಪಟ್ಟಿರುತ್ತವೆ. 21 ಜನ ಸದಸ್ಯರು ಭಾತಂಬ್ರಾ ಗ್ರಾಮದವರಾಗಿದ್ದು, 2 ಜನ ಸದಸ್ಯರು ಆನಂದವಾಡಿ ಗ್ರಾಮದವರಾಗಿರುತ್ತಾರೆ.

ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮದ ಸಮಸ್ಯೆಗಳಿಗೆ ಸ್ಪಂಧಿಸುತಿಲ್ಲಾ ಎನುವುದು ಗ್ರಾಮಸ್ಥರ ನೇರ ಆರೋಪ. ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ತಿಂಗಳೇ ಕಳೆದರು ಕೂಡಾ ದುರಸ್ತಿ ಮಾಡದೆ ಗ್ರಾಮದ ಜನರು ಹಿಡಿಶಾಪ ಹಾಕುತಿದ್ದಾರೆ. ಕೊಳಚೆ ನೀರು ಸಂಗ್ರಹಣೆಯಾಗಿ ಗಬ್ಬುನಾರುತ್ತಿದೆ. ಸೊಳ್ಳೆಗಳು ಹೆಚ್ಚಾಗಿ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಹೊಣೆಯಾರು? ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ. ಕತ್ತಲಾಯಿತೆಂದರೆ ಮಲಮೂತ್ರ ವಿಸರ್ಜನೆಯ ತಾಣವಾಗಿ ಶುದ್ಧ ನೀರಿನ ಘಟಕ ಮಾರ್ಪಟಿದೆ.

ವಾರ್ಡಗಳಲ್ಲಿನ ರಸ್ತೆಯ ಬದಿಗೆ ನಾಲಿಗಳಿರದೆ, ಹೊಲಸು, ಕೊಳಚೆ ನೀರಿನಿಂದ ತುಂಬಿದು ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ. ಮಕ್ಕಳು, ವಯಸ್ಕರರು, ಹಿರಿಯ ನಾಗರಿಕರು ಆಸ್ಥಳದಲ್ಲಿ ಸಂಚರಿಸುವಾಗ ಕೊಳಚೆ ನೀರಿನಲ್ಲಿ ಜಾರಿ ಬಿದ್ದಿರುವ ಉದಾಹರಣೆಗಳಿವೆ.


ಚರಂಡಿಯ ನೀರು ಸುಗಮವಾಗಿ ಹೊಗಲು ಯಾವುದೇ ರೀತಿಯಿಂದ ಪೈಪಲೈನ ವ್ಯವಸ್ಥೆ ಅಳವಡಿಸದೆ ಇರುವದರಿಂದ ಹೊಲಸು ನೀರು ಶೇಖರಣೆಯಾಗಿ ದುರ್ನಾಥ ಬೀರುತ್ತಿದೆ.

ಭಾತಂಬ್ರಾನಿಂದ ಕಾಕನಾಳ ಹೊಗುವ ಮುಖ್ಯ ರಸ್ತೆಯ ಬದಿಲ್ಲಿರುವ ಹೊಲಸು ನೀರು ಹೊಗಲು ನಿರ್ಮಾಣಗೊಂಡಿರುವ ಚಿಕ್ಕಸೇತುವೆ ಒಂದು ಬದಿಯಲ್ಲಿದ್ದರೆ, ನೀರು ಶೇಖರಣೆಯಾಗಿ ಗಬ್ಬು ನಾರುತ್ತಿರುವುದು ಮತ್ತೊಂದು ಸ್ಥಳದಲ್ಲಿ.

ಯಾವುದಾದರು ಹೊಸಯೋಜನೆಗಳು ಜಾರಿಗೆ ಬಂದಾಗ ಗ್ರಾಮಸಭಾ ನಡೆದು ಗ್ರಾಮಸ್ಥರಿಗೆ ಮಾಹಿತಿ ತಿಳಿಸುವುದು ರೂಢಿಗತವಾದದು, ಆದರೆ ಇಲ್ಲಿ ಗ್ರಾಮಸಭಾ ನಡೆದಿದ್ದು ಕೇವಲ ದಾಖಲೆಗಳಲ್ಲಿ ಮಾತ್ರ.

15ನೇ ಹಣಕಾಸು ಆಯೋಗದ ಹಣ ಯಾವುದಕ್ಕೆ ವಿನಿಯೋಗಿಸುತ್ತಿದ್ದಾರೆ ? ಗ್ರಾಮದ ಅಭಿವೃದ್ಧಿ ಕಾಣದಿದ್ದಾಗ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಾಡುತಿರುವದಾದರು ಏನು ? ಮುಂದಿನ ದಿನಮಾನಗಳಲ್ಲಿ ಸಾಮೂಹಿಕವಾಗಿ ಮತದಾನವನ್ನು ಬಹಿಷ್ಕರಿಸುವುದಾಗಿ ಗ್ರಾಮಸ್ಥರು ಎಚ್ಚರಿಕೆಯನ್ನು ನೀಡಿದ್ದಾರೆ.

ಈ ಸಂಧರ್ಭದಲ್ಲಿ ಕಲಾವತಿ ಭೋರಾಳೆ, ಪ್ರಿಯಾಂಕಾ ಚಲ್ವಾ, ಸಿದ್ದಮ್ಮಾ ಕಾರಾಮುಂಗೆ, ಪ್ರೇಮಾ ಬೆಟ್ಟದ, ಅರ್ಚನಾ ಧೂಳೆ, ಸಿದ್ರಾಮ ಚಲ್ವಾ, ಆಕಾಶ ಕಾಮಶೆಟ್ಟಿ, ಪವನ ಕಾರಾಮುಂಗೆ, ಶಿವಾಜಿ ಸಗರ, ಮಹೇಶ ಗಾದಗೆ, ಅಶೋಕ ಗಾಮಾ, ಸಂಗಪ್ಪಾ ಗಾಮಾ , ಮಹಾದೇವ ಧೂಳೆ, ಇನ್ನಿತರು ಉಪಸ್ಥಿತರಿದ್ದರು.



ಗ್ರಾಮಗಳು ಅಭಿವೃದ್ದಿಗೊಂಡಾಗ ದೇಶ ಅಭಿವೃದ್ದಿಯಾಗುತ್ತದೆ ಎಂಬುವುದು ಗಾಂಧಿಜಿಯವರ ವಿಚಾರಧಾರೆ. ನಮ್ಮ ಊರಿನ ಸಮಸ್ಯೆ ಅತಿಯಾಗಿದ್ದು ಪಂಚಾಯತ ಅಭಿವೃದ್ದಿ ಅಧಿಕಾರಿ ತಕ್ಷಣವೆ ಸೂಕ್ತ ಕ್ರಮಗಳನ್ನು ಕೈಗೊಳಬೇಕು, ಸ್ವಚ್ಛತೆಯ ಕಾರ್ಯಕ್ಕೆ ಮುಂದಾಗಬೇಕು,

– ಪ್ರಿಯಾಂಕಾ ಚಲ್ವಾ ಭಾತಂಬ್ರಾ.

# ಮಹರ್ಷಿ ವಾಲ್ಮೀಕಿ ಅವರು ಬರೆದ ರಾಮಾಯಣ ಎಲ್ಲರಿಗೂ ಮಾದರಿ: ಸಚಿವ ರಹೀಂ ಖಾನ್



ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.07 : ಶ್ರೀ ಮಹರ್ಷಿ ವಾಲ್ಮೀಕಿ ಅವರು ಬರೆದ ರಾಮಾಯಣ ಎಲ್ಲರಿಗೂ ಮಾದರಿಯಾಗಿದೆ. ಇವರ ಇತಿಹಾಸದ ಬಗ್ಗೆ ಎಲ್ಲರೂ ಅರಿತುಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ ಹೇಳಿದರು.

ಅವರು ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಾತ್ಮರ ಜಯಂತಿ ಮಾಡುವ ಉದ್ದೇಶವೇನೆಂದರೆ ಅವರ ತತ್ವ ಸಿದ್ಧಾಂತಗಳನ್ನು ಪಾಲಿಸಬೇಕು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯದ ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಪಡೆದು ಸಮಾಜಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಬೇಕೆಂದರು. ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಬೇಕಾದ ಅನುದಾನ ಬಗ್ಗೆ ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದಾಗಿ ಹೇಳಿದರು.

ಬೀದರ ಸಂಸದರಾದ ಸಾಗರ ಈಶ್ವರ ಖಂಡ್ರೆ ಅವರು ಮಾತನಾಡಿ, ಮಹರ್ಷಿ ವಾಲ್ಮೀಕಿಯನ್ನು ಆದಿ ಕವಿ ಎಂದು ಕರೆಯುತ್ತಾರೆ. ಇವರು ಬರೆದಿರುವ ರಾಮಾಯಣ ಗ್ರಂಥ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಈ ಗ್ರಂಥದಲ್ಲಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅನೇಕ ಅಂಶಗಳು ಒಳಗೊಂಡಿವೆ ಎಂದರು.

ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರು ಬರೆದ ರಾಮಾಯಣದಿಂದ ಹೊಸ ಯುಗಕ್ಕೆ ನಾಂದಿ ಹಾಡಿತು. ಜಗತ್ತಿನ ಶ್ರೇಷ್ಠ ಗ್ರಂಥಗಳಲ್ಲಿ ರಾಮಾಯಣ ಕೂಡ ಒಂದಾಗಿದೆ. ಮಹಾತ್ಮರನ್ನು ನಾವೆಲ್ಲರೂ ಯಾವುದೇ ಒಂದು ಜಾತಿ ಅಥವಾ ಸಮುದಾಯಕ್ಕೆ ಸಿಮೀತಗೊಳಿಸಬಾರದು ಏಕೆಂದರೆ ಅವರ ಇಡೀ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ ಎಂದರು.

ಸಾಮಾಜಿಕ ಚಿಂತಕರಾದ ಶಿವಾನಂದ ನಿಡವಂಚಾ ಅವರು ಶ್ರೀ ಮಹರ್ಷಿ ವಾಲ್ಮೀಕಿ ಅವರ ಕುರಿತು ಅತಿಥಿ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಎಲ್ಲಾ ಗಣ್ಯರು ಸನ್ಮಾನಿಸಿದರು.

ಕಾರ್ಯಕ್ರಮಕ್ಕೂ ಮುಂಚಿತವಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ಬೀದರ ದಕ್ಷಿಣ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪೂಜೆ ಸಲ್ಲಿಸಿ ನಂತರ ಮೆರವಣಿಗೆಗೆ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷರಾದ ಮಹ್ಮದ ಗೌಸ್, ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷರಾದ ಅಮೃತರಾವ ಚೀಮಕೋಡೆ, ಅಪರ ಜಿಲ್ಲಾದಿಕಾರಿಗಳಾ ಶಿವಾನಂದ ಕರಾಳೆ,

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಾದ ಗಿರೀಶ್ ರಂಜೋಳಕರ ಸಮಾಜದ ಮುಖಂಡರಾದ ಜಗನ್ನಾಥ ಜಮಾದಾರ, ಸುನೀಲ್ ಕಾಶಂಪೂರ್, ರಾಜಕುಮಾರ ಕರಣಿ, ನಂದುಕುಮಾರ

ಜಮಗಿಕರ್, ಸುನಿಲ ಭಾವಿಕಟ್ಟಿ, ಮಾರುತಿ ಮಾಸ್ಟರ ಸೇರಿದಂತೆ ಸಮಾಜದ ಮುಖಂಡರು ಹಾಗೂ ಬಾಂಧವರು ಉಪಸ್ಥಿತರಿದ್ದರು.



ಹುಮನಾಬಾದ್ : ಬೆಂಗಳೂರು ನಗರದ ಶಾಸಕರ ಭವನದ ಮಹರ್ಷಿ ವಾಲ್ಮೀಕಿ ತಪೋವನದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಎಂಎಲ್ಸಿ ಭೀಮರಾವ ಪಾಟೀಲ್ ಭಾಗವಹಿಸಿ ಪುಷ್ಪನಮನ ಸಲ್ಲಿಸಿದರು. ಮಲ್ಲಮ್ಮ ನುಡಿ ಚಿತ್ರ

# ನಟಿಗೆ ಲೈಂಗಿಕ ಕಿರುಕುಳ ಆರೋಪಿ ಬಂಧನ

ಬೆಂಗಳೂರು,ಅ.7–ಸಿನಿಮಾದಲ್ಲಿ ನಾಯಕಿಯಾಗಿ ಅವಕಾಶ ಕೊಡುವುದಾಗಿ ನಂಬಿಸಿ, ನಟಿಗೆ ಲೈಂಗಿಕ, ಮಾನಸಿಕ ಕಿರುಕುಳ ನೀಡಿದ ಆರೋಪಿಯನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ. ಅನ್ನಪೂರ್ಣೇಶ್ವರಿನಗರದ ಹೇಮಂತ್ ಕುಮಾರ್ (34) ಬಂಧಿತ ಆರೋಪಿಯಾಗಿದ್ದಾನೆ. ಕಿರುತೆರೆ ನಟಿ ಹಾಗೂ ಬಿಗ್‌ಬಾಸ್‌ನ ಓಟಿಟಿ ಸ್ಪರ್ಧಿ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ.

ಕಿರುತೆರೆಯಲ್ಲಿ ನಟಿಸುತ್ತಿರುವ ನಟಿಗೆ 2022ರಲ್ಲಿ ನಿರ್ದೇಶಕ, ನಿರ್ಮಾಪಕ ಎಂದು ಹೇಳಿಕೊಂಡು ಪರಿಚಯವಾದ ಆರೋಪಿ ತಾನು ರಿಚ್ಚಿ ಎಂಬ ಸಿನಿಮಾ ಮಾಡುತ್ತಿದ್ದು, ಅದರಲ್ಲಿ ನೀವು ನಾಯಕಿಯಾಗಿ ನಟಿಸಬೇಕು ಎಂದು ನಟಿಗೆ ಹೇಳಿದ್ದಾನೆ. ಅದಕ್ಕೆ ಒಪ್ಪಿಕೊಂಡ ನಟಿಗೆ 2 ಲಕ್ಷ ರೂ. ಸಂಭಾವನೆ ನೀಡುತ್ತೇನೆಂದು ಒಪ್ಪಂದ ಮಾಡಿಕೊಂಡಿದ್ದರು ಎಂದು ಹೇಳಿದ್ದಾರೆ.

ಮುಂಗಡವಾಗಿ ನನಗೆ 60 ಸಾವಿರ ರೂ. ಕೊಡಲಾಗಿತ್ತು. ಅದರಂತೆ ಚಿತ್ರೀಕರಣ ಆರಂಭವಾಗಿತ್ತು. ಆದರೆ, ಕಾರಣಾಂತರಗಳಿಂದ ಆರೋಪಿ ಸಿನಿಮಾ ಚಿತ್ರೀಕರಣವನ್ನು ಮುಂದೂಡಿದ್ದ. ಬಳಿಕವೂ ಸಿನಿಮಾದಲ್ಲಿ ನಟಿಸುತ್ತಿದ್ದೆ. ಆದರೆ, ಅಶ್ಲೀಲ ಬಟ್ಟೆ ತೊಡಬೇಕು, ಅಶ್ಲೀಲವಾಗಿ ನಟಿಸಬೇಕು ಎಂದು ಒತ್ತಾಯಿಸಿದ್ದರು. ಅಲ್ಲದೆ, ಅಸಭ್ಯ ರೀತಿಯಲ್ಲಿ ಸ್ಪರ್ಶಿಸುತ್ತಿದ್ದರು. ಒಪ್ಪಂದದ ಅವಧಿ ಮುಗಿದಿದ್ದರಿಂದ ಸಿನಿಮಾ ಚೇಂಬರ್ ಸಮ್ಮುಖದಲ್ಲಿ ಅವಧಿ ವಿಸ್ತರಣೆ ಮಾಡಿ ಸಿನಿಮಾ ಪೂರ್ತಿಗೊಳಿಸಿದ್ದೇನೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬಳಿಕ ಮುಂಬೈನಲ್ಲಿ ಸಿನಿಮಾ ಪ್ರಚಾರಕ್ಕೆ ಹೋಗಿದ್ದೆ. ಆಗ ಅಲ್ಲಿಯೂ ಅಸಭ್ಯವಾಗಿ ವರ್ತಿಸಿದ್ದ. ಬಳಿಕ ಬೇರೆ ಕಡೆ ಸಿನಿಮಾ ಪ್ರಚಾರಕ್ಕೆ ಒಬ್ಬಳೇ ಬರುವಂತೆ ಹೇಳುತ್ತಿದ್ದ. ಅದಕ್ಕೆ ನಿರಾಕರಿಸಿದಾಗ ನನ್ನ ಹಿಂದೆ ರೌಡಿಗಳನ್ನು ಬಿಟ್ಟು ಬೆದರಿಕೆ ಹಾಕಿದ್ದಾನೆ. ಇನ್ನು ರಿಚ್ಚಿ ಸಿನಿಮಾದ ಕೆಲವು ಸೆನ್ಸಾರ್ ಆಗದ ದೃಶ್ಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾನೆ. ಈ ಬಗ್ಗೆ ನಾನು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದೆ ಎಂದು ನಟಿ ದೂರಿದ್ದಾರೆ.

**ನಟಿಗೆ ಪ್ರಾಣ ಬೆದರಿಕೆ:**

ರಿಚ್ಚಿ ಸಿನಿಮಾ ಚಿತ್ರೀಕರಣ ಮುಗಿದ ಬಳಿಕ ಬಾಕಿ ಹಣದ ಚೆಕ್ ನೀಡಿದ್ದು, ಅ ದು ಬೌನ್ಸ್ ಆಗಿತ್ತು. ಅದನ್ನು ಪ್ರಶ್ನಿಸಿ ನನ್ನ ಮೊಬೈಲ್ ಸಂಖ್ಯೆ ಇರುವ ಒಪ್ಪಂದದ ಪತ್ರವನ್ನು



ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರಿಂದ ಹತ್ತಾರು ಮಂದಿ ಕರೆ ಮಾಡಿ ಬೆದರಿಕೆ ಹಾಕಿದ್ದಾರೆ. ಹೀಗಾಗಿ ನಾನು ಸಿನಿಮಾ ಪ್ರಚಾರಕ್ಕೆ ನಿರಾಕರಿಸಿದಾಗ ನನಗೂ ಮತ್ತು ನನ್ನ ತಾಯಿಗೂ ಪ್ರಾಣ ಬೆದರಿಕೆ ಹಾಕಿದ್ದಾನೆ. ಈ ಮಧ್ಯೆ 2025ರ ಸೆ.17ರಂದು ಮದ್ಯದ ಅಮಲಿನಲ್ಲಿ ಕರೆ ಮಾಡಿ, ನನ್ನ ತಾಯಿ ಹಾಗೂ ನನಗೆ ಪ್ರಾಣ ಬೆದರಿಕೆ ಹಾಕಿದ್ದಲ್ಲದೆ, ಕೆಲವು ರೌಡಿಗಳನ್ನು ನನ್ನ ಹಿಂದೆ ಕಳುಹಿಸಿ ಹೆದರಿಸಿದ್ದಾರೆ. ಹೀಗಾಗಿ ನನ್ನ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ,

ತಾಯಿ, ನನಗೆ ಪ್ರಾಣ ಬೆದರಿಕೆ ಹಾಕಿದ್ದಲ್ಲದೆ, ಹಣ ಪಾವತಿಸದೆ ವಂಚಿಸಿದ್ದಾನೆ ಎಂದು ಆರೋಪಿಸಿ ಹೇಮಂತ್ ಕುಮಾರ್ ವಿರುದ್ಧ ನಟಿ ದೂರು ನೀಡಿದ್ದರು.

# ಕೋಲ್ಡ್ರಿಫ್ ಸಿರಪ್ ಗೆ ಮತ್ತಿಬ್ಬರು ಮಕ್ಕಳು ಬಲಿ



ಚಿಂದ್ವಾರ: ಅ.7: ಮಧ್ಯಪ್ರದೇಶದ ಚಿಂದ್ವಾರದಲ್ಲಿ ಕಲುಷಿತ ಕೆಮ್ಮಿನ ಸಿರಪ್ ಸೇವಿಸಿದ ನಂತರ ಮಂಗಳವಾರ ಮತ್ತೆ ಇಬ್ಬರು ಮಕ್ಕಳು ಸಾವನ್ನಪ್ಪಿದ್ದು, ಜಿಲ್ಲೆಯ ಸಾವಿನ ಸಂಖ್ಯೆ 16ಕ್ಕೆ ಏರಿಕೆ–ಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

"ಇಂದು ಮತ್ತೆ ಇಬ್ಬರು ಮಕ್ಕಳ ಸಾವು ವರದಿಯಾಗಿದೆ. ಜಿಲ್ಲೆಯಲ್ಲಿ ಇಲ್ಲಿಯವರೆಗೆ 16 ಮಕ್ಕಳು ಸಾವನ್ನಪ್ಪಿದ್ದಾರೆ" ಎಂದು ಚಿಂದ್ವಾರ ಹೆಚ್ಚುವರಿ ಕಲೆಕ್ಟರ್ ಧೀರೇಂದ್ರ ಸಿಂಗ್ ಹೇಳಿದ್ದಾರೆ.

ಇದಕ್ಕೂ ಮೊದಲು, ಕೋಲ್ಡ್ರಿಫ್ ಎಂಬ ಕೆಮ್ಮಿನ ಸಿರಪ್

ಸೇವಿಸಿದ್ದ ಚಿಂದ್ವಾರದ 14 ಮಕ್ಕಳ ಸಾವನ್ನು ರಾಜ್ಯ ಸರ್ಕಾರ ದೃಢಪಡಿಸಿತ್ತು.

ಜಿಲ್ಲೆಯ ಜುನ್ನಾರ್ಡಿಯೊ ನಿವಾಸಿ ಜಯುಷಾ ಯದುವಂಶಿ(2) ಮಂಗಳವಾರ

ನಾಗ್ಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದೆ. ಚಿಂದ್ವಾರದ ಇನ್ನೂ ಆರು ಮಕ್ಕಳು ನಾಗ್ಪುರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ

ಪಡೆಯುತ್ತಿದ್ದಾರೆ ಮತ್ತು ಅವರಲ್ಲಿ ಐದು ಮಕ್ಕಳ ಸ್ಥಿತಿ ಗಂಭೀರವಾಗಿದೆ ಎಂದು ಹೆಚ್ಚುವರಿ ಕಲೆಕ್ಟರ್ ತಿಳಿಸಿದ್ದಾರೆ.

ಟಾಮಿಯಾ ಬ್ಲಾಕ್

ನ ಭರಿಯಾಧಾನ ಗ್ರಾಮದ ನಿವಾಸಿಯಾದ ಎರಡೂವರೆ ವರ್ಷದ ಧನಿ ಡೆಹರಿಯಾ ಎಂಬ ಮಗು ಸೋಮವಾರ ನಾಗ್ಪುರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸಾವನ್ನಪ್ಪಿದ್ದಳು.

ವೈದ್ಯರು ಸೂಚಿಸಿದ ಕೋಲ್ಡ್ ಸಿರಪ್ ಸೇವಿಸಿದ ನಂತರ ಆಕೆಯ ಆರೋಗ್ಯ ಹದಗೆಟ್ಟಿದೆ

ಮತ್ತು ಆಕೆಯ ಮೂತ್ರಪಿಂಡಗಳು ವಿಫಲವಾಗಿವೆ ಎಂದು ಬಾಲಕಿಯ ಕುಟುಂಬ ಸದಸ್ಯರು ತಿಳಿಸಿದ್ದಾರೆ.

# ಅಕ್ಟೋಬರ್ 18 ರವರೆಗೆ ರಜೆ: ಪಾಟೀಲ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಅ.7: ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ದಸರಾ ರಜೆಯನ್ನು ವಿಸ್ತರಿಸಲಾಗಿದ್ದು ಸರಕಾರದ ಆದೇಶದಂತೆ ಅಕ್ಟೋಬರ್ 18 ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ ಹೇಳಿದ್ದಾರೆ. ಇದೇ ತಿಂಗಳು ಅಕ್ಟೋಬರ್ 7ರಿಂದ ದಸರಾ ಯೋಜನೆ ನಂತರ ಶಾಲೆ ಆರಂಭಗೊಳ್ಳಲಿದೆ ಎಂದು ಸರ್ಕಾರ ಆದೇಶಿಸಿದ್ದು, ಆದರೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಕರ್ನಾಟಕ ರಾಜ್ಯದ ನಾಗರಿಕರ ಸಾಮಾಜಕ ಮತ್ತು ಶಿಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆಯನ್ನು ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ದಸರಾ ರಜೆ ಅವಧಿಯನ್ನು ವಿಸ್ತರಿಸಿ ಮಂಗಳವಾರ ಹೊರಡಿಸಿದ ಆದೇಶದಲ್ಲಿ ಅಕ್ಟೋಬರ್ 18 ರವರೆಗೆ ರಜೆ ವಿಸ್ತರಣೆ ಮಾಡಿರುವದಾಗಿ ಆದೇಶ ಮಾಡಿರುತ್ತದೆ ಆದ್ದರಿಂದ ಈ ಆದೇಶದ ಪ್ರಕಾರ ಜಿಲ್ಲೆಯಾದ್ಯಂತ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಅಕ್ಟೋಬರ್ 18ರವರೆಗೆ ರಜೆ ಮುಂದುವರೆಯಲಿದೆ ಎಂದು ಪ್ರಕಟಣೆಗೆ ತಿಳಿಸಿರುತ್ತಾರೆ.

# ಶ್ರೀಗೌರಿ ಹಬ್ಬ : ಬಾಲೆ ಯುವತಿಯರ ಸಂಭ್ರಮದ ಹಬ್ಬ

ಕೊಪ್ಪಳ:ಅ.7:ಸೀಗೆ ಹುಣ್ಣಿಮೆಯ ದಿನ, ಶ್ರೀಗೌರಿ ಹಬ್ಬವನ್ನು ಬಾಲೆಯರು ಯುವತಿಯರು , ಬಹು ಅರ್ಥಪೂರ್ಣ ಹಾಗೂ ಸಂಭ್ರಮದಿಂದ ಆಚರಿಸುವರು.

ನಿಗದಿತ ಸ್ಥಳಗಳಲ್ಲಿ ಹುಣ್ಣಿಮೆಯಂದು , ಗೌರಿ ಮೂರ್ತಿ ಪ್ರತಿಷ್ಠಾಪಿಸಿ ಆರಾಧಿಸಲಾಗುತ್ತದೆ. ಒಂದೇ ದಿನಕ್ಕೆ ಆರಾಧನೆಗೆ ಸೀಮಿತವಾಗುವ ಬಾಲೆಯರ ಹಬ್ಬವನ್ನು " ಸೀಗೆ ಹುಣ್ಣಿಮೆ "ಸಣ್ಣ ಗೌರಿ ಹಬ್ಬ ಎಂದು ಕರೆಯೋ ಪ್ರತೀತಿ ಇದೆ. ಸೀಗೆ ಹುಣ್ಣಿಮೆ ರೈತರ ಹಬ್ಬವೆಂದು ಕರೆಯಲಾಗುತ್ತದೆ, , ಅಂತೆ–ಯೇ ಬಾಲೆಯರು ಸಕ್ಕರೆ ಆರತಿ ಬೆಳಗುವ ಬಾಲೆಯರ ಹಬ್ಬ ಸಣ್ಣಗೌರಿ ಹಬ್ಬವೆಂದಲೂ ಕರೆಯುತ್ತಾರೆ. ಸೀಗೆ ಹುಣ್ಣಿಮೆ ಅಥವಾ ಸಣ್ಣ ಗೌರಿ ಹಬ್ಬ ಬಂತೆಂದರೆ ಸಾಕು, ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಹೆಂಗಳೆಯರಲ್ಲಿ ಸಂಭ್ರಮ–ಸಡಗರ ಗರಿಗೆದರುತ್ತದೆ.


ದಸರಾ ಹಬ್ಬದ ಬನ್ನಿ ಮುಡಿದಾಕ್ಷಣ ಪ್ರಾರಂಭವಾಗುವ ಸಣ್ಣ ಗೌರಿ ಹಬ್ಬ, ಗ್ರಾಮೀಣ ಪ್ರದೇಶಗಳಲ್ಲಿ ಬಾಲೆಯರು. ವಾರಪೂರ್ಣ ಹೊಸ ಸೀರೆ, ಸಾಂಪ್ರದಾಯಿಕ ಉಡುಪು ಧರಿಸಿ.

ವಾರ ಪೂರ್ತಿ ಗೌರಿ ಮಕ್ಕಳಾಗಿ ಸಂಭ್ರಮಿಸುವ, ಬಹು ಸಂತಸದಿಂದ ನಲಿದಾಡುವ ಸಣ್ಣ ಗೌರಿ ಹುಣ್ಣಿಮೆಯಲ್ಲಿ. ಧಾರ್ಮಿಕ ಹಾಗೂ ಸಾಂಪ್ರದಾಯಿಕ ಜಾನಪದೀಯ ನೆಲೆಗಟ್ಟಿನಲ್ಲಿ ಆಚರಿಸುವ ಮೂಲಕ, ಬಾಲೆಯರು ಸಂಭ್ರಮೋತ್ಸಾಹದಲ್ಲಿ ಮಿಂದೇಳುವುದನ್ನು ಕಣ್ತುಂಬಿಕೊಳ್ಳುವುದೇ ಅಧ್ಭುತವಾಗಿದೆ.

**ಸಕ್ಕರೆ ಆರತಿ ಗೊಂಬೆ ತಯಾರಿ:**

ಗೊಂಬೆಗಳ ತಯಾರಿಕೆ ಕಲೆ ತಕ್ಷಣಕ್ಕೆ ಸಿದ್ಧಿಸುವುದು ವಿರಳ, ಇದಕ್ಕೆ ಅಪಾರ ಅನುಭವದ ಅಗತ್ಯವಿದೆ. ಸಕ್ಕರೆ ಪಾಕ ತಯಾರಿಕೆ ವಿಧಾನದಲ್ಲಿ , ಮೈಮರೆತರೆ ಎಲ್ಲವೂ ನಾಶವಾಗಿ ಬಿಡುವ ಆತಂಕವೇ ಹೆಚ್ಚು.

ಸಾಮಾನ್ಯವಾಗಿ ಜನರಲ್ಲಿರುವ ಭಕ್ತಿ, ಭಾವನೆಗಳಿಗೆ ಸ್ಪಂದಿಸುವ ಇಚ್ಛೆಯಿಂದ ಶಿವ, ಪಾರ್ವತಿ, ಒಂಟೆ, ಆನೆ, ರಥ, ಅರ್ಜುನನ ಬಿಲ್ಲು, ಮಂಟಪ, ಆಂಜನೇಯ, ಬಸವಣ್ಣ ಸೇರಿದಂತೆ ವಿವಿಧ ರೀತಿಯ ಪಶುಪಕ್ಷಿಗಳು ಹೀಗೆ ಅನೇಕ ಕಲಾಕೃತಿಗಳಲ್ಲಿ ವಿಧ ವಿಧದ ಬಣ್ಣಗಳಲ್ಲಿ ಮೈದಳೆದಿರುವ ಗೊಂಬೆಗಳನ್ನು ನೋಡುವುದು, ಸವಿಯುವುದೇ ಆನಂದ ತರಿಸುತ್ತದೆ. ಬಾಯೊಳಗೆ ಇಟ್ಟುಕೊಂಡ ಮರುಕ್ಷಣವೇ ಕರಗಿ ನೀರಾಗುವ ಸಕ್ಕರೆ ಗೊಂಬೆಗಳ ರುಚಿಯೇ ಬೇರೆ. ಗೌರಿ ಹುಣ್ಣಿಮೆಯ ಸಂದರ್ಭದಲ್ಲಿ ಮಾತ್ರ ಈ ಗೊಂಬೆಗಳನ್ನು ತಿಂದು ಆಸೆ ಈಡೇರಿಸಿಕೊಳ್ಳಬೇಕು. ಮತ್ತೆ



ಮತ್ತೆ ಸಕ್ಕರೆ ಗೊಂಬೆಗಳ ರುಚಿ ನಮ್ಮನ್ನು ಕಾಡಿದರೂ ಅವು ಇನ್ನುಳಿದ ಅವಧಿಯಲ್ಲಿ ಸಿಗುವುದಿಲ್ಲ.

ಈ ಗೊಂಬೆಗಳ ವೈಶಿಷ್ಟ್ಯವೆಂದರೆ ಕನ್ಯೆ ಕಾಯಂ ಮಾಡಿಕೊಂಡ ವರನ ಮನೆಯವರು, ಕನ್ಯೆಯ ಮನೆಗೆ ಗೌರಿ ಹುಣ್ಣಿಮೆಯಂದು ದಂಡಿಯ ಜತೆಗೆ ಸಕ್ಕರೆ ಗೊಂಬೆಗಳನ್ನು ತೆಗೆದುಕೊಂಡು ಬರುವ ಸಂಪ್ರದಾಯವಿದೆ.

**ಸವಿತಾ ಶೇಖರಯ್ಯ**
**ಗಿಣಿಗೇರಿ ಮಂಡಲ ಗೇರಿ**

# ವಾಲ್ಮೀಕಿಯವರ ಆದರ್ಶಗಳು ಇಂದಿಗೂ ಪ್ರಸ್ತುತ : ತಿಮ್ಮಾಪೂರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಅ.07:ಮಹರ್ಷಿ ವಾಲ್ಮೀಕಿ ರಚಿಸಿದ ಮಹಾಕಾವ್ಯ ರಾಮಾಯಣದಲ್ಲಿ ಬರುವಂತಹ ಆದರ್ಶ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದಲ್ಲಿರುವ ಮಹರ್ಷಿ ವಾಲ್ಮೀಕಿ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಮಾತನಾಡಿದ ಅವರು ಮಹಾಕಾವ್ಯ ರಾಮಾಯಣದಲ್ಲಿ ಬರುವಂತಹ ಸಹೋದರರ ಪ್ರೀತಿ, ತಂದೆ–ತಾಯಿಯರ ಬಗ್ಗೆ ಇರುವ ಗೌರವ, ಗುರುಶಿಷ್ಯರ ಸಂಬಂಧ ಸೇರಿದಂತೆ ಹತ್ತು ಹಲವು ಮೌಲ್ಯಗಳು ಇಂದಿಗೂ ಪ್ರಚಲಿತದಲ್ಲಿವೆ ಎಂದರು.

ಮನುಷ್ಯರನ್ನು ಮನುಷ್ಯರಂತೆ ಕಾಣುವ ಭಾವನೆಗಳು ಬರಬೇಕಿದೆ. ಅಂದಿನ ಮಹಾಪುರುಷರು ಈ ಭೂಮಿಗೆ ಬರದೇ ಇದ್ದರೆ ನಮ್ಮ ಬದುಕಿನ ಚಿತ್ರ ಹೇಗೆ ಇರುತ್ತದೆ ಎಂಬುದನ್ನು ಊಹೆ ಮಾಡಲು ಸಾದ್ಯವಾಗುತ್ತಿರಲಿಲ್ಲವೆಂದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಲಗಲಿ ಬೇಡರ ಬ್ರಿಟೀಷರ ವಿರುದ್ದ ಬಂಡಾಯದ ಕಹಳೆ ಮೊಳಗಿಸಿರುವುದು ಇಂದಿಗೂ ರಾಷ್ಟ್ರ, ರಾಜ್ಯ ಹಾಗೂ ಬಾಗಲಕೋಟೆ ಇತಿಹಾಸದಲ್ಲಿ ನೆನಪಿಸಿಕೊಳ್ಳುವ ಸಂಗತಿಯಾಗಿದೆ. ಇದೇ ಅಕ್ಟೋಬರ 17 ರಂದು ಮುಧೋಳದಲ್ಲಿ ಜಿಡಗಣ್ಣ ಬಾಳಣ್ಣನವರ ಮೂರ್ತಿಯ ಪ್ರತಿಷ್ಟಾಪನೆಯನ್ನು ಮಾಡಲಾಗುತ್ತಿದೆ. ಸಚಿವರಾದ ಸತೀಶ ಜಾರಕಿಹೊಳೆ ಸಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ತಿಳಿಸುವ ಕೆಲಸ ಮಹರ್ಷಿ ವಾಲ್ಮೀಕಿಯವರು ಮಾಡಿದ್ದಾರೆ. ನಮ್ಮ ಜೀವನದಲ್ಲಿ ಹಲವು ಸಂದರ್ಭಗಳಲ್ಲಿ ತಪ್ಪುಗಳನ್ನು ಮಾಡುವುದು ಸಹಜ. ಆ ತಪ್ಪುಗಳನ್ನು ತಿದ್ದಿಕೊಂಡು ಮಾನವರಾಗಿ ಬಾಳಿ ಜೀವನ ಸಾರ್ಥಕ ಪಡಿಸಿಕೊಳ್ಳಬೇಕಾದರೆ ರಾಯಾಯಣದಲ್ಲಿ ಬರುವಂತಹ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಾಧ್ಯವೆಂದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ ಜಗತ್ತಿಗೆ ರಾಮಾಯಣದಂತಹ ಮಹಾನ್ ಗ್ರಂಥವನ್ನು ಕೊಟ್ಟವರು ವಾಲ್ಮೀಕಿ. ಭಾರತ ದೇಶ ಸಾದು ಸಂತರು, ಋಷಿ, ಮುನಿಗಳು, ಮಹರ್ಷಿಗಳು ಹುಟ್ಟಿದಂತ ಭೂಮಿಯಾಗಿದ್ದು, ಈ ಭೂಮಿಯಲ್ಲಿ ಮೇಲು–ಕೀಳು ಎಂಬುದಿಲ್ಲ. ಇದನ್ನು ಹೋಗಲಾಡಿಸುವ ಕಾರ್ಯವಾಗಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎ.ವಾಯ್.ಮೇಟಿ ಮಾತನಾಡಿ ವಾಲ್ಮೀಕಿಯವರ ತತ್ವಸಿದ್ದಾಂತಗಳನ್ನು ಅಳವಡಿಸಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಸಮುದಾಯದವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಸಾಮಾಜಿಕವಾಗಿ, ಆರ್ಥಿಕ ಮತ್ತು ರಾಜಕೀಯವಾಗಿ ಮುಂದೆ ಬರಬೇಕು ಎಂದರು. ಉಪನ್ಯಾಸಕರಾಗಿ ಆಗಮಿಸಿದ್ದ ಧಾರವಾಡದ ವಿದ್ಯಾರಣ್ಯ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಶರಣಮ್ಮ ಗೊರೇಬಾಳ ಅವರು ಮಾತನಾಡಿ ರತ್ನಾಕರ ಮಹರ್ಷಿಯಾದ ಪರಿಯನ್ನು ತಿಳಿಸುತ್ತಾ, ಬದುಕಿಗೆ ಬೇಕಾದ ಎಲ್ಲ ಮಾನವೀಯ ಮೌಲ್ಯಗಳು ರಾಮಾಯಣದಂತಹ ಗ್ರಂಥದಲ್ಲಿ ಒಳಗೊಂಡಿದೆ ಎಂದರು. ನಾಟಕ, ನೃತ್ಯದ ಕಲ್ಪಣೆ ಸಹ ರಾಮಾಯಣದಿಂದ ಬಂದಿದ್ದು ಎಂದರು.

ಈ ಸಂದರ್ಭದಲ್ಲಿ ಪ್ರತಿಭಾನ್ವಿತ ಪರಿಶಿಷ್ಟಪಂಗಡದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಸವಿತಾ ಲೆಂಕನ್ನವರ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನದ ಅಧ್ಯಕ್ಷ ಎಸ್.ಎಂ.ರಾಂಪೂರ ಸೇರಿದಂತೆ ಸಮುದಾಯದ ಮುಖಂಡರಾದ ದ್ಯಾಮಣ್ಣ ಗಾಳಿ, ಮಲ್ಲಿಕಾರ್ಜುನ ಸುರಪುರ, ಸುಭಾಸ ಗಸ್ತಿ, ಶಂಭುಗೌಡ ಪಾಟೀಲ ಹಾಗೂ ಇತರರು ಉಪಸ್ಥಿತರಿದ್ದರು.

**ಪ್ರತಿಭಾ ಪುರಸ್ಕಾರ**

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಪ್ರೀತಿ ರಮೇಶ ಭಾವಿಕಟ್ಟಿಗೆ ಜಿಡಗಣ್ಣ ಮತ್ತು ಬಾಲಣ್ಣ ಅವರ ಹೆಸರಿನಲ್ಲಿ ನೀಡುವ ಪ್ರೋತ್ಸಾಹಧನದ ಚೆಕ್‌ನ್ನು ವಿತರಿಸಿ ಪುರಸ್ಕರಿಸಲಾಯಿತು.

**ವಾಲ್ಮೀಕಿಯವರ ಭಾವಚಿತ್ರದ ಅದ್ದೂರಿ ಮೆರವಣಿಗೆ**

ಕಾರ್ಯಕ್ರಮದ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರು ಮೆರವಣಿಗೆಗೆ ಚಾಲನೆ ನೀಡಿದರು. ವಿವಿಧ ಜಾನಪದ ಕಲಾತಂಡಗೊಂದಿಗೆ ಹೊರಟ ಮೆರವಣಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ಎಲ್.ಐ.ಸಿ ಕಚೇರಿ, ಎಸ್.ಪಿ ಕಚೇರಿ ಮುಖಾಂತರ ವಾಲ್ಮೀಕಿ ಭವನಕ್ಕೆ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ಪೂರ್ಣಕುಂಬ ಹೊತ್ತ ಮಹಿಳೆಯರು ಆಕರ್ಷಣೀಯ ಕೇಂದ್ರ ಬಿಂದು ಆಗಿದ್ದರು. ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಮುದಾಯ ಭಾಂದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ರಸ್ತೆ ಅಪಘಾತ–3 ಸಾವು 21 ಮಂದಿಗೆ ಗಾಯ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.7:ಬೆಂಗಳೂರು ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಹೆದ್ದಾರಿ ರಸ್ತೆಯಲ್ಲಿನ ಕಲ್ಕೆರೇ ಗ್ರಾಮದ ಸಮೀಪ ಸೋಮವಾರ ರಾತ್ರಿ ಟೆಂಪೋ, ಕ್ಯೋಸರ್ ಹಾಗೂ ಅಂಬ್ಯೂಲೆನ್ಸ್ ನಡುವೆ ನಡೆದ ರಸ್ತೆ ಅಪಘಾತದಲ್ಲಿ ಮೂರು ಮಂದಿ ಸಾವನ್ನಪ್ಪಿದ್ದು ಇಪ್ಪತ್ತೊಂದುಕ್ಕೂ ಹೆಚ್ಚು ಮಂದಿ ಗಾಯಗಳಿಂದ ವಿವಿಧ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಅಡುಗೆ ಮಾಡಲು ಬಂದಿದ್ದ ಬಾಣಸಿಗರು ಮತ್ತು ಸಹಾಯಕರು ಕೆಲಸ ಮುಗಿಸಿ ಕೊಂಡು ಟೆಂಪುದಲ್ಲಿ ವಾಪಾಸ್ ಹೋಗುತ್ತಿದ್ದ ಸಂದರ್ಭಧಲ್ಲಿ ಟೆಂಪು ಹಾಗೂ ಈಷರ್ ನಡುವೆ ಅಪಘಾತ ಸಂಭವಿಸಿದೆ. ಟೆಂಪೋ ಹಾಗೂ ಅಂಬ್ಯೂಲೆನ್ಸ್ ಚಾಲಕರು ಇಬ್ಬರು ಸ್ಥಳದಲ್ಲಿ ಹಾಗೂ ಟೆಂಪೊದಲ್ಲಿದ್ದ ಮತ್ತೊಬ್ಬರು ಬಂಗಾರ ಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಸುಮಾರು ಇಪ್ಪತ್ತೊಂದುಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿದ್ದು ಬಂಗಾರಪೇಟೆ, ಕೋಲಾರ ಹಾಗೂ ಕೆ.ಜಿ.ಎಫ್ ಆಸ್ಪತ್ರೆಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರು, ಚೆನ್ನೈ ಕಾರಿಡಾರ್ ರಸ್ತೆಯಲ್ಲಿ ಬಂಗಾರಪೇಟೆ ತಾಲ್ಲೂಕಿನ ಕಲ್ಕೆರೆ ಗ್ರಾಮದ ಬಳಿ ಈ ದುರಂತ ಸಂಭವಿಸಿದೆ.

ಸೋಮವಾರ ಎಕ್ಸ್‌ಪ್ರೆಸ್ ವೇನಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರಿಗೆ ಅಡುಗೆ ಮಾಡಲು ಬಂದಿದ್ದ ಬೆಂಗಳೂರಿನ ಎಸ್.ಕೆ.ಸಿ. ಕ್ಯಾಟರಿಂಗ್ ಸಿಬ್ಬಂದಿ ಟೆಂಪೋ ಟ್ರಾವೆಲರ್ ವಾಹನದಲ್ಲಿ ಸಂಜೆ ಬೆಂಗಳೂರಿಗೆ ವಾಪಾಸ್ ಹೋಗುವಾಗ ಈ ದುರ್ಘಟನೆ ನಡೆದಿದ್ದು, ಮೃತರನ್ನು ಶಿವರಾಂ. ಆಶೋಕ್ ಮತ್ತು ವಿಕ್ರಂಪಾಲ್ ಎಂದು ಗುರುತಿಸಲಾಗಿದೆ.

11 ಮಂದಿ ಗಾಯಾಳುಗಳನ್ನು ಕೆ.ಜಿ.ಎಫ್.ಹಾಗೂ 10 ಮಂದಿಯನ್ನು ಬಂಗಾರಪೇಟೆ ಆಸ್ಪತ್ರೆಯಲ್ಲಿ ದಾಖಲು ಮಾಡಿ ಪ್ರಥಮ ಚಿಕಿತ್ಸೆ ನೀಡಲಾಗಿದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೆಲವರನ್ನು ಕೋಲಾರ ಮತ್ತು ಹೊಸಕೋಟೆ ಆಸ್ಪತ್ರೆಗೆ ರವಾನಿಸಲಾಗಿದೆ.

ಅಡುಗೆ ಕಾರ್ಯಕ್ರಮ ಮುಗಿಸಿ ಕೊಂಡು ಸೋಮವಾರ ಸಂಜೆ 7 ಗಂಟೆಗೆ ಕ್ಯಾಟರಿಂಗ್ ಸಿಬ್ಬಂದಿಗಳು ಬೆಂಗಳೂರು ಮಾರ್ಗದ ಕಡೆ ಹೋಗುವಾಗ ಕಾರಿಡಾರ್ ರಸ್ತೆಯ ನಡುವೆ ಅವೈಜ್ಞಾನಿಕವಾಗಿ ಬಿಡಲಾಗಿದ್ದ ಜಾಗದಲ್ಲಿ ಏಕಾಏಕಿ ಅತಿ ವೇಗದಿಂದ ಯೂ ಟರ್ನ್ ತೆಗೆದು ಕೊಂಡು ಹಿಂದಿನಿಂದ ಬಂದ ಕ್ಯಾಂಟರ್ ವಾಹನವು ಚಾಲಕನ ನಿಯಂತ್ರಣ ತಪ್ಪಿ ಬಾಣಸಿರಿದ್ದ ವಾಹನಕ್ಕೆ ರಭಸದಿಂದ ಡಿಕ್ಕಿ ಹೊಡೆದ ಪರಿಣಾಮ ವಾಹನವು ರಸ್ತೆಯಲ್ಲಿ ಪಲ್ಟಿ ಹೊಡೆದು ಬಿತ್ತು ಎನ್ನಲಾಗಿದೆ. ಘಟನೆ ಸ್ಥಳಕ್ಕೆ ಕೆ.ಜಿ.ಎಫ್ ಎಸ್.ಪಿ. ಹಾಗೂ ಬಂಗಾರಪೇಟೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪ್ರಕರಣ ದಾಖಲಿಸಿ ಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ. ಟೋಲ್ ಬಳಿ ಇದ್ದ 5–6 ಮಂದಿ ಹೋಂಗಾರ್ಡ್ ದ್ವಿಚಕ್ರದಲ್ಲಿ ಸ್ಥಳಕ್ಕೆ ಅಗಮಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.